Sri S. SIVAPPA.—Sir, we are more interested in upholding parliamentary conventions. After all, parliamentary democracy is built on healthy conventions. If it is a convention in the Parliament and other Legislatures, that the demand concerning the Secretariat is not to be discussed in the open House, I am one to abide by that. It concerns healthy traditions elsewhere also. But here members feel that the amount provided for the Secretariat probably is more—you have already suggested that it can be discussed in your chambers. I suggest straightaway in the interests of convention—let there be no discussion in the Chambers also. What is the use of having a discussion in the Chambers also when it does not solve the problem? If it is in the interests of creating healthy conventions, let us not discuss it. You have understood the minds of many of the speakers here.

Mr. SPEAKER.—Discuss what and where?

Sri S. SIVAPPA.—I came late and I do not know what happened.

Mr. SPEAKER.—Such of the members as are desirous may come and discuss with me.

Sri H. R. KESAVA MURTHY.—Instead of discussing in your Chambers, why not we discuss the subject in a secret session?

Mr. SPEAKER.—Has he studied the position of a secret session? Would he kindly state what a secret session is?

Sri GOPAL SALENNA (Mudabidri).—Sir, I am also responsible to my constituents. You solve my problem. I have got to face my electorate tomorrow.

Sri K. LAKKAPPA.—(Hebbur) A secret session is one in which the reporters are not present. That is a secret session.

Sri ANNARAO GANAMUKHI (Afzalpur).—We would like to know whether you are in a position to exercise effective control over the Budget we are sanctioning for the other House. When we are sanctioning the Government Budget, we can have some control. But, as we understand, both the Houses of the Legislature are functioning independently. They have got separate rules of procedure. You are independent of each other. You have got equal status. In that capacity, I do not think, Sir, that you would be able to exercise any control over the other House or its officers.

Mr. SPEAKER.—What is the suggestion of the Hon'ble Member? What shall we do?

Sri ANNA RAO GANAMUKHI.—We want to know whether you are in a position to exercise that control. If that control can be exercised because some of the members raised the question...

Mr. SPEAKER.—The Speaker is in a position. There is no mid-way.

Sri ANNA RAO GANAMUKHI.—Sir, you are supreme so far as this House is concerned. Your command is obeyed as far as this House is concerned. But, as far as the other House is concerned, I am doubtful whether you can exercise that control. Therefore, the Hon'ble Member who was speaking just before me was entertaining some doubts whether the amounts are being spent in the manner in which they ought to have been spent. There lies the crux of the problem. You have equal status. I am doubtful whether you can exercise any effective control over the other House or the Chairman of the other House.

Sri K. LAKKAPPA.—Sir, discussion may be allowed with respect to the Legislature Secretariat. The scope of the debate may be restricted to unnecessary expenditure and to that extent we may be allowed to discuss on the floor of the House.

Sri M. V. RAMA RAO.—I want to intervene to say just one or two things. A suggestion has been made that this House should have the opportunity during the debate on the discussion in respect of Demand for expenses of the Legislature......

(*Interruption*)

Mr. SPEAKER.—There should be no interjections. If the Hon'ble Member wants, I will give him another opportunity. I am prepared to devote the rest of the time for discussion on this subject and put the Demand to the vote of the House at the appropriate time.

Sri M. V. RAMA RAO.—My mental processes are somewhat slow and I do not claim to be able to compete with the mental agility of some of the Hon'ble Members. I shall be grateful if they allow me to complete my sentences in my own way.

I was saying that a suggestion has been made that the scope of the debate should include reference to the expenditure incurred for the travelling allowances claimed or paid for journeys performed by the Chairman of the other House, in so far as I have understood from the observations made.

2-30 P. M.

Whether we should discuss it and set up a precedent which the other House if it chooses, may follow and seek to discuss similar matters pertaining to the Presiding Officer of this House, is a matter on which the Hon'ble Members of this House will surely want to reflect. I, as a member belonging to the other House and interested in upholding the dignity of the officer who presides over the other House, would suggest that we as members of the legislature, whether we happen to belong

to this House or to the other House, should impose a self-denying ordinance on ourselves to restrict the scope of the debate to what ought to be legitimately discussed and to restrict our desire for investigation into other matters within reasonable bounds and if they see objection to comply with the suggestion you made that matters which they considered important as pertaining to the way in which moneys are spent over the Legislature or of the secretariat of the legislature or for the establishment pertaining to the legislature, can be discussed with you, not necessarily on the floor of this House but in your chamber. That is a matter which is for the Hon'ble Members to consider and do what they consider proper. But, I would once again suggest to every Hon'ble Member of this House that we should not by seeking to bring in a journey or a trip made or performed by the Presiding Officer of the other House set up the practice which it would be possible for the other House to follow as I said, and seek to discuss what has been done or said by the Speaker who presides over this House. At the time the Presiding Officer of either House is elected, I am entitled to assume and I am sure every hon'ble member will agree, it is generally assumed that the Presiding Officer will do everything possible for him to uphold the dignity of the office to which he is elected and will conduct himself accordingly. And if any hon'ble member has reason to feel that any deviation, however slight, has been made it is a matter which, as you have suggested, should be brought to your notice and discussed with you and if necessary with anybody else. Therefore I suggest that what you have suggested might be seriously considered by the House and that hon'ble members would not want to discuss any thing pertaining to the Chairman of the Legislative Council.

†ಶ್ರೀ ಎಸ್. ಗೋಪಾಲ ಗೌಡ.—ಮಾನ್ಯ ರಾ ಸಚಿವರು ಹೇಳಿದ್ದನ್ನು ನಾನು ಕೇಳಿದೆ. ಈ ಮನೆಯಲ್ಲಿ ಈ ವಿಷಯಗಳಲ್ಲಿ ಸಾಧ್ಯವಾದಮಟ್ಟಿಗೆ ಚರ್ಚೆ ಮಾಡದಿರುವುದು ಒಳ್ಳೆಯದು; ಆ ರೀತಿ ಒಂದು ಸತ್ಸಂಪ್ರದಾಯವಿದೆ ಎಂದು ತಾವು ಹೇಳಿದಿರಿ. ಈ ಸಂದರ್ಭದಲ್ಲಿ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರಲು ಇಷ್ಟಪಡುತ್ತೇನೆ. ಬಜೆಟ್ಟಿನ ಇಂಟ್ರೊಡಕ್ಟರಿ ನೋಟ್‌ನಲ್ಲಿ ಈ ರೀತಿ ಇದೆ.

> Under Article 203 (1) of the Constitution of India, so much of the estimates of expeuditure as relates to expenditure declared to be "Charged" upon the Consolidated Fund of the State of Mysore shall not be submitted to the vote of the Legislative Assembly. This does not, however, prevent the discussion in the Legislative of any of these estimates.

ಆದುದರಿಂದ ಛಾರ್ಜ್ಡ್ ಐಟಂನ ಮೇಲೆ ಕೂಡ ಈ ಸಭೆ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ಸಂಪೂರ್ಣ ಹಕ್ಕನ್ನು ಹೊಂದಿದೆ.

ಇನ್ನೊಂದು ವಿಷಯವನ್ನು ಮಾನ್ಯ ಮಂತ್ರಿಗಳು ಪ್ರಸ್ತಾಪ ಮಾಡಿದರು. ಯಾವ ಅಧ್ಯಕ್ಷರಿಗೆ, ಪ್ರಿಸೈಡಿಂಗ್ ಆಫೀಸರಿಗೆ ಯಾವ ಕಾರ್ಯ ವಹಿಸಿದೆಯೋ ಅದನ್ನು ಬಿಟ್ಟು ಅವರು ಬೇರೆ ಕಾರ್ಯಕ್ರಮಗಳಲ್ಲಿ ತೊಡಗಿದರೆ ಅದನ್ನು ನಾವು ಅಧ್ಯಕ್ಷರ ಸಲಹೆಯ ಪ್ರಕಾರ ಪ್ರತ್ಯೇಕವಾಗಿ ಚರ್ಚೆ ಮಾಡಬಹುದು ಎಂದು ಹೇಳಿದರು. ಈ ಒಂದು ಅಭಿಪ್ರಾಯವನ್ನು, ಸಲಹೆಯನ್ನು ನಾವು ಒಪ್ಪಿಕೊಳ್ಳುವುದಾದರೆ ನಮ್ಮ ಕರ್ತವ್ಯವನ್ನು ನಿರ್ವಹಿಸಿದಂತಾಗುವುದಿಲ್ಲ ಎಂದು ನಾನು ಭಾವಿಸುತ್ತೇನೆ. ಏಕೆಂದರೆ ನಮಗೆ ಬಹಳ ಚೆನ್ನಾಗಿ ಗೊತ್ತಿದೆ, ಕೆಲವು ಸಲ ಅಲ್ಲ, ಬಹಳ ಸಲ ಇಂಥ ಅಕ್ರಮಗಳು, ಹಲವು ಇಂಥ ನಡವಳಿಕೆಗಳು ನಡೆದಿವೆ, ನಡೆಯುತ್ತಿವೆ, ಹಣ ಕೂಡ ಖರ್ಚಾಗುತ್ತಿದೆ,

(ಶ್ರೀ ಎಸ್. ಗೋಪಾಲ ಗೌಡ)

ಅಧಿಕಾರದ ದುರುಪಯೋಗ ಕೂಡ ಆಗಿದ್ದುಂಟು. ಇಂಥ ಸಂದರ್ಭಗಳಲ್ಲ ಈ ಸಭೆ ಏನು ಮಾಡಬೇಕು ? ಚರ್ಚೆ ಮಾಡಿದರೆ ಸಾಕೇ ಅಥವಾ ಶ್ರೀಮಾನ್ ಅಣ್ಣಾರಾಯರು ಹೇಳಿದ ಹಾಗೆ ಈ ಸಂದರ್ಭದಲ್ಲಿ ನಾವು ಕೊಡುವ ಹಣದ ಮೇಲೆ ಪರಿಣಾಮಕಾರಿಯಾದ ಹಿಡಿತವಿದೆಯೆ ಎಂಬುದನ್ನು ಯೋಚನೆ ಮಾಡಬೇಕು. ಆದರೆ ಕೆಲವು ಕೆಲಸಗಳಿಗೆ ಹೋದಾಗ ಟಿ. ಎ. ತೆಗೆದುಕೊಳ್ಳಬಹುದು ಎಂದು ಹೇಳಿದ್ದೀರಿ. ಅದು ಸದಸ್ಯರಿಗೆಲ್ಲಾ ಅನ್ವಯಿಸುತ್ತದೆಯೇ ? ನಮ್ಮ ಓಡಾಟಗಳಿಗೆ ಈ ಸಭೆ ಅಲೋಯನ್ಸ್ ಕೊಡುವುದಿಲ್ಲ. ಗೊತ್ತಾದ ಖರ್ಚನ್ನು ಮಾತ್ರ ಈ ಸಭೆಯಿಂದ ತೆಗೆದುಕೊಳ್ಳಬಹುದು. ವಿಶೇಷ ಸಂಪ್ರದಾಯವೇನಿದೆ ಎಂದು ಹಿಂದೆ ಒಂದು ಸಲ ಹೇಳಿದರು. ಹೋದ ವರ್ಷ ಈ ವಿಚಾರ ಬಂದಿತ್ತು. ನೀವು ಚರ್ಚೆ ಮಾಡೋಣ ಎಂದು ಹೇಳಿದಿರಿ. ಆದರೆ ಈ ವಿಚಾರದಲ್ಲಿ ನನ್ನ ಖಚಿತ ಅಭಿಪ್ರಾಯವೇನೆಂದರೆ ವೈಯುಕ್ತಿಕ ಅಪಾದನೆಯೇನೂ ಮಾಡದೆ ನಮ್ಮ ಅಭಿಪ್ರಾಯ, ಸಲಹೆ ಕೊಡುವುದಕ್ಕೆ ಯಾವ ಆತಂಕವೂ ಇರಬಾರದು ಎಂಬುದು.

Mr. SPEAKER.—I will deal with this so far as I can understand. Sri Anna Rao wanted to know whether I have any control over things that are likely to happen after the money is sanctioned. I do not know what made him feel like that because it is for the first time he is expressing it. He has never expressed so earlier. As to what exactly he has in mind I do not know. It would have been better if he had told me what he had in mind. That is why I asked him to meet me. So far as cut motions relating to this section are concerned, as in the previous years even this year I am not allowing according to conventions. So far as the debate is concerned as I said, I would love to meet any member and discuss it. So far as further debate is concerned, if necessary I will give a ruling. If any member desires to meet me I would certainly love to meet and discuss it with him. Therefore, the debate will go on and I will go to my chamber and if any member wants to come and discuss it with me, he may come. If anybody wants to discuss it with me I am quite prepared because I want their co-operation.

ಶ್ರೀ ಎಸ್. ಗೋಪಾಲ ಗೌಡ (ತೀರ್ಥಹಳ್ಳಿ).—ಸ್ವಾಮೀ, ನಾನು ಒಂದು ವಿಷಯವನ್ನು ಹೇಳುವುದನ್ನು ಮರೆತೆ. ತಾವು ಯಾವಾಗಲೂ ಮೇನ್ ಪಾರ್ಲಿಮೆಂಟರಿ ಪ್ರಾಕ್ಟೀಸು ಮತ್ತು ಇನ್ನಿತರ ರಿಪೋರ್ಟುಗಳ ಆಧಾರದ ಮೇಲೆ ನೋಡಿ ಇಲ್ಲಿಯೂ ಅದರಂತೆ ಅನುಸರಿಸಬೇಕೆಂದು ಹೇಳಿದರೆ ಅಲ್ಲಿಯ ಸನ್ನಿವೇಶಗಳಿಗೂ ಇಲ್ಲಿಯ ಸನ್ನಿವೇಶಗಳಿಗೂ ಬಹಳ ವ್ಯತ್ಯಾಸಗಳಿವೆ. ಅಲ್ಲಿ ರಾಜರು, ರಾಣಿಯವರು ಇದ್ದಾರೆ. ಹೌಸ್ ಆಫ್ ಲಾರ್ಡ್ಸ್ ಎನ್ನುವ ಸಭೆ ಆದ ಮೇಲೆ ಹೌಸ್ ಆಫ್ ಕಾಮನ್ಸ್ ಸಭೆ ಬರುತ್ತದೆ. ಅವರ ಖರ್ಚುಗಳನ್ನು ಅವರೇ ನೋಡಿಕೊಳ್ಳುತ್ತಿದ್ದರು ಮತ್ತು ಅದು ಸಭೆಗೆ ಚರ್ಚೆಗೂ ಬರುತ್ತಿರಲಿಲ್ಲ. ಇಲ್ಲಿ ಪಕ್ಷದ ರಾಜಕೀಯ ಇದೆ.

Mr. SPEAKER.—He may kindly stop at that.

ಶ್ರೀ ಎಸ್. ಗೋಪಾಲ ಗೌಡ.—ಇನ್ನೊಂದು ವಿಚಾರ ಇದೆ. ಪಂಜಾಬಿನಲ್ಲಿದ್ದ ಅಧ್ಯಕ್ಷರು ಇದೇ ತಾನೇ ರಾಜೀನಾಮೆ ಕೊಟ್ಟು ಹೋದರು. ಇಂತಹ ಒಳ ಕೆಲವು ಸನ್ನಿವೇಶಗಳನ್ನು ನಾವು ಈ ಹಣಕಾಸಿನ ವಿಷಯದ ಚರ್ಚೆಯನ್ನು ಮಾಡುವಾಗ ಗಮನದಲ್ಲಿಟ್ಟುಕೊಂಡು ತೀರ್ಮಾನ ಮಾಡುವುದೊಳ್ಳೆಯದು.

Mr. SPEAKER.—Resignations have taken place in the House of Commons also.

Sri ANNA RAO GANAMUKHI.—What was passing in my mind was Sri Muckkannappa's speech.........

Mr. SPEAKER.—I want Sri Anna Rao to come and meet me, if he can.

[MR. DEPUTY SPEAKER in the Chair.]

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮೀ, ಅಡ್ಮಿನಿಸ್ಟ್ರೇಷನ್ ಆಫ್ ಜಸ್ಟಿಸ್ ವಿಚಾರವಾಗಿ ನ್ಯಾಯಾಂಗ ಮಂತ್ರಿಗಳಲ್ಲಿ ಮೊದಲಿನಿಂದಲೂ ಹೇಳುತ್ತ ಬಂದಿದ್ದೇನೆ. ನ್ಯಾಯ ಖಾತೆಯಲ್ಲಿರುವ ಅಧಿಕಾರಿಗಳು ಸಾರ್ವತ್ರಿಕ ಚುನಾವಣೆಗಳಲ್ಲಿ ಕೈಹಾಕಿ ಬಿಟ್ಟರೆ ಅವರ ಮೇಲೆ ತಾವು ಯಾವ ತರಹದ ಎನ್‌ಕ್ವೈರಿ ಮಾಡಬಹುದು ಎಂದು ಕೇಳಿದಾಗ ಅದಕ್ಕೆ ನಿರ್ದಿಷ್ಟವಾದ ದೃಷ್ಟಾಂತಗಳನ್ನು ಹೇಳಬೇಕು ಎಂದು ಕೇಳಿದರೆ ಅದನ್ನೂ ಕೊಡುತ್ತೇವೆ; ಎಂದು ನಾನು ಕೊಟ್ಟಿದ್ದರೂ ಅಂತಹ ಒಬ್ಬರು ಮುನ್‌ಸೀಫರು ಮತ್ತು ಮ್ಯಾಜಿಸ್ಟ್ರೇಟರಾಗಿದ್ದವರನ್ನು ಈಗ ಸಿವಿಲ್ ಜಡ್ಜ್‌ಗಳನ್ನಾಗಿ ನೇಮಕ ಮಾಡಿ ಕೆಲಸ ಕೊಟ್ಟಿದ್ದಾರೆ. ಚುನಾವಣೆಯಲ್ಲಿ ಸರಕಾರದ ಅಧಿಕಾರಿಗಳು ಅದರಲ್ಲೂ ನ್ಯಾಯ ಖಾತೆಯಲ್ಲಿರುವವರು ಕೈ ಹಾಕಬಾರದು, ಕ್ಯಾನ್‌ವಾಸ್ ಮಾಡಬಾರದು ಎಂದು ಇದೆ. ಬೇಕಾದರೆ ತಮಗೆ ನಾಲ್ಕಾರು ಇನ್‌ಸ್ಟೆನ್ಸುಗಳನ್ನು ಆಮೇಲೆ ಕೊಡಿ ಎಂದರೆ ಕೊಡುತ್ತೇನೆ. ಇವೊತ್ತು ಕೂಡ ಇಲ್ಲಿ ವಿಧಾನಪರಿಷತ್ತಿಗೆ ಹಾಗೂ ರಾಜ್ಯ ಸಭೆಗೆ ಚುನಾವಣೆಗಳಾಗುತ್ತಿವೆ. ಸರ್ಕಾರದ ನೌಕರರು ಹಾಗೂ ನ್ಯಾಯ ಖಾತೆಯಲ್ಲಿ ಕೆಲಸ ಮಾಡತಕ್ಕ ಮುನ್‌ಸೀಫರು, ಮ್ಯಾಜಿಸ್ಟ್ರೇಟರು ಹಾಗೂ ಸಿವಿಲ್ ಜಡ್ಜ್‌ಗಳಾಂದತಹವರು ಕ್ಯಾನ್‌ವಾಸು ಮಾಡುತ್ತಿದ್ದಾರೆ. ಇದರೊಳಗೆ ಕೆಲವು ಡಿಸ್ಟ್ರಿಕ್ಟ್ ಜಡ್ಜ್‌ಗಳೂ ಸೇರಿ ಕ್ಯಾನ್‌ವಾಸು ಮಾಡುತ್ತಿದ್ದಾರೆ, ಇಷ್ಟು ದೂರ ಹೋಗಿದೆ, ಆದರೆ ಇಲ್ಲ ನಮ್ಮ ನ್ಯಾಯಾಂಗ ಮಂತ್ರಿಗಳು ಜುಡಿಷಿಯರಿಗೆ ಮಾತ್ರ ಕೈ ಹಾಕಬೇಡಿ Separation of Judiciary from the Executive ಎಂದಿದೆ, ಇಂತಹ ನ್ಯಾಯ ಖಾತೆಯ ಮೇಲೆ ಈಗ ಆಗುತ್ತಿರುವಂತಹ ಅನ್ಯಾಯಗಳನ್ನು ಪ್ರೋಬು ಮಾಡದೆ ಹೋದರೆ, ತಡೆಗಟ್ಟದೇ ಹೋದರೆ ಇವರುಗಳು ಕೋರ್ಟು ಕಚೇರಿಗಳಲ್ಲಿ ರಾಜಕೀಯ ಮಾಡುತ್ತಿದ್ದಾರೋ ಏನೋ ಎಂದು ಕಾಣುತ್ತಿದೆ. ಇದರ ವಿಷಯದಲ್ಲಿ ನಮ್ಮ ಮಾನ್ಯ ಮಿನಿಷ್ಟರು ಗಮನ ಕೊಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಒಬ್ಬರು ಸಿವಿಲ್ ಜಡ್ಜರನ್ನು ಬೆಂಗಳೂರಿನಿಂದ ಹಾಸನಕ್ಕೆ ವರ್ಗ ಮಾಡಿದ್ದಾರೆ. ಇವರು ಪ್ರತಿ ಶುಕ್ರವಾರ ಸಾಯಂಕಾಲದ ವೇಳೆಗೆ ಈ ಊರಿನಲ್ಲಿರುತ್ತಾರೆ, ಇವರು ಯಾವ ಯಾವ ಬಾರ್‌ನಲ್ಲಿರುತ್ತಾರೆ ಮತ್ತು ಯಾರ ಜೊತೆಯಲ್ಲಿರುತ್ತಾರೆ ಮತ್ತು ಇವರ ಆಕ್ಟಿವಿಟೀಸ್‌ಗಳೇನು ಎನ್ನುವುದನ್ನು ತನಿಖೆ ಮಾಡುತ್ತೇವೆ ಎಂದರೆ ನಾನೇ ಮಾನ್ಯ ಮಂತ್ರಿಗಳಿಗೆ ಪ್ರತ್ಯೇಕವಾಗಿ ಒದಗಿಸಿ ಕೊಡುತ್ತೇನೆ. ಅಂತಹವರನ್ನು ನೀವು ಏನಾದರೂ ಶಿಕ್ಷೆ ಮಾಡುತ್ತಾರೋ ಇಲ್ಲವೋ ಎನ್ನುವುದರಲ್ಲಿ ನನಗೆ ಅನುಮಾನವಿದೆ. ಸಭೆಯೊಳಗೆ ಹೆಸರುಗಳನ್ನು ಕೊಡಬಾರದೆಂದು ಇದೆ. ಬೇಕಾದರೆ ಆಮೇಲೆ ಕೊಡುತ್ತೇನೆ. ನ್ಯಾಯಾಂಗ ಖಾತೆಯಿಂದ ಸರಿಯಾದ ನ್ಯಾಯ ದೊರಕುತ್ತದೆಯೇ ಎಂದು ನನಗನಿಸುತ್ತದೆ. ಇವೊತ್ತು ಯಾವ ಜನ ದುಃಖತಪ್ತರಾಗಿದ್ದಾರೋ ಅಂತಹ ಜನಕ್ಕೆ ನ್ಯಾಯವೆನ್ನುವುದು ದೊರಕುತ್ತಿಲ್ಲ, ಇದು ನನ್ನ ಅನುಭವದ ಒಂದು ಕೇಸಿನಲ್ಲಾಗಿದೆ. ಒಂದು ಕೇಸಿನಲ್ಲಿ ಒಬ್ಬರು ಮ್ಯಾಜಿಸ್ಟ್ರೇಟರು ತಮ್ಮ ಮಾವ ತನ್ನ ಜಾತಿಯ ಜನ ಎಂದು ಎರಡು ಸಾವಿರ ರೂಪಾಯಿಗಳಷ್ಟು ಹಣ ತೆಗೆದುಕೊಂಡು ಒಂದು ಕೇಸು ನಮ್ಮ ಕೋರ್ಟಿನ ಮುಂದೆ ಇದೆ, ಇದರಲ್ಲಿ ಪರ್ಪಸ್ಸಾಗಿ ಅಡ್‌ಜರ್ನ್ ಮಾಡಿಕೊಂಡು ಬಂದು ಕೊನೆಯಲ್ಲಿ ಇದಕ್ಕೆ ಹೈ ಕೋರ್ಟಿನಿಂದ ಪರ್ಮಿಷನ್ನು ಬೇಕು ಎಂದು ಮಾಡಿದರು.

ಇನ್ನೊಂದು ಸಣ್ಣ ಅನುಭವ, ಅಪರಾಧಿ ಕೇಸಿನಲ್ಲಿ ಪ್ರಾಸಿಕ್ಯೂಷನ್ನು ವಿಟ್‌ನೆಸ್ ಬರಲು ಮೊದಲು ಸಮನ್ ಕೊಡುತ್ತಾರೆ, ಸಮನ್‌ಗೆ ಬಾರದೇ ಹೋದರೆ ಬೇಲಬಲ್ ವಾರಂಟು ಎಂದು ಕೊಡುತ್ತಾರೆ. ಆಗಲೂ ಪ್ರಾಸಿಕ್ಯೂಷನ್ನು ವಿಟ್‌ನೆಸ್ಸುಗಳು ಬಾರದೇ ಹೋದರೆ ಚಾರ್ಜಸ್ ಫೇಲ್ಡ್ ಆಗುತ್ತದೆ ಎನ್ನುತ್ತಾರೆ. ನ್ಯಾಯಾಂಗ ಸಚಿವರು ವಕೀಲಿ ಮಾಡಿದವರು ಮತ್ತು ಅವರ ಹಿಂದೆ ಕುಳಿತಿರುವ ಲೋಕಲ್ ಸೆಲ್ಫ್ ಗವರ್ನಮೆಂಟು ಮಂತ್ರಿಗಳೂ ವಕೀಲಿ ಮಾಡಿದವರು. ಎಲ್ಲಿಯಾದರೂ ಪ್ರಾಸಿಕ್ಯೂಷನ್ನು ವಿಟ್‌ನೆಸ್ಸು ಬರಲಿಲ್ಲ ಎಂದು ಪೊಲಿಟಿಕಲ್ ವೆಂಜೆನ್ಸ್ ಇಟ್ಟುಕೊಂಡು ನಾನ್‌ಬೇಲಬಲ್ ವಾರೆಂಟ್ ಇಷ್ಯೂ ಮಾಡುವುದು ಎಲ್ಲಿಯಾದರೂ ಉಂಟೇ? ಸಮನ್ಸ್ ಕೊಟ್ಟು ಕೋರ್ಟಿಗೆ ಬರಲಿಲ್ಲ ಎಂದು ನಾನ್‌ಬೇಲಬಲ್ ವಾರೆಂಟ್ ಎಂದು ಕೊಟ್ಟು ಒಬ್ಬರಿಗೆ ಅವಮಾನ ಮಾಡಬೇಕು ಎಂದು ಕೋರ್ಟಿನ ನ್ಯಾಯಾಧೀಶರು ಮಾಡಿದರೆ ನಾನೇನಾದರೂ ನಿಮ್ಮ ಜಾಗದಲ್ಲಿ ಇಂದು ಇದ್ದಿದ್ದರೆ ಇದರ ಬಗ್ಗೆ ಕೂಡಲೇ ಎನ್‌ಕ್ವೈರಿ ಮಾಡಿ ಅದರಲ್ಲಿ ತಪ್ಪೇನಾಗಿದ್ದರೆ ನಿಯಮದ ಪ್ರಕಾರ ಅವರನ್ನು ಕೆಲಸದಿಂದ ಡಿಸ್‌ಚಾರ್ಜು ಮಾಡುತ್ತಿದ್ದೆ. ಇವೊತ್ತು ಆ ಧೈರ್ಯ ಯಾರಲ್ಲಿದೆ? ಹೀಗಾದರೆ ನಮ್ಮ ಆರ್ತನಾದವನ್ನು ಯಾರಲ್ಲಿ ಹೇಳಿಕೊಳ್ಳುವುದು? ಕೋರ್ಟು ಕಚೇರಿಗಳಲ್ಲಿ ನ್ಯಾಯಾಧೀಶರುಗಳು ಒಬ್ಬರ ಮೇಲೆ ವೆಂಜೆನ್ಸ್ ಇಟ್ಟುಕೊಂಡು ಕೆಲಸ ಮಾಡಿದರೆ ಹೇಗೆ? ಇದನ್ನೆಲ್ಲಾ ತಾವು ಸರಿಪಡಿಸುತ್ತೀರಾ ಎನ್ನುವ ನಂಬಿಕೆಯಾದರೂ ಹೇಗೆ ಬರುತ್ತದೆ. ಒಬ್ಬರು ಫಸ್ಟ್ ಕ್ಲಾಸು ಮ್ಯಾಜಿಸ್ಟ್ರೇಟರವರು ಚಿಕ್ಕಬಳ್ಳಾಪುರದಲ್ಲಿರುವವರು ಹೀಗೆ ದುರ್ವ್ಯವಹಾರಗಳನ್ನು

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಮಾಡುತ್ತಿದ್ದಾರೆ. ಬೇಕಾದರೆ ಮಾನ್ಯ ಮಂತ್ರಿಗಳ ಕೈಕೆಳಗಿರುವ ಗೂಢಚಾರರ ಮೂಲಕ ಗುಟ್ಟಾಗಿ ಬೇಕಾದರೆ ವಿಷಯಗಳನ್ನು ತಿಳಿದುಕೊಳ್ಳಬಹುದು.

(Interruption.)

ಇಷ್ಟನ್ನು ಹೇಳಿ ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದು ಎಲ್ಲ ನ್ಯಾಯಾಲಯಗಳಿಗೂ ಸಂಬಂಧಪಟ್ಟಂತಹ ಒಂದೇ ಮಾದರಿಯ ಕಾನೂನು ಒಂದನ್ನು ಈ ಸಭೆಯಲ್ಲಿ ತಂದು ಒಪ್ಪಿಗೆಯನ್ನು ಪಡೆದು ಎಷ್ಟೋ ದಿನಗಳಾದರೂ ಅದನ್ನು ಇನ್ನೂ ಜಾರಿಗೆ ತರಲಿಲ್ಲ.

ಶ್ರೀ ಎಂ. ವಿ. ರಾಮರಾವ್.—ಪ್ರೆಸಿಡೆಂಟರ ಅಸ್ಸೆಂಟು ಇನ್ನೂ ಬಂದಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಪ್ರೆಸಿಡೆಂಟರ ಅಸ್ಸೆಂಟು ಆಗಿಲ್ಲ ಎಂದು ಮಾತ್ರ ಇಲ್ಲಿ ಹೇಳುತ್ತಾರೆ. ನಮಗೆ ಆಗ ಇಲ್ಲಿ ಬಿಲ್ಲು ಬಂದಾಗ ಅದರ ಮೇಲೆ ಮಾತನಾಡಲು ಎರಡು ನಿಮಿಷಗಳ ಕಾಲ ಹೆಚ್ಚಾಗಿ ಕೊಡಲಾಗಲಿಲ್ಲ. ಇವೊತ್ತು ಪ್ರೆಸಿಡೆಂಟರವರ ರುಜು ತೆಗೆದುಕೊಳ್ಳುವುದು ಅಷ್ಟು ಕಷ್ಟವಾಗಿದೆಯೇ? ಇದನ್ನು ಅಷ್ಟು ಬೇಗ ಇಲ್ಲಿ ಪಾಸು ಮಾಡಿಸಿದುದರಿಂದ ಜನಕ್ಕೆ ಏನು ಉಪಕಾರ ಮಾಡಿದ ಹಾಗಾಯಿತು? ಇದನ್ನು 64-65 ನೇ ಸಾಲಿನಲ್ಲಾದರೂ ಜಾರಿಗೆ ತರಲು ಅವಕಾಶ ಮಾಡುತ್ತೀರಾ ಎಂದು ನಾನು ಇಲ್ಲಿ ಕೇಳಬೇಕಾಗಿದೆ.

ಇನ್ನೊಂದು ವಿಚಾರ, ಚಿತ್ರದುರ್ಗ, ಕೋಲಾರ ಮತ್ತು ತುಮಕೂರು ಜಿಲ್ಲೆಗಳಿಗೆ ಒಂದೊಂದು ಡಿಸ್ಟ್ರಿಕ್ಟ್ ಕೋರ್ಟನ್ನು ಮಾಡಿಸಿ ಕೊಡಬೇಕು ಎಂದು ನಾವು ವಕೀಲಿ ಮಾಡುತ್ತಿದ್ದ ಕಾಲದಿಂದಲೂ ಅಲ್ಲಿನ ಜನ ಕೇಳುತ್ತಲೇ ಬರುತ್ತಿದ್ದಾರೆ, ಇದನ್ನು ಮುಂದಿನ ಬೇಸಿಗೆ ರಜ ಮುಗಿದ ತಕ್ಷಣದಲ್ಲಾದರೂ ಈ ಮೂರು ಜಿಲ್ಲೆಗಳಲ್ಲಿ ಜಿಲ್ಲಾ ನ್ಯಾಯಾಲಯಗಳನ್ನು ಮಾಡಿದರೆ ಅಲ್ಲಿನ ಜನಗಳಿಗೆ ಆಗುತ್ತಿರುವ ತೊಂದರೆಗಳನ್ನು ತಪ್ಪಿಸಿದಂತಾಗುತ್ತದೆ.

ಇನ್ನೊಂದು ಮಾತು ಇಲ್ಲಿ ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಎಲ್ಲ ಕೋರ್ಟುಗಳಿಗೂ ಪೇ ಸ್ಕೇಲುಗಳನ್ನು ರಿವೈಸು ಮಾಡಿದಂತೆ ಹೈ ಕೋರ್ಟಿನಲ್ಲೂ ಈಚೆಗೆ ಸರಕಾರದವರು ಅವರ ಪೇ ಸ್ಕೇಲುಗಳನ್ನು ರಿವೈಜು ಮಾಡಿದಿರಿ. ಇದಾಗಿ ಎರಡು ವರ್ಷವಾದರೂ ಕೂಡ ಅಲ್ಲಿರುವ ಜನಕ್ಕೆ ನೀವು ಕೊಟ್ಟಿರುವ ಕೊಡಿಗೆ ಇನ್ನೂ ಸಿಕ್ಕಿಲ್ಲ ಎಂದು ಕೇಳುತ್ತೇನೆ. ಇದನ್ನು ಕೊಡದೇ ಇರುವುದಕ್ಕೆ ಯಾವ ಅಡ್ಡಿ ಆತಂಕಗಳಿವೆ? ಹಣ ಕಾಸಿನ ಶಾಖೆ ಹೈಕೋರ್ಟು ಕಡೆಗೆ ಕೈ ತೋರಿಸುತ್ತದೆ, ಹೈ ಕೋರ್ಟು ಹಣಕಾಸಿನ ಖಾತೆ ಕಡೆ ತೋರಿಸುತ್ತದೆ. ಇದೇನು ಹೀಗೆ ಗಂಡ ಹೆಂಡಿರ ಜಗಳದಲ್ಲಿ ಕೂಸು ಬಡವಾಗುವಂತೆ ಹೈಕೋರ್ಟಿನಲ್ಲಿರುವ ಕೂಸುಗಳು ಬಡವಾಗುತ್ತಿವೆ. ಇವರಿಗೆ ಸ್ವಲ್ಪ ನ್ಯಾಯ ದೊರಕಿಸಿ ಕೊಡಿ. ಇದರ ಬಗ್ಗೆ ನಮ್ಮ ಫೈಲುಗಳು ಹಣಕಾಸಿನ ಶಾಖೆಯಲ್ಲಿದೆಯೋ ಇಲ್ಲವೇ ನ್ಯಾಯ ಖಾತೆಯಲ್ಲಿ ಯಾವುದಾದರೂ ಕ್ವೈರಿ ಹಾಕಿ ಅಲ್ಲಿ ಕೊಳೆಯುತ್ತಿದೆಯೋ ಸ್ವಲ್ಪ ತಾವು ಪರಿಶೀಲನೆ ಮಾಡಬೇಕು, ಇದು 60-61ರಲ್ಲಿ ರಿವೈಜು ಆದ ಸ್ಕೇಲುಗಳು. ಅವರು ಸರಕಾರದವರನ್ನು ಎಷ್ಟೋ ಸಾರಿ ಕೇಳಿದ್ದಾರೆ. ಅಜಿಟೇಟ್ ಮಾಡಿದ್ದಾರೆ. ಅವರಿಗಿನ್ನೂ ಬೆನಿಫಿಟ್ ಸಿಕ್ಕಿಲ್ಲ. ಆದ್ದರಿಂದ ತಮ್ಮ ಕಾಲದಲ್ಲಾದರೂ ಹಿಂದೆ ವಾಗ್ದಾನ ಮಾಡಿದುದನ್ನು ಕೊಡಿಸಿಕೊಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಸ್ವಾಮಿ ಮೊದಲನೇಯದಾಗಿ ಈ ಪಾನ ನಿರೋಧವನ್ನು ಕೇಂದ್ರ ಸರ್ಕಾರದವರು ದೇಶದಲ್ಲಿ ಜಾರಿಗೆ ತಂದ ಉದ್ದೇಶವಾದರೂ ಏನಿತ್ತೆಂದರೆ; ದೇಶದ ಸಂಪತ್ತನ್ನು ಹೆಚ್ಚುವಂತೆ ಮಾಡಲು ಅಂದರೆ ಈ ಶೇಂದಿಯಿಂದ ಬೆಲ್ಲ, ನೀರಾ ಇತ್ಯಾದಿಗಳನ್ನು ಮಾಡಿ ಜನ ಈ ಶೇಂದಿಯನ್ನು ಕುಡಿದು ಮದಾಂಧರಾಗದೆ ಇರಲೆಂದು ಹೇಳಿ ಇದನ್ನು ಜಾರಿಗೆ ತಂದರು. ಆದರೆ ಈಗ ಆ ಏನೊಂದು ಸದುದ್ದೇಶದಿಂದ ತರಲಾಗಿತ್ತೋ ಅದಕ್ಕೆ ತದ್ವಿರುದ್ಧವಾಗಿ ನಡೆಯುತ್ತದೆ. ಈ ದಿವಸ ನಮ್ಮ ಮೈಸೂರು ರಾಜ್ಯದಲ್ಲಿ ಈ ನೀರಾ ಕೇಂದ್ರಗಳಿಗೆ ಕೊಟ್ಟಿರತಕ್ಕ ಲೈಸೆನ್ಸ್‌ಗಳ ಸಂಖ್ಯೆ ಹಿಂದೆ ಶೇಂದಿ ಅಂಗಡಿಗಳಿಗೆ ಕೊಡುತ್ತಿದ್ದ ಲೈಸೆನ್ಸ್‌ಗಳಿಗಿಂತ ಜಾಸ್ತಿಯಾಗಿದೆ. ಈಗ ನೀರಾ ಇಳಿಸಲು ಕಟ್ಟತಕ್ಕ ಮರಗಳ ಸಂಖ್ಯೆ ಎಷ್ಟೆಂಬುದು ಯಾರಿಗೂ ತಿಳಿಯದಂತಾಗಿದೆ. 10 ಮರಕ್ಕೆ ಲೈಸೆನ್ಸ್ ಪಡೆದರೆ ನೂರಾರು ಮರಗಳನ್ನು ಕಟ್ಟಿ ಶೇಂದಿಯನ್ನು ಇಳಿಸುತ್ತಿದ್ದಾರೆ. ಹಿಂದೆ ಮರಗಳಿಗೆ ನಂಬರನ್ನು ಹಾಕದೆ ಶೇಂದಿಯನ್ನಿಳಿಸುತ್ತಿರಲಿಲ್ಲ. ಈಗ ಈ ನಂಬರನ್ನು ಹಾಕತಕ್ಕ ಪದ್ಧತಿಯೇ ಸಂಪೂರ್ಣವಾಗಿ ಕೈಬಿಟ್ಟುಬಿಡಲಾಗಿದೆ. ನಮ್ಮ ದೇಶದಲ್ಲಿ ನಡೆಯುತ್ತಿರುವ ಪಾನ ನಿರೋಧ ಹೀಗಿದೆ! ಇದು ಎಳ್ಳಷ್ಟೂ ಜಯಪ್ರದವಾಗದಿದ್ದರೂ ಸರ್ಕಾರದವರು ಇದು ಜಯಪ್ರದವಾಗುತ್ತಿದೆ ಎಂದು ನಮ್ಮ ಮುಂದೆ ಸುಳ್ಳು ಅಂಕೀ ಅಂಶಗಳನ್ನಿಡುತ್ತಿದ್ದಾರೆ. ದೇಶದಲ್ಲಿ ದಿನದಿನಕ್ಕೂ ಶೇಂದಿ, ಶರಬ್ ಅಂಗಡಿಗಳು, ಕಳ್ಳಭಟ್ಟಿ ಶರಾಬಿನ ಅಂಗಡಿಗಳೂ ಹೆಚ್ಚುತ್ತಿವೆ. ಇವು

ಹೆಚ್ಚುವುದಕ್ಕೆ ಕಾರಣ ಪೋಲೀಸಿನವರು ಈ ಆಕ್ರಮ ಅಂಗಡಿಗಳವರಿಂದ ತಿಂಗಳಿಗಿಷ್ಟು ಎಂತ ಮಾಮೂಲನ್ನು ಮಾಡಿಕೊಂಡು ಇರುವುದರಿಂದ ಅವು ಜಯಪ್ರದವಾಗಿ ನಡೆಯುತ್ತಿವೆ. ಅಷ್ಟೇ ಅಲ್ಲದೆ ಈ ಪೋಲೀಸಿನವರೂ ಮತ್ತು ಅಂಗಡಿಯವರೂ ಒಂದು ಒಪ್ಪಂದವನ್ನು ಮಾಡಿಕೊಂಡು ಈ ಅಂಗಡಿಗಳವರು ಪೋಲೀಸಿನವರಿಗೆ ತಿಂಗಳಿಗೆ ಇಂತಿಷ್ಟು ಕೇಸುಗಳನ್ನೂ ಸಹಾ ಕೊಡಬೇಕೆಂದು ಒಂದು ಒಪ್ಪಂದವನ್ನು ಮಾಡಿಕೊಂಡಿರುವುದರಿಂದ ಈ ಕಾರ್ಯ ಸರಾಗವಾಗಿ ನಡೆದುಕೊಂಡು ಹೋಗುತ್ತಿದೆ. ನಮ್ಮ ಪೋಲೀಸಿನವರು ಕೇಸು ಹಾಕಲು ಹಿಡಿಯುವುದನ್ನಾದರೂ ಯಾರನ್ನು? ಯಾರೋ ಪರಸ್ಥಳದವನು ಒಂದು ತೊಲ ಅರ್ಧ ತೊಲ, ಅಥವಾ ಕಾಲು ತೊಲ ಗಾಂಜಾ ತೆಗೆದುಕೊಂಡಿದ್ದವನನ್ನು ಹಿಡಿದು ಕೇಸನ್ನು ಹಾಕುತ್ತಾರೆ. ಒಂದುವೇಳೆ ಆ ಮನುಷ್ಯನಲ್ಲಿ 10–20 ತೊಲ ಗಾಂಜಾ ಇದ್ದರೆ ಆತನಿಂದಲೂ ಲಂಚಪಡೆದು ಅದರಲ್ಲಿ ಅರ್ಧಭಾಗವನ್ನು ಮಾತ್ರ ಸೀಜ್ ಮಾಡಿದಂತೆ ಮಾಡಿ, ಆತನಿಗೆ ನೀನೇನು ಹೆದರಬೇಡ ಈತ ಮೊದಲನೇ ಸಾರಿಗೆ ಈ ಕೇಸನ್ನು ಮಾಡಿದ್ದಾನೆಂದು ಮ್ಯಾಜಿಸ್ಟ್ರೇಟರಿಗೆ ಹೇಳಿ ನಿನಗೆ 1–2 ರೂಪಾಯಿಗಳ ಜುಲ್ಮಾನೆ ಹಾಕಿಸಿ ಬಿಡಿಸಿಬಿಡುತ್ತೇವೆ, ಲಾಯರನ್ನೂ ಕೂಡ ನೀನು ಇಡಬೇಡ ಎಂದು ಹೇಳಿ ಅವನಿಂದ ಅಪರಾಧವನ್ನು ಒಪ್ಪಿಕೊಳ್ಳುವಂತೆ ಮಾಡಿಬಿಡುತ್ತಾರೆ. ಹೀಗಾಗೇ ಈಗ ಲಕ್ಷಾಂತರ ಕೇಸುಗಳಾಗುತ್ತಿರುವಾಗ ಇನ್ನು ಈ ಅಪರಾಧಗಳನ್ನು ನ್ಯಾಯವಾಗಿಯೂ ಹಿಡಿಯುವುದಕ್ಕೆ ಪ್ರಯತ್ನಮಾಡಿದ್ದೇ ಆದರೇ ಈ ತಕ್ಸೀರುಗಳ ಸಂಖ್ಯೆಯನ್ನು ಎಣಿಸುವುದಕ್ಕಾಗುತ್ತದೆಯೇ ಎಂದು ತಾವೆಲ್ಲರೂ ಆಲೋಚಿಸಬಹುದು. ನಮ್ಮ ಪಕ್ಕದ ತಾಲ್ಲೂಕಾದ ಅರಸೀಕೆರೆ ಮತ್ತು ಹಾಸನ ಈ ತಾಲ್ಲೂಕಗಳಲ್ಲೆಲ್ಲಾ ಒಂದಂಗಡಿಯಿದ್ದ ಜಾಗದಲ್ಲಿ ಇಂದು ಹತ್ತಾರು ಅಂಗಡಿಗಳಾಗಿವೆ. ಬಡಬಗ್ಗರ, ಮಕ್ಕರಿ, ಚಾಪೆ ಇತ್ಯಾದಿಗಳನ್ನು ತಯಾರಿಸಲು ಬಳಸುತ್ತಿದ್ದ ಈಚಲುಗರಿಗೆ ಇಂದು ಪೂರಾ ಅಭಾವ ಬಂದಿದೆ. ಅನೇಕ ಕಡೆಗಳಲ್ಲಿದ್ದ ಶೇಂದಿ ವನಗಳನ್ನು ಈ ರೀತಿಯಲ್ಲೆಲ್ಲಾ ಹಾಳುಮಾಡಿ ಆ ಜಮೀನುಗಳನ್ನು ಸಾಗುವಳಿಗೆ ತಂದಿದ್ದಾರೆ. ಇಂದು ಅಲ್ಲೆಲ್ಲಾ ತೆಂಗಿನ ತೋಟಗಳಾಗಿವೆ. ಹಿಂದಿನಕಾಲದಲ್ಲಿ ಹುಲ್ಲು ಹೊರೆ ಕಟ್ಟುವುದಕ್ಕೆ ಕೂಡ ಈಚಲುಗರಿಯನ್ನು ಕೊಯ್ಯಲು ಜನ ಹೆದರುತ್ತಿದ್ದರು. ಆ ಈಚಲುಮರಗಳಿಗೆ ಈ ದಿವಸ ಈ ದುರ್ಗತಿಬಂದಿದೆ! ಹೀಗೇ ಇನ್ನು ಕೆಲವಾರು ದಿನಗಳು ಕಳೆದರೆ; ಮುಂದೆ ಈ ಈಚಲು ಮರಗಳೆನ್ನತಕ್ಕವುಗಳು ಹೇಗಿದ್ದವೆಂಬುದನ್ನು ನಾವು ಊಹಿಸುವುದಕ್ಕೂ ಕಷ್ಟವಾಗಬಹುದು. ಅದಕ್ಕೆ ನಾವೀಗಲೇ ಈಚಲುಮರಗಳ ಫೋಟೋವನ್ನು ತೆಗೆದಿಟ್ಟುಕೊಳ್ಳುವ ಕಾಲ ಬಂತು. ಈ ವಿಚಾರ ಗಳನ್ನೆಲ್ಲಾ ನಾವು ಒಂದಾವರ್ತಿಯಲ್ಲ, ಹತ್ತಾರು ಸಾರ್ತಿ ಗೃಹಮಂತ್ರಿಗಳ ಆಫೀಸಿನಲ್ಲಿ ತಿಳಿಸಿದ್ದೇವೆ. ಆದರೇನೂ ಸಾರ್ಥಕವಾಗಲಿಲ್ಲ. ಇಷ್ಟಾಗಿದ್ದರೂ ಈ ದಿವಸ ಸರ್ಕಾರದವರು ತಮ್ಮ ಬೆನ್ನನ್ನು ತಾವೇ ತಟ್ಟಿಕೊಂಡು ಇದನ್ನು ಜಯಪ್ರದವಾಡಿದ್ದೇವೆಂದು ನಮ್ಮ ಮುಂದೆ ಈಗ ಈ ವಿಚಾರವನ್ನು ತಂದಿದ್ದಾರೆ. ಪಾನನಿರೋಧವನ್ನು ಅಷ್ಟು ಬಿಕ್ಕಟ್ಟಾಗಿ ಜಾರಿಗೆ ತರಬೇಕೆಂಬ ಈ ಜನರು ಏಕೆ ಈ ಬೀರ್‌ಷಾಪುಗಳನ್ನು ಹರಾಜ್‌ಮಾಡುತ್ತಿಲ್ಲ? ಈ ಅಂಗಡಿಗಳನ್ನು ಆಡಳಿತ ನಡೆಸತಕ್ಕ ಪಾರ್ಟಿ ತನ್ನ ಒಂದು ಪಾರ್ಟಿಯನು ಬಲಪಡಿಸುವುದಕ್ಕಾಗಿ ಇವುಗಳನ್ನು ಬೆಳೆಸುತ್ತಿದ್ದಾರೆ. ಯಾವ ಪಾರ್ಟಿ ಅಧಿಕಾರಕ್ಕೆ ಬರುತ್ತದೆಯೋ ಆ ಪಾರ್ಟಿ ತಮತಮಗೆ ಬೇಕಾದವರಿಗೆ ಯಥೇಷ್ಟವಾಗಿ ಲೈಸೆನ್ಸ್ ಗಳನ್ನು ಕೊಡುತ್ತಲೇ ಇದ್ದಾರೆ. ಈ ದಿವಸ ದೇಶದಲ್ಲಿರತಕ್ಕ ಈ ಬೀರ್‌ಷಾಪುಗಳ ಪಟ್ಟಿಯೇನಿದೆ ಅದನ್ನು ತೆಗೆದುನೋಡಿದರೆ ಅದರಲ್ಲಿ ಯಾರಯಾರ ಪಾರ್ಟಿಯ ಜನ ಎಷ್ಟೆಷ್ಟಿದ್ದಾರೆಂಬುದು ಸರ್ವರಿಗೂ ವೇದ್ಯವಾಗುತ್ತದೆ. ಅಂಥ ಒಂದು ಅನುಕೂಲ ಅವರಿಗೆ ಇದರಿಂದಾಗುತ್ತಿಲ್ಲ ಎನ್ನುವುದಾದರೆ ಅವರೇಕೆ ಇವುಗಳನ್ನು ಹರಾಜ್ ಮಾಡಬಾರದು? ಹೀಗೆ ಆಡಳಿತವಲ್ಲಿರತಕ್ಕ ಎಷ್ಟೋ ಅಧಿಕಾರ ಗಳನ್ನು ತನ್ನ ಕೈಲಿಟ್ಟುಕೊಂಡಿದ್ದರೂ ಈ ಬಾಬನ್ನೂ ಕೈಬಿಡದೆ ಆ ಗಾಂಧಿ, ನೆಹ್ರೂರವರ ಹೆಸರು ಗಳನ್ನು ಬೇರೆ ಅಗ್ಗಮಾಡುತ್ತಿದ್ದಾರೆ. ಆಡಳಿತಪಕ್ಷದವರ ಆಸೆ ಈ ಮಟ್ಟಕ್ಕೇರಿರುವಾಗ ದೇಶದಲ್ಲಿ ಇನ್ನು ವಿರೋಧಪಕ್ಷ ಬೆಳೆಯುವುದಕ್ಕೆ ಅವಕಾಶವಾದರೂ ಎಲ್ಲಿದೆ? ಈ ಬೆಂಗಳೂರಿನಲ್ಲಿ ನಡೆಯತಕ್ಕ ಆ ಎಕ್ಸೈಜ್ ಹರಾಜಿನಬಗ್ಗೆ ಆ ಬ್ರಿಟಿಷರಿದ್ದಕಾಲದಿಂದಲೂ ಏನೊಂದು ಪ್ರಕಾರಿತ್ತೋ, ಅದು ಈ ದಿವಸವೂ ಕೂಡ ಇದ್ದೇಇದೆ. ಇದನ್ನು ಒಟ್ಟಿಗೆ ಹರಾಜ್‌ಮಾಡುವುದರ ಬದಲು 10,15 ಜನರ ಒಂದೊಂದು ಫಿರ್ಕಾಭಾಗ ಹರಾಜ್‌ಮಾಡಿದರೆ ಸರ್ಕಾರಕ್ಕೆ ಈಗ ಇದರಿಂದ ಎಷ್ಟು ಹಣ ಬರುತ್ತದೆಯೋ ಅದರ ಒಂದೂವರೆಯಷ್ಟು ಹೆಚ್ಚಿಗೆ ಬರುತ್ತದೆಂದು ನಾವು ಪದೇಪದೇ ಹೇಳುತ್ತಲೇ ಇದ್ದೇವೆ. ಆದರೆ ಸರ್ಕಾರದವರು ಅದನ್ನು ಮಾಡುತ್ತಿಲ್ಲ. ಕಾರಣ ಅವರಿಗೇ ಗೊತ್ತು. ಅದನ್ನುಮಾಡಲು ತೊಂದರೆಯೇನಿಲ್ಲ ಎಂಬುದು ನಮಗೆಲ್ಲರಿಗೂ ಗೊತ್ತಿದೆ. ಈ ಶೇಂದಿ ಅಂಗಡಿಗಳಲ್ಲಿ ಸಾಲದ್ದಕ್ಕೆ ಗಾಂಧಿ ನೆಹ್ರೂ ಮತ್ತು ಪಟೇಲರ ಫೋಟೋಗಳು ಬೇರೆ. ಅವರಿಗೆ ಇನ್ನೂ ಅವಮರ್ಯಾದೆ ಸಾಲ ದೆಂದೇನೋ! ಇಂಥಾ ಸ್ಥಳಗಳಲ್ಲೇ ದೊಡ್ಡ ದೊಡ್ಡ ಟೀಪಾರ್ಟಿಗಳೂ, ಅಗಲವಾಗಿರತಕ್ಕ ದೊಡ್ಡ ದೊಡ್ಡ ನೆಹ್ರೂ, ಗಾಂಧಿ ಫೋಟೋಗಳೂ ಇರುವುದು! ಈ ಕುಡಿತವನ್ನು ಸಂಪೂರ್ಣವಾಗಿ ನಿಲ್ಲಿಸು ವುದಕಾಗುವುದಿಲ್ಲವೆಂಬ ಅಭಿಪ್ರಾಯಕ್ಕೆ ಆಂಧ್ರ ಮತ್ತು ಮಹಾರಾಷ್ಟ್ರಗಳು ಬಂದಿವೆ. ಆದರೆ

(ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ)

ನಮ್ಮಲ್ಲಿನ್ನೂ ಇವರು ತಮ್ಮ ಆತ್ಮವಂಚನೆಯನ್ನು ಮಾಡಿಕೊಂಡು ಇದು ಯಶಸ್ವಿಯಾಗಿದೆ ಎಂದು ಹೇಳುತ್ತಿದ್ದಾರೆ. ಇದು ಸರಿಯೇ ಎಂದು ಕೇಳುತ್ತೇನೆ? ನಾವು ಸಾಲದ್ದಕ್ಕೆ ಈ ಸಭೆಗೆ ಪ್ರಥಮ ದಲ್ಲಿ ಬಂದಾಗ ನಾವು ರಾಷ್ಟ್ರಕ್ಕೂ, ಪ್ರಜೆಗಳಿಗೂ ಅನ್ಯಾಯ ಮಾಡುವುದಿಲ್ಲ ಎಂದು ಹೇಳಿ ಪ್ರಮಾಣ ವಚನ ಸ್ವೀಕರಿಸಿದ್ದರೂ ಈ ದಿವಸ ಈ ಸಭೆಯಲ್ಲಿ ಇವರು ತಮ್ಮ ಆತ್ಮವಂಚನೆಗೆ ವಿರುದ್ಧವಾಗಿ ಹೇಳಬಹುದೇ? ಇದರಿಂದ ದೇಶಕ್ಕೆ ಇವರು ಅನ್ಯಾಯಮಾಡಿದಂತಾಗುವುದಿಲ್ಲವೇ! ಇವರ ಜೀವಮಾನದಲ್ಲಿ ಇದನ್ನು ಸಕ್‌ಸಸ್‌ಮಾಡಲು ಇವರಿಂದ ಸಾಧ್ಯವಿಲ್ಲ. ಹೀಗೆ ಹಗಲು ದರೋಡೆ ನಡೆಯುತ್ತಿರುವ ಕಡೆ ಇವರು ಗಾಂಧಿ ಫೋಟೋವನ್ನು ಹಾಕಬಹುದೇ? ಈ ದಿವಸ ಆ ಕ್ಲಬ್ಬುಗಳ ಹೆಸರಿನಲ್ಲಿ ಎಲ್ಲಿ ನೋಡಲಿ ಜೂಜಾಡುವುದು, ಕುಡಿತ, ದರೋಡೆಗಳೇ ಹೆಚ್ಚಾಗುತ್ತಿವೆ. ಇಷ್ಟೆಲ್ಲಾ ಆಗುತ್ತಿದ್ದರೂ ಆ ಶೇಂದಿಯನ್ನು ಇನ್ನೂ ಇವರು ನೀರಾ ಎಂದೇ ಹೇಳಬಹುದೇ!

3 P.M.

ಚುನಾವಣೆ ಸಮಯದಲ್ಲಿ ಖಾದೀ ಬಟ್ಟೆಯನ್ನು ಹಾಕಿಕೊಂಡು ಜನಗಳಿಗೆ ಅವಮಾನ ಮಾಡುತ್ತಾರೆ. ರೈಲ್ವೆ ಬಸ್ಸುಗಳಲ್ಲಿ ಖಾದೀ ಬಟ್ಟೆಗಳನ್ನು ಹಾಕಿಕೊಂಡು ಓಡಾಡುವುದರಿಂದ ಜನ ಆಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಸರ್ಕಾರದಲ್ಲಿ ಏನೊಂದು ಉಚ್ಚಭಾವನೆಯಿತ್ತೋ ಅದು ನಶಿಸಿಹೋಗುತ್ತಿದೆ. ದೇಶದಲ್ಲಿ ನ್ಯಾಯವಾಗಿ ಸತ್ಯವಾಗಿ ನಡೆಯುವಂತಹ ವ್ಯವಹಾರಗಳಿಗೆ ತಮ್ಮ ದೃಷ್ಟಿ ಬರತಕ್ಕ ಅವಕಾಶವಿಲ್ಲದಂತೆ ಸರ್ಕಾರ ನಡೆಸುವವರು ಅವರಿಗೆ ಮಾಡುತ್ತಾರೆ ಎನ್ನುವ ಮಟ್ಟಕ್ಕೆ ತಂದಿದ್ದಾರೆ. ಸೌಲತ್ತುಗಳನ್ನು ಅವರಿಗೆ ಕೊಡುತ್ತಾ ಇರುವುದರಿಂದ ಹೀಗೆ ಆಗಿದೆ. ಇದನ್ನು ನಡೆಸುವುದಕ್ಕೂ ಸಾಧ್ಯವಿಲ್ಲವೆಂದು ಇವರ ಮನಸ್ಸಿಗೆ ಬಂದರೂಕೂಡ ಯಾವುದೋ ಕೆಲವು ವರದಿಗಳು ಬರಬೇಕು ಎಂಬುದಾಗಿ ಹೇಳುತ್ತಿದ್ದಾರೆ. ನಮ್ಮ ಮನಸ್ಸಿಗೆ ಇದು ಸರಿಯೋ ತಪ್ಪೋ ಎಂಬುದನ್ನು ವಿಚಾರ ಮಾಡಬೇಕು. ಕಮಿಟಿಗಳು ನಾಲ್ಕಾರು ಕಡೆ ಹೋಗಿ ಸಂಚಾರ ಮಾಡಬೇಕು. ಅದರಿಂದ ನಾಲ್ಕಾರು ರೀತಿಯಲ್ಲಿ ಅಭಿಪ್ರಾಯಗಳನ್ನು ಪಡೆಯಬಹುದು. ಆಗ ಕೆಲವು ಕಡೆಗಳಲ್ಲಿ ಈ ಪಾನನಿರೋಧ ಇರಲಿ ಅಥವಾ ಬೇಕು ಎಂಬುದಾಗಿ ಹೇಳಬಹುದು ನಮ್ಮ ಮನಸ್ಸಿಗೆ ಅಥವಾ ಈ ಸಭೆಯವರ ಮನಸ್ಸಿಗೆ, ಆಡಳಿತದಲ್ಲಿ ಅಧಿಕಾರ ನಡೆಸುವವರ ಮನಸ್ಸಿಗೆ ಇದು ಇರಬೇಕು, ಬೇಡ ಎಂಬುದು ಇನ್ನೂ ಸಂಶಯರೂಪವಾಗಿಯೇ ಇದೆ. ಒಂದುವೇಳೆ ಆರೀತಿ ಇರಬೇಕಾದರೆ ಇವರು ಪರಿಣಾಮಕಾರಿಯಾಗಿ ಕೆಲಸ ಮಾಡಿದ್ದಾರೆಯೇ! ಏನಾದರೂ ಇದಕ್ಕೆ ವ್ಯವಸ್ಥೆ ಮಾಡಿದ್ದಾರೆಯೇ? ಈಚಲು ಮರದಲ್ಲಿ ಎಷ್ಟು ಸೇಂದಿ ಇಳಿಸುತ್ತಾರೆ? ಎಷ್ಟು ಖರ್ಚಾಗುತ್ತದೆ ಇದನ್ನು ತೆಗೆದುಕೊಂಡಿರತಕ್ಕ ಜನಾಂಗ ಯಾವುದು ಎಂಬುದನ್ನು ಸರ್ಕಾರದವರು ಮೊದಲು ಆಲೋಚನೆ ಮಾಡಬೇಕು. ನಮ್ಮ ದೇಶದಲ್ಲಿ ಬೇಕಾದಷ್ಟು ಆಹಾರೋತ್ಪಾದನೆಗೆ ತುಂಬಾ ತೊಂದರೆಯಾಗುತ್ತಿದೆ. ಇದನ್ನು ಜಾಸ್ತಿ ಮಾಡಬೇಕೆಂದು ಪದೇಪದೇ ಹೇಳುತ್ತಾ ಇದ್ದೇನೆ. ಇವತ್ತಿನವರೆಗೂ ಅದು ಕಾರ್ಯಗತವಾಗಿಲ್ಲ. ಅನೇಕ ಪ್ರಾಜೆಕ್ಟ್ ಏರಿಯಾಗಳಲ್ಲಿ ಒಂದು ವರ್ಷಕ್ಕೆ ಮುಗಿಸಬೇಕಾದಂಥ ಕೆಲಸಕ್ಕೆ 3-4 ವರ್ಷಗಳನ್ನು ತೆಗೆದುಕೊಳ್ಳುತ್ತಾ ಇದ್ದಾರೆ. ಇದಕ್ಕೆ ಕಾರಣವೇನೆಂದರೆ ಅಲ್ಲಿ ಕೂಲಿಮಾಡತಕ್ಕ ಜನ ಪ್ರತಿದಿವಸವೂಕೂಡ ಫ್ರೆಂಚ್ ಪಾಲಿಷ್ ಸ್ಪಿರಿಟ್ ಸೇರಿಸಿಬಿಟ್ಟು ಇದನ್ನು ಮಾರುವವರು ದೊಡ್ಡದೊಡ್ಡ ಕಂಟ್ರಾಕ್ಟರುಗಳಾಗಿದ್ದಾರೆ. ಹಿಂದೆ 20 ಪಾಲಿಷ್ ಬಾಟಲುಗಳನ್ನು ಇಟ್ಟಿದ್ದವರು 20 ಲಾರಿಗಳನ್ನು ಇಟ್ಟಿದ್ದಾರೆ. ಮೈಸೂರು ಸಂಸ್ಥಾನದಲ್ಲಿ ಈ ಪಾಲಿಷ್ ಎಷ್ಟು ಮುಂದಕ್ಕೆ ಬೇಕಾಗುತ್ತದೆ, ನವಾಸಾಗರ ಹಿಂದೆ ಎಷ್ಟು ಖರ್ಚಾಗುತ್ತಿತ್ತು, ಈಗ ಎಷ್ಟು ಖರ್ಚಾಗುತ್ತಿದೆ, ಫ್ರೆಂಚ್‌ಪಾಲಿಷ್ ಎಷ್ಟು ಹಿಂದೆ ಖರ್ಚಾಗುತ್ತಿತ್ತು, ಈಗ ಎಷ್ಟು ಖರ್ಚಾಗುತ್ತಿದೆಂಬುದನ್ನು ವಿಚಾರ ಮಾಡಿ ನೋಡಬೇಕು. ಮಂಡ್ಯಾದಲ್ಲಿ ಇದನ್ನು ಗಾಯಗಳಿಗೆ ಔಷಧಿ ರೂಪವಾಗಿ ಹಾಕುವುದಕ್ಕಾಗಿ ಅದನ್ನು ತಯಾರು ಮಾಡಲು ಆಲ್ಕೊಹಾಲ್‌ಗೆ ಪರ್ಮಿಟ್ ಕೊಟ್ಟಿದ್ದಾರೆ. ಇನ್ನು ಔಷಧಿ ಅಂಗಡಿಗಳ ಹೆಸರುಗಳನ್ನು ಅಲ್ಲಿ ನೋಡಿದರೆ ಅಮೃತ ಲ್ಯಾಬೊರೇಟರಿ ಎಂಬಂಥ ಬಹು ಸುಂದರವಾದ ಹೆಸರಿನದು ಒಂದು ಇದೆ, ಸುಮಾರು ಶೇಕಡ 80ರಷ್ಟು ಇರತಕ್ಕ ಆಲ್ಕೊಹಾಲ್ ಬಾಟಲುಗಳನ್ನು ತನ್ನ ಅಂಗಡಿಯಿಂದ ಹೊರಕ್ಕೆ ರವಾನಿಸುತ್ತಾನೆ. ಅನೇಕರು ಎಷ್ಟೋ ವರ್ಷಗಳಿಂದ ಸದಸ್ಯರಾಗಿದ್ದಾರೆ. ಆ ರೀತಿ ತೆಗೆದುಕೊಳ್ಳುವುದಕ್ಕಾಗಲಿಲ್ಲ. ಶೇಕಡ 80ರಷ್ಟು ಆಲ್ಕೊಹಾಲ್ ತಯಾರ ಮಾಡುವುದರಿಂದ ಎರಡು ತಿಂಗಳೊಳಗಾಗಿ ಎಂತಹ ಕಾರ್ ಬೇಕಾದರೂ ತರುತ್ತಾನೆ. ಆಗ ಎಂತಹ ಮಂತ್ರಿಮಂಡಲವನ್ನು ಉರುಳಿಸುವುದಕ್ಕೆ ತಯಾರಾಗಿರುತ್ತಾನೆ. ನಿಜವಾಗಿ ಅವನು ಔಷಧಿ ತಯಾರುಮಾಡುವುದಕ್ಕೆ ಇದನ್ನು ಉಪಯೋಗಿಸುತ್ತಿದ್ದಾನೋ ಇಲ್ಲವೋ ಎಂಬುದನ್ನಾಗಲೀ, ಅಥವಾ ಇದರ ಪರ್ಸೆಂಟೇಜ್ ಔಷಧಿಯಲ್ಲಿ ಎಷ್ಟು ಇರಬೇಕೆಂಬುದನ್ನಾಗಲೀ ಯಾರೂ ನೋಡತ್ತಾ

ಇಲ್ಲ. ಇವರು socialist pattern of society ಮಾಡುತ್ತೇವೆಂದು ಹೇಳುತ್ತಾ ಶ್ರೀಮಂತರ ಅಂತಸ್ತನ್ನೇ ಜಾಸ್ತಿ ಮಾಡುವುದಕ್ಕೆ ಅವಕಾಶವನ್ನು ಕೊಡುತ್ತಿದ್ದೀರಿ. ಇನ್ನು ಮದ್ರಾಸ್, ಆಂಧ್ರ, ಸಂಸ್ಥಾನಗಳಲ್ಲಿ ಸೇಂದಿ ಮಾರಾಟಮಾಡಿ, ಸೇಂದಿ ಮರಗಳನ್ನು ಹರಾಜುಮಾಡಿ ಅದರಿಂದ ಬರತಕ್ಕ ಉತ್ಪತ್ತಿಯನ್ನು ನೀರಾವರಿ ಮತ್ತು ವ್ಯವಸಾಯಕ್ಕಾಗಿ ಆದ್ಯತೆ ಕೊಟ್ಟು ದೇಶದಲ್ಲಿ ಆರ್ಥಿಕ ಸಂಪತ್ತು ಉಂಟಾದಮೇಲೆ ಅದರಲ್ಲೂ ಜನರು ಬುದ್ಧಿವಂತರಾದಮೇಲೆ ಈಗ ಅವರು ಪಾನ ನಿರೋಧವನ್ನು ಜಾರಿಗೆ ತರಬೇಕೆಂದು ಹೊರಟಿದ್ದಾರೆ. ಇತ್ತೀಚೆಗೆ ಭಗಿನಿ ಮರಗಳು ಬೇಕಾದಷ್ಟು ಇವೆ. ಆದ್ದರಿಂದ ಪ್ರಾಜೆಕ್ಟ್ ಏರಿಯಾಗಳಲ್ಲಿ ಈ ಪಾನ ನಿರೋಧವನ್ನು ರದ್ದುಮಾಡಿ ಫ್ರೆಂಚ್ ಪಾಲಿಷ್ ಕುಡಿಯುವುದಕ್ಕೆ ಬದಲು ತಕ್ಷಣ ಪ್ರಾಜೆಕ್ಟ್‌ಗಳು ಆಗುವಂತೆ ವ್ಯವಸ್ಥೆಮಾಡಿ ಆಗ ನಾಲ್ಕು ವರ್ಷದಲ್ಲಿ ಆಗುವಷ್ಟು ಕೆಲಸ ಎರಡು ವರ್ಷಗಳಲ್ಲಿಯೇ ಆಗುತ್ತದೆ. ಇದು ಆಲ್-ಇಂಡಿಯಾ ಪಾಲಿಸಿ. ಮಹಾತ್ಮ ಗಾಂಧಿಯವರ ಹೆಸರನ್ನು ಇದರಲ್ಲಿ ಹೇಳುವುದನ್ನು ಕೈಬಿಟ್ಟುಬಿಡಿ. ಚಿಕ್ಕಮಗಳೂರಿನ 800 ಮನೆಗಳ ಪೈಕಿ 700 ಮನೆಗಳಲ್ಲಿ ಇದನ್ನು ಮಾಡುತ್ತಿದ್ದಾರೆ. ಒಬ್ಬ ಪೋಲೀಸ್ ಅಫೀಸರು 3 ಸಾವಿರ ರೂಪಾಯಿಗಳನ್ನು ತೆಗೆದುಕೊಂಡು ಬೇರೆಯವರಿಗೆ ಯಾರಿಗೂ ದುಡ್ಡು ಕೊಡಬೇಡಿ. ಈಚೆಗೂ ಬರಬೇಡಿ ಎಂದು ಹೇಳಿದ್ದಾರೆ. ಈ ರಾಜ್ಯದಲ್ಲಿ ಲಂಚಕೋರತನ, ಭ್ರಷ್ಟಾಚಾರ ಮಾಡುವುದಕ್ಕೆ ಅವಕಾಶವಿಲ್ಲವೆಂಬ ಹೇಳತಕ್ಕವಾದದಿಂದಲೇ ಅನೇಕ ತೊಂದರೆಗಳಾಗುತ್ತಿವೆ. ಪಾನನಿರೋಧವನ್ನು ರದ್ದುಮಾಡಿ ಎಕ್ಸೈಜಿನಿಂದ ಬರತಕ್ಕ ರೆವಿನ್ಯೂವನ್ನು ಜಾಸ್ತಿ ಮಾಡಬೇಕು. ಬೀರ್‌ಷಾಪ್, ಸೇಂದಿ ಅಂಗಡಿಗಳನ್ನು ಹರಾಜು ಮಾಡಬೇಕು. ಎಲ್ಲಿ ಪಾನನಿರೋಧ ಇದೆಯೋ ಅಂತಹ ಕಡೆಗಳಲ್ಲಿ ಮರಗಳನ್ನು ಕಟ್ಟುವುದಕ್ಕೆ ಅವಕಾಶ ಕೊಟ್ಟರೆ ಜನಗಳು ಕೆಟ್ಟುಹೋಗುತ್ತಾರೆ ಮತ್ತು ಅಪರಾಧಿಗಳಾಗುತ್ತಾರೆ. ಮತ್ತೆ ಕಂಟ್ರಾಕ್ಟರ್‌ಸಹ ಹಗಲಿನಲ್ಲಿಯೇ ಅದನ್ನು ಮಾರುವುದಕ್ಕೆ ಅವಕಾಶವಾಗುತ್ತದೆ. ಈ ಬಗ್ಗೆ ಈ ಸರ್ಕಾರದವರು ಏನೇನು ಮಾಡುತ್ತಾರೋ ಎಂಬುದನ್ನು ಇನ್ನೊಂದು ವರ್ಷ ಕಾದು ನೋಡುತ್ತೇವೆ. ಇನ್ನೊಂದುಸಾರಿ ಈ ಶಾಸನದ ಮೇಲೆ ಮಾತನಾಡಲು ಪ್ರಯತ್ನಪಡುತ್ತೇನೆ.

ಇನ್ನು ನ್ಯಾಯಾಂಗ ಖಾತೆಯಲ್ಲಿ ಸೀನಿಯಾರಿಟಿ ಲಿಸ್ಟ್‌ನಲ್ಲಿ ಬಹಳ ತಡವಾಗುತ್ತಿದೆ. ಬಹಳ ಜನಗಳಿಗೆ ಇದರಲ್ಲಿ ಅನ್ಯಾಯವಾಗುತ್ತಿದೆ. ಇಂಥಾದ್ದಕ್ಕೆಲ್ಲಾ ಸರ್ಕಾರದವರು ಅವಕಾಶವನ್ನು ಕೊಡಕೂಡದು ಎಂಬುದಾಗಿ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀಮತಿ ಬಿ. ಎಲ್. ಸುಬ್ಬಮ್ಮ (ಚಿಕ್ಕಮಗಳೂರು).—ಮಾನ್ಯ ಸಭಾಪತಿಯಾವರೇ, ನಮ್ಮ ಮುಂದಿರತಕ್ಕ ರಾಜ್ಯದ ಆಬ್ಕಾರಿ ತೆರಿಗೆ, ವಿಧಾನಮಂಡಲ, ಹಾಗೂ ನ್ಯಾಯಾಂಗ ಆಡಳಿತ—ಈ ಮೂರು ಡಿಮ್ಯಾಂಡುಗಳಿಗೂ ನನ್ನ ಬೆಂಬಲವನ್ನು ಕೊಡುತ್ತಾ ನಾಲ್ಕು ಮಾತುಗಳನ್ನು ಆಡಲು ಬಯಸುತ್ತೇನೆ. ನಾನು ರಾಜ್ಯದ ಆಬ್ಕಾರಿ ತೆರಿಗೆ ವಿಷಯದಲ್ಲಿ ಹೆಚ್ಚು ಪ್ರಸ್ತಾಪ ಮಾಡದೇ ಹೋದರೂ ದೇಶದಾದ್ಯಂತ ಈ ವಿಷಯದಲ್ಲಿ ವಿಪರೀತ ಚರ್ಚೆ ನಡೆಯುತ್ತಿದೆ. ಹಾಗೂ ಸರ್ಕಾರದವರು ಟೇಕ್‌ಚಂದ್ ಸಮಿತಿಯನ್ನು ನೇಮಕ ಮಾಡಿ ಈ ಪಾನನಿರೋಧ ನೀತಿ ಯಾವ ರೀತಿ ನಡೆಯುತ್ತಿದೆ ಇದನ್ನು ಯಾವ ರೀತಿಯಾಲ್ಲಿ ಪರಿಶೀಲನೆ ಮಾಡಬೇಕು ಎನ್ನುವ ಬಗ್ಗೆ ಒಂದು ವರದಿಯನ್ನು ಸಿದ್ಧಮಾಡಿ ಅದನ್ನು ಸದ್ಯದಲ್ಲಿಯೇ ಈ ಸಭೆಯ ಮುಂದೆ ಇಡತಕ್ಕ ಸಮಯ ಹತ್ತಿರವಾಗಿದೆ. ಆದರೆ ಈ ಪಾನದಿಂದ ಎಷ್ಟು ಅನ್ಯಾಯ ದೇಶದಲ್ಲಿ ನಡೆದಿದೆ, ಇದರಿಂದ ಜನಗಳು ಸುರಕ್ಷಿತರಾಗಿಲ್ಲ ಎನ್ನುವ ದೃಷ್ಟಿಯಿಂದ ಈ ಪಾನನಿರೋಧ ನೀತಿಯನ್ನು ಜಾರಿಗೆ ತಂದಿದ್ದಾರೆ. ಆದರೆ ಸರ್ಕಾರದ ಉದ್ದೇಶವೇನೋ ಬಹಳ ಒಳ್ಳೆಯದು. ಸರ್ಕಾರದ ಉದ್ದೇಶಕ್ಕನುಗುಣವಾಗಿ ಈ ಪಾನನಿರೋಧ ನೀತಿ ನಡೆಯುತ್ತಾ ಇದೆಯೇ, ಸರ್ಕಾರದ ಉದ್ದೇಶದ ಹಾಗೆ ಇದರ ಪ್ರತಿಫಲವನ್ನು ಜನತೆ ಅನುಭವಿಸುತ್ತಿದ್ದಾರೆಯೇ ಎನ್ನುವ ವಿಷಯದಲ್ಲಿ ಸರ್ಕಾರದವರು ಬಹುಮಟ್ಟಿಗೆ ಯೋಚನೆಮಾಡಬೇಕಾದುದು ಬಹಳ ಪ್ರಾಮುಖ್ಯವಾದ ವಿಷಯವಾಗಿದೆ.

ಈ ಪಾನನಿರೋಧದ ಕಟ್ಟಳೆಗಳ ಬಲೆಗೆ ಸಾಹುಕಾರರಾಗಲೀ ಅಧಿಕಾರಿಗಳಾಗಿರತಕ್ಕವರಾಗಲೀ ಬೀಳತಕ್ಕ ಅವಶ್ಯಕತೆ ಬರುವುದಿಲ್ಲ. ಸಾಮಾನ್ಯವಾಗಿ ಯಾವ ಬಡ ಜನಗಳಿಗೆ ಅನುಕೂಲ ಮಾಡಬೇಕೆಂದು ಸರ್ಕಾರದವರು ಈ ಪಾನನಿರೋಧವನ್ನು ತಂದಿದ್ದಾರೋ ಅಂಥಾ ಬಡವರೇ ಈ ಕಾನೂನಿನ ಬಲೆಯಲ್ಲಿ ಸಿಕ್ಕಿ ಬಿದ್ದು ನರಳತಕ್ಕ ಪರಿಸ್ಥಿತಿ ದೇಶದಲ್ಲಿ ಜಾಸ್ತಿಯಾಗಿದೆ. ಅದರಲ್ಲೂ ಮಲೆನಾಡಿನ ತೋಟಗಳಲ್ಲಿ ಕೆಲಸಮಾಡತಕ್ಕ ಕೂಲಿಗಾರರನ್ನು ನಾನು ನೋಡಿದ್ದೇನೆ. ಹೆಂಡತಿ ಬಾಣಂತಿಯಾಗಿ ಕುಳಿತುಕೊಂಡು ಅವಳಿಗೆ ಖಾಯಿಲೆಯಾಗಿದ್ದರೆ ಅಂಥಾ ಸಂದರ್ಭದಲ್ಲಿ ಆಕೆಯ ಯಜಮಾನ ಔಷಧಿಯನ್ನು ತರುವುದಕ್ಕೆ ಪೇಟೆಗೆ ಹೋಗಿ ಅದನ್ನು ತರುವಾಗ ಮಧ್ಯದಲ್ಲಿಯೇ ಈ ಒಂದು ದುಶ್ಚಟಕ್ಕೆ ಬಿದ್ದು ಕಳ್ಳಬಟ್ಟಿಯಲ್ಲಿ ತಯಾರಾದ ಮದ್ಯವನ್ನು ಕುಡಿದು ಪೋಲೀಸಿನವರ ಕೈಗೆ ಸಿಕ್ಕಿಬಿದ್ದು ಜೈಲಿಗೆ ಹೋಗಿ ಅವನು ಅಲ್ಲಿ ಬಿದ್ದಿರುತ್ತಾನೆ, ಇಲ್ಲಿ ಮನೆಯಲ್ಲಿ ಹೆಂಡತಿ ಔಷಧಿಯಿಲ್ಲದ ತೊಂದರೆಪಡುತ್ತಿರುವುದನ್ನು ನಾವು ಕಣ್ಣಾರೆ ನೋಡಿದ್ದೇವೆ. ಈ ಕಡೆ ಅನುಕೂಲಸ್ತರು ದೊಡ್ಡ ದೊಡ್ಡ ಕಾರುಗಳಲ್ಲಿ

(ಶ್ರೀಮತಿ ಬಿ. ಎಲ್. ಸುಬ್ಬಮ್ಮ)

ತಿರುಗಾಡತಕ್ಕ ಜನಗಳು ಪರದೇಶದಿಂದ ಬರತಕ್ಕ ಮದ್ಯವನ್ನು ಲಿಕ್ಕರನ್ನು ಬೆಂಗಳೂರಿಗೆ ಬಂದು ತೆಗೆದುಕೊಂಡು ಹೋಗಿ ಕುಡಿಯತಕ್ಕದ್ದನ್ನು ಕೇಳತಕ್ಕವರು ಯಾರೂ ಇಲ್ಲ. ಈ ಪಾನನಿರೋಧದ ನೀತಿಯಿಂದ ದೇಶದಲ್ಲಿ ಸಾಮಾನ್ಯ ಜನತೆಗೆ ಅನಾನುಕೂಲವಾಗತಕ್ಕಂಥ ಒಂದು ಪರಿಸ್ಥಿತಿ ಉಂಟಾಗಿದೆ. ಮೊದಲು ದೇಶದ ಸಂಪಾದನೆಯ ಭಾವನೆಯೂ ನನ್ನಲ್ಲಿತ್ತು. ಆದರೂ ಸಹ ಈ ಪಾನನಿರೋಧ ನೀತಿಗೆ ನಾನು ಬೆಂಬಲವನ್ನು ಕೊಟ್ಟುಕೊಂಡು ಬಂದಿದ್ದೇನೆ. ಇವೊತ್ತು ತೋಟಗಳಲ್ಲಿ ಕೆಲಸ ಮಾಡತಕ್ಕ ಜನ ಮೂರು ದಿವಸ ಕೆಲಸಕ್ಕೆ ಹೋದರೆ ಒಂದು ದಿವಸ ಮನೆಯಲ್ಲಿ ಕುಳಿತುಕೊಂಡಿರುತ್ತಾರೆ. ಮನೆಯಲ್ಲಿ ಕಳ್ಳಭಟ್ಟಿಸಾರಾಯನ್ನು ತಯಾರುಮಾಡಿ ತಮ್ಮ ಸುತ್ತಮುತ್ತ ಇರತಕ್ಕ ಜನಗಳಿಗೆ ಮಾರಿ ಅವರ ಆರೋಗ್ಯವನ್ನೂ ಹಾಳುಮಾಡುತ್ತಾರೆ. ತಮ್ಮ ಆರೋಗ್ಯವನ್ನೂ ಹಾಳು ಮಾಡಿಕೊಳ್ಳುತ್ತಾರೆ. ಈ ಪಾನನಿರೋಧ ನೀತಿಯಿಂದ ಇಂಥಾ ಒಂದು ಪರಿಸ್ಥಿತಿ ಉಂಟಾಗಿದೆ. ಮೊನ್ನೆತಾನೆ ಮಿಲಟರಿ ಆಫೀಸರು ಮಿಲಟರಿಗೆ ರೆಕ್ರೂಟ್ ಮಾಡುವುದಕ್ಕೆ ಚಿಕ್ಕಮಗಳೂರಿಗೆ ಬಂದಿದ್ದಾಗ ಅಲ್ಲಿ ಜನಗಳನ್ನು ಪರೀಕ್ಷೆ ಮಾಡುವಕಾಲದಲ್ಲಿ 100ಕ್ಕೆ 75 ಜನ ರಿಜೆಕ್ಟ್ ಆಗುತ್ತಿದ್ದರು. ನಾನು ಇದನ್ನು ಪ್ರತ್ಯಕ್ಷವಾಗಿ ನೋಡಿದ್ದೇನೆ. ಇದನ್ನು ನೋಡಿದರೆ ಪಾನನಿರೋಧವನ್ನು ಯಾವ ಉದ್ದೇಶಕ್ಕಾಗಿ ಜಾರಿಗೆ ತಂದಿದ್ದರೋ ಅದು ಯಶಸ್ವಿಯಾಗದೆ ಇರುವುದನ್ನು ನಾವು ಪುನಃ ಪರಿಶೀಲನೆ ಮಾಡತಕ್ಕದ್ದು ಬಹಳ ಪ್ರಾಮುಖ್ಯವಾದದ್ದು ಎಂದು ನಾನು ತಿಳಿದುಕೊಂಡಿದ್ದೇನೆ.

ಪೋಲೀಸು ಇಲಾಖೆ ದೇಶದಲ್ಲಿ ರಕ್ಷಣಾ ಇಲಾಖೆ ಎಂದು ನಾನು ತಿಳಿದು ಕೊಂಡಿದ್ದೇನೆ. ಈ ಪೋಲೀಸು ಇಲಾಖೆಗೆ ಮೊದಲು ಒಂದು ಪೂರ್ಣವಾದ ವರ್ಚಸ್ಸು ಇತ್ತು. ಈಗ ಈ ಪಾನನಿರೋಧದ ಮೊಕದ್ದಮೆಗಳಲ್ಲಿ ಅವರು ಕೈ ಹಾಕಿ ಅವರ ಯಾವ ಒಂದು ಮೂಲಭೂತವಾದ ಕರ್ತವ್ಯ ಇತ್ತೋ ಅದನ್ನು ಅವರು ಮರೆತು ಪಾನನಿರೋಧದ ನೀತಿಯೇ ಮುಖ್ಯವೆಂದು ಭಾವಿಸಿಕೊಂಡು ಪಾನ ಮಾಡಿದವರನ್ನು ಹಿಡಿಯುವುದು ಮತ್ತು ಕಳ್ಳಭಟ್ಟಿ ಸಾರಾಯನ್ನು ತಯಾರುಮಾಡತಕ್ಕವರನ್ನು ಹಿಡಿಯತಕ್ಕ ಕಾರ್ಯದಲ್ಲಿ ಕೈ ಹಾಕುವುದಕ್ಕೆ ತೊಡಗಿದ್ದಾರೆ. ಇದರಿಂದಾಗಿ ಅವರು ತಮ್ಮ ಮೂಲಭೂತ ಕಾರ್ಯವನ್ನು ಕೈ ಬಿಟ್ಟು ಹೋಗುವ ಪರಿಸ್ಥಿತಿ ಬಂದಿದೆ. ಅದಕ್ಕೋಸ್ಕರವಾಗಿ ಈ ವಿಷಯವನ್ನು ಪರಿಶೀಲನೆ ಮಾಡಬೇಕು. ಈಗ ಒಂದು ವೇಳೆ ಈ ಪಾನನಿರೋಧ ಬೆಂಗಳೂರಿನಂತಹ ದೊಡ್ಡ ಪಟ್ಟಣಗಳಲ್ಲಿ ನಡೆಯುತ್ತದೆ. ಆದರೆ ಈ ಪಾನನಿರೋಧ ಹಳ್ಳಿಗಳ ಕಡೆ ಬೇರೆ ಜಿಲ್ಲೆಯಲ್ಲಿ ಇಲ್ಲವೇಇಲ್ಲ. ಈ ನಮ್ಮ ಪಾನನಿರೋಧ ನೀತಿಗೆ ಸೇರಿದ ಪ್ರಶ್ನೆ ಬಂದಾಗ ಅದಕ್ಕೆ ಉತ್ತರ ಕೊಡತಕ್ಕದ್ದು ಬಹಳ ಕಷ್ಟವಾಗಿರುವುದರಿಂದ ಅದು ಬಹಳ ಕಷ್ಟವಾಗುತ್ತದೆ. ಇನ್ನು ಈ ವಿಷಯದಲ್ಲಿ ನಾನು ಹೆಚ್ಚು ಪ್ರಸ್ತಾಪಮಾಡುವುದಕ್ಕೆ ಹೋಗದೆ ಶ್ರೀ ಟೇಕ್‌ಚಂದ್ ಅವರ ವರದಿಯು ಬರುವುದು ಸನ್ನಿಹಿತವಾಗಿದೆ. ಅದನ್ನು ನಾವು ಅನುಸರಿಸತಕ್ಕದ್ದು ಬಹಳ ಪ್ರಾಮುಖ್ಯವಾದದ್ದು. ನಮ್ಮ ನೆರೆಯ ರಾಜ್ಯವಾದ ಬೊಂಬಾಯಿ ಪ್ರಾಂತದಲ್ಲಿ ಈಗಾಗಲೇ ಈ ಬಗ್ಗೆ ಒಂದು ಕ್ರಮವನ್ನು ತೆಗೆದುಕೊಂಡಿದ್ದಾರೆ. ಆದರಿಂದ ಜನತೆಗೆ ಅನುಕೂಲವಾಗಬಹುದು. ಈ ಒಂದು ಪ್ರಶ್ನೆ ನಮ್ಮ ಮನಸ್ಸಿನ ಮುಂದೆ ಬರುತ್ತದೆ. ಆದ್ದರಿಂದ ಸರ್ಕಾರದವರು ಇದನ್ನು ನೋಡಿ ಅದು ಸರಿಯಾಗಿದ್ದರೆ ಆ ಒಂದು ಕಾರ್ಯವನ್ನು ಹಿಡಿಯತಕ್ಕದ್ದು ಬಹಳ ಪ್ರಾಮುಖ್ಯವಾದ ವಿಚಾರ ಎಂದು ನಾನು ತಿಳಿದು ಕೊಂಡಿದ್ದೇನೆ.

ಇನ್ನು ನ್ಯಾಯಾಂಗ ಆಡಳಿತದ ಬಗ್ಗೆ ಕೆಲವು ಮಾತುಗಳನ್ನು ಆಡಲು ನಾನು ಬಯಸುತ್ತೇನೆ. ಕೋರ್ಟುಗಳಲ್ಲಿ ಕೇಸುಗಳು, ಒಂದೊಂದು ಮೊಕದ್ದಮೆ ಇದ್ದರೆ ಒಂದು ಕೇಸು ಫೈಸಲಾಗುವುದಕ್ಕೆ ಹತ್ತು ಇಪ್ಪತ್ತು ಸಾರಿ ಕೋರ್ಟಿಗೆ ಹೋಗಿ ಸುತ್ತಿಸುತ್ತಾ ಇರುವುದನ್ನು ನಾನು ನೋಡಿದ್ದೇನೆ. ಇದರಿಂದ ಜನಗಳಿಗೆ ಬಹಳ ತೊಂದರೆಯಾಗುತ್ತಿದೆ. ಆದ್ದರಿಂದ ಕೇಸುಗಳನ್ನು ಜಾಗ್ರತೆಯಾಗಿ ತೀರ್ಮಾನ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕು. ಒಂದು ವೇಳೆ ಕೋರ್ಟುಗಳ ಸಂಖ್ಯೆ ಕಡಿಮೆ ಇದ್ದರೆ ತಾಲ್ಲೂಕುಗಳಲ್ಲಿ ಕೋರ್ಟುಗಳನ್ನು ಹೊಸದಾಗಿ ಪ್ರಾರಂಭಮಾಡಿ ಜನತೆಗೆ ನ್ಯಾಯ ಬಹಳ ಜಾಗ್ರತೆಯಾಗಿ ದೊರೆಯುವ ಹಾಗೆ ಪ್ರಯತ್ನ ಮಾಡಬೇಕು.

ಇನ್ನು ಕೋರ್ಟುಗಳಲ್ಲಿರತಕ್ಕ ಅಮೀನರೇನಿದ್ದಾರೆ ಅವರಿಗೆ ಕೊಡತಕ್ಕ ಸಂಬಳ ಬಹಳ ಕಡಿಮೆ. ಒಬ್ಬ ಅಮೀನ ಚಿಕ್ಕಮಗಳೂರಿನಿಂದ ಅರವತ್ತು ಮೈಲಿ ದೂರದಲ್ಲಿರತಕ್ಕ ಕಳಸಕ್ಕೆ ಸಮನ್ ತೆಗೆದುಕೊಂಡು ಹೋಗಿ ಅಲ್ಲಿ ಅದಕ್ಕೆ ಸಂಬಂಧಪಟ್ಟವರು ಇಲ್ಲದಿದ್ದರೆ ಪಾರ್ಟಿ ಊರಿನಲ್ಲಿ ಇಲ್ಲ ಎಂದು ಬರೆಸಿಕೊಂಡು ಬರುತ್ತಾನೆ. ಅವನಿಗೆ ತುಂಬಾ ಕಷ್ಟವಿದೆ. ಅವನಿಗೆ ಕೊಡತಕ್ಕ ಸಂಬಳ ಬಹಳ ಕಡಿಮೆ ಇದೆ. ಆದ್ದರಿಂದ ಇವರ ವಿಚಾರವನ್ನು ಇದಕ್ಕೆ ಸಂಬಂಧಪಟ್ಟವರು ಯೋಚನೆ ಮಾಡ

ತಕ್ಕದ್ದು ಬಹಳ ಪ್ರಾಮುಖ್ಯವಾದ ವಿಚಾರ ಎಂದು ನಾನು ತಿಳಿದುಕೊಂಡಿದ್ದೇನೆ. ನ್ಯಾಯಾಂಗ ಇಲಾಖೆ ದೇಶದಲ್ಲಿ ಎಲ್ಲಾ ಇಲಾಖೆಗಳಿಗಿಂತಲೂ ಬಹಳ ಶ್ರೇಷ್ಠವಾದದ್ದು. ಯಾವ ಸರ್ಕಾರವಾದರೂ ಬರಲಿ, ಯಾರೇ ಅಧಿಕಾರದಲ್ಲಿ ಇರಲಿ ಕೋರ್ಟು ಇರುವುದರಿಂದ ಜನತೆಗೆ ನ್ಯಾಯ ದೊರೆಯುತ್ತದೆ ಎಂಬ ನಂಬಿಕೆ ಇದೆ. ಇಂಥ ಕೋರ್ಟುಗಳಿಗೆ, ನ್ಯಾಯಾಲಯಗಳಿಗೆ ನಿಜವಾಗಿಯೂ ಯಾವ ಒಂದು ಲಕ್ಷಣ ಇರಬೇಕೋ ಗೌರವ ಪ್ರತಿಷ್ಠೆಗಳು ಇರಬೇಕೋ ಅವು ಇರಬೇಕಲ್ಲದೆ ಅವು ಮತ್ತಷ್ಟು ಜಾಸ್ತಿ ಆಗುವುದಕ್ಕೆ ನಮ್ಮ ಸರ್ಕಾರದವರು ಹೆಚ್ಚಿನ ಪ್ರಯತ್ನವನ್ನು ಮಾಡತಕ್ಕದ್ದು ಬಹಳ ಅವಶ್ಯ ಇದೆ.

ಇನ್ನೊಂದು ವಿಷಯ. ನಮ್ಮ ದೇಶ ವಿಶಾಲವಾದ ಮೇಲೆ ಕೋರ್ಟುಗಳಲ್ಲಿರತಕ್ಕ ಜಡ್ಜಿಗಳ ಸೀನಿಯಾರಿಟಿ ಪಟ್ಟಿ ಇನ್ನೂ ತಯಾರಾಗಿಲ್ಲ ಎಂದು ಹೇಳುತ್ತಾರೆ. ಅದು ಸರ್ಕಾರದಲ್ಲಿ ನಿಧಾನವಾಗಿದೆ. ಹೈ ಕೋರ್ಟಿನಲ್ಲಿ ನಿಧಾನವಾಗಿದೆ ಎಂದು ಹೇಳುತ್ತಾರೆ. ಅದು ಯಾರ ವಿಷಯವೇ ಆಗಿರಲಿ ದೇಶದಲ್ಲಿ ನ್ಯಾಯ ಮೂರ್ತಿಗಳ ಸೀನಿಯಾರಿಟಿ ಪಟ್ಟಿ ನ್ಯಾಯ ರೀತಿಯಿಂದ ಆಗತಕ್ಕಂಥದ್ದು ದೇಶದ ಹಿತದೃಷ್ಟಿಯಿಂದ ಬಹಳ ಮುಖ್ಯ ಎಂದು ನಾನು ತಿಳಿದುಕೊಂಡಿದ್ದೇನೆ. ನ್ಯಾಯಾಂಗ ಮಂತ್ರಿಗಳ ವಿಚಾರದಲ್ಲಿ ನಾವು ಹೆಚ್ಚಿನ ಪ್ರಸ್ತಾಪ ಮಾಡತಕ್ಕ ಅವಶ್ಯಕತೆ ಇಲ್ಲ. ಅವರು ತಮ್ಮ ಕೆಲಸವನ್ನು ನ್ಯಾಯವಾದ ರೀತಿಯಲ್ಲಿ ಮಾಡುತ್ತಾರೆ ಎನ್ನತಕ್ಕ ನಂಬಿಕೆ ದೇಶದಲ್ಲಿ ಇದೆ. ಈಗ ಹೊಸದಾಗಿ ನಮ್ಮ ಸರ್ಕಾರದವರು ಡಿಸ್ಟ್ರಿಕ್ಟ್ ಸೆಷನ್ಸ್ ಕೋರ್ಟನ್ನು ಕೊಡತಕ್ಕ ಒಂದು ಉದ್ದೇಶವನ್ನು ಇಟ್ಟುಕೊಂಡಿದ್ದಾರೆ. ಹಾಗೆ ಅವರು ಅದನ್ನು ಕೊಡುವಾಗ ಎಲ್ಲಿ ಅದರ ಅವಶ್ಯಕತೆ ಹೆಚ್ಚಾಗಿ ಇದೆಯೋ ಮತ್ತು ಕೇಸುಗಳ ಸಂಖ್ಯೆ ಎಲ್ಲಿ ಜಾಸ್ತಿ ಇದೆಯೋ ಅಂಥಾ ಸ್ಥಳಕ್ಕೆ ಮಾತ್ರ ಅದನ್ನು ಕೊಡಬೇಕು. ಆದ್ದರಿಂದ ಆ ದೃಷ್ಟಿಯಿಂದ ಅದನ್ನು ಪರಿಶೀಲನೆ ಮಾಡಿ ಚಿಕ್ಕಮಗಳೂರಿಗೆ ಒಂದು ಡಿಸ್ಟ್ರಿಕ್ಟ್ ಸೆಷನ್ಸ್ ಕೋರ್ಟನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ನಮ್ಮ ಚಿಕ್ಕಮಗಳೂರಿನಲ್ಲಿ ಕೇಸುಗಳ ಸಂಖ್ಯೆ ಏನಿದೆ ಎಂಬುದನ್ನು ಈಗಾಗಲೇ ಬಾರ್ ಅಸೋಸಿಯೇಷನ್ನಿನವರು ನಮ್ಮ ಮಾನ್ಯ ನ್ಯಾಯಾಂಗ ಮಂತ್ರಿಗಳಿಗೆ ಎಲ್ಲಾ ಮಾಡಿಕೊಟ್ಟಿದ್ದಾರೆ. ಆದ್ದರಿಂದ ಆ ಕೆಲಸವನ್ನು ನಮ್ಮ ಮಾನ್ಯ ನ್ಯಾಯಾಂಗ ಮಂತ್ರಿಗಳು ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನೂ ನಮ್ಮ ಮಾನ್ಯ ಸದಸ್ಯರಾದ ಮುಕ್ಕಣ್ಣಪ್ಪನವರು ಭಾಷಣ ಮಾಡುತ್ತಾ ಸರ್ಕಾರದಲ್ಲಿ ಕೆಲವು ಅಧಿಕಾರಿಗಳನ್ನು ನೇಮಕ ಮಾಡಿಕೊಳ್ಳತಕ್ಕ ಸಂದರ್ಭದಲ್ಲಿ ಜಾತೀಯತೆ ನಡೆದಿದೆ ಎನ್ನತಕ್ಕ ಪ್ರಸ್ತಾಪವನ್ನು ಮಾಡಿದರು. ಅಂಥಾದ್ದು ಯಾವುದೂ ನಡೆದಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಕೆಲವು ಸಂದರ್ಭಗಳಲ್ಲಿ ನ್ಯಾಯ ವಾದವನ್ನು ಎತ್ತಿ ಹಿಡಿಯ ಬೇಕಾದರೆ ನಿಷ್ಪಕ್ಷಪಾತವಾಗಿ ನ್ಯಾಯವಾಗಿರತಕ್ಕ ಅಧಿಕಾರಿಗಳನ್ನು ಮತ್ತು ಪ್ಲೀಡರುಗಳನ್ನೂ ನೇಮಕ ಮಾಡುವುದರಿಂದ ದೇಶಕ್ಕೆ ಅನುಕೂಲವಾಗುತ್ತದೆ. ಪಬ್ಲಿಕ್ ಪ್ರಾಸಿಕ್ಯೂಟರ್ ನೇಮಕದ ವಿಷಯದಲ್ಲಿ ಜಾತೀಯತೆ ನಡೆದಿದೆ ಎಂದು ಕೆಲವರು ಹೇಳಿದರು. ನ್ಯಾಯವಾದವನ್ನು ಎತ್ತಿ ಹಿಡಿಯಬೇಕಾದರೆ ದಕ್ಷರಾದಂಥವರನ್ನು ನೇಮಿಸಿಕೊಳ್ಳುವುದು ದೇಶದ ಹಿತದೃಷ್ಟಿಯಿಂದ ಪ್ರಾಮುಖ್ಯವಾದದ್ದು ಎಂದು ನಾನು ತಿಳಿದುಕೊಂಡಿದ್ದೇನೆ. ಪ್ಲೀಡರುಗಳನ್ನೂ ಮತ್ತು ಪಬ್ಲಿಕ್ ಪ್ರಾಸಿಕ್ಯೂಟರುಗಳನ್ನು ನೇಮಕ ಮಾಡುವಾಗ ನ್ಯಾಯ ಶಾಸ್ತ್ರವನ್ನು ಚೆನ್ನಾಗಿ ತಿಳಿದುಕೊಂಡಿರತಕ್ಕವರನ್ನೂ ಮತ್ತು ದಕ್ಷರಾದಂಥವರನ್ನೂ ನೇಮಿಸಿಕೊಂಡರೆ ಅದರಿಂದ ದೇಶದ ಜನತೆಗೆ ಹೆಚ್ಚಿನ ನ್ಯಾಯ ದೊರಕುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ.

ಇನ್ನು ಜಡ್ಜಿಗಳನ್ನು ನೇಮಿಸತಕ್ಕ ವಿಷಯದಲ್ಲಿ ಒಂದು ಮಾತನ್ನು ನಾನು ಹೇಳಬಯಸುತ್ತೇನೆ. ಜಡ್ಜಿಗಳನ್ನು ನೇಮಿಸುವಾಗ ಒಳ್ಳೆಯ ಉತ್ತಮರಾದಂಥವರನ್ನೂ ಮತ್ತು ದಕ್ಷರಾದಂಥವರನ್ನೂ ನೇಮಿಸಬೇಕು. ಈಗ ಕೇರಳದಲ್ಲಿ ಅನ್ನ ಚಾಂಡಿ ಎನ್ನುವ ಮಹಿಳೆಯೊಬ್ಬರನ್ನು ಹೈ ಕೋರ್ಟ್ ನ್ಯಾಯಾಧೀಶರಾಗಿ ನೇಮಿಸಿದ್ದಾರೆ. ಅವರು ಯಾರಿಗಿಂತಲೂ ಕಡಿಮೆ ಇಲ್ಲ. ದೇಶದ ನ್ಯಾಯಗಳನ್ನು ತೀರ್ಮಾನ ಮಾಡುತ್ತಿದ್ದಾರೆ. ಅವರು ಅಲ್ಲಿ ಆ ಪದವಿಗೆ ಅರ್ಹರಾಗಿದ್ದಾರೆ. ದಕ್ಷತೆಯಿಂದ ನ್ಯಾಯವನ್ನು ತೀರ್ಮಾನ ಮಾಡುತ್ತಿದ್ದಾರೆ. ಆದ್ದರಿಂದ ಹಾಗೆಯೇ ಮೈಸೂರಿನ ಹೈ ಕೋರ್ಟು ಇತಿಹಾಸ ಪ್ರಸಿದ್ಧವಾದದ್ದು. ಇಲ್ಲಿಯೂ ಸಹ ಯಾರಾದರೂ ಮಹಿಳೆಯರು ಉತ್ತಮರಾದವರು, ಸಮರ್ಥರಾದವರು, ಯೋಗ್ಯತೆ ಇದ್ದವರು, ಅಡ್ವೊಕೇಟ್‌ಗಳಾಗಿ ಅನುಭವವನ್ನು ಪಡೆದಿರತಕ್ಕವರು ಇದ್ದರೆ ಅಂಥವರಿಗೆ ಹೈ ಕೋರ್ಟ್‌ನಲ್ಲಿ ನ್ಯಾಯಾಧೀಶರನ್ನಾಗಿ ನೇಮಕ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕು. ನಮ್ಮ ಮಹಿಳೆಯರಿಗೂ ಕೂಡ ನ್ಯಾಯವಾದವನ್ನು ಎತ್ತಿ ಹಿಡಿದು ನಿಷ್ಪಕ್ಷಪಾತವಾದಂತಹ ಒಂದು ನ್ಯಾಯವನ್ನು ತೀರ್ಮಾನ ಮಾಡತಕ್ಕಂಥ ಒಂದು ಅರ್ಹತೆ ಇದೆ. ಆದ್ದರಿಂದ ಅವರಿಗೆ ಅಂಥಾ ಒಂದು ಅವಕಾಶವನ್ನು ಅವರಿಗೆ ಕಲ್ಪಿಸಿಕೊಟ್ಟು ಅವರು ತಮ್ಮ ಪ್ರತಿಭೆಯನ್ನು ತೋರಿಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳಿ ಈ ಸಮಯದಲ್ಲಿ ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಬೈರಪ್ಪಾಜಿ (ತುರುವೇಕೆರೆ).—ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಮುಂದಿರುವ ಬೇಡಿಕೆಗಳ ಬಗ್ಗೆ ಮಾತನಾಡುತ್ತ ಸರ್ಕಾರಕ್ಕೆ ಕೆಲವು ಸಲಹೆಗಳನ್ನು ಕೊಟ್ಟು ಕೆಲವು ನಿಷ್ಠುರವಾದ ಮಾತುಗಳನ್ನು ಹೇಳಬಯಸುತ್ತೇನೆ.

ಪಾನನಿರೋಧ ನೀತಿ ಏನಿದೆ. ಈ ಒಂದು ಅಸ್ಪಷ್ಟವಾದ ನೀತಿಯ ದೆಸೆಯಿಂದ ಜನತೆಯ ನೈತಿಕ ಮಟ್ಟ ದಿನೇ ದಿನೇ ಕೃಶವಾಗುತ್ತಿದೆ ಎಂದರೆ ತಪ್ಪಾಗಲಾರದು. ಇದೇ ಅಸ್ಪಷ್ಟವಾದ ನೀತಿಯನ್ನು, ಧೋರಣೆಯನ್ನು ಸರ್ಕಾರ ಬೆಳಸುತ್ತಾ ಹೋದರೆ ಮುಂದಿನ ಪೀಳಿಗೆ ಬಹಳ ಹೀನಸ್ಥಿತಿಗೆ ಬರಬಹುದು ಎಂದು ನಾನು ವಿಷಾದದಿಂದ ಹೇಳುತ್ತೇನೆ. ಅಬ್ಕಾರಿ ಮಂತ್ರಿಗಳು ಈ ಬಗ್ಗೆ ಯಾವ ಗಮನವನ್ನೂ ಹರಿಸದೆ ಇರುವುದು ಬಹಳ ವಿಷಾದವಾದ ಸಂಗತಿ. ಅವರು ಬಹಳ ನಿಸ್ಪೃಹತೆಯಿಂದ ದಕ್ಷತೆಯಿಂದ ಕೆಲಸಮಾಡತಕ್ಕ ಮಂತ್ರಿಗಳು ಎಂದು ಶ್ರೀಮಾನ್ ಮುಕ್ಕಣ್ಣಪ್ಪನವರು ಹೇಳಿದರು. ಆದರೆ ಮಾನ್ಯ ಮಂತ್ರಿಗಳು ಸದಸ್ಯರ ಟೀಕೆಗಳನ್ನೂ ಬಹಳ ಲಘುವಾಗಿ ತಿಳಿದುಕೊಳ್ಳುತ್ತಿದ್ದಾರೆಂದು ಬಹಳ ವಿಷಾದದಿಂದ ಹೇಳುತ್ತಿದ್ದೇನೆ. ಹಿಂದೆ ಕದ್ದು ಕುಡಿಯುತ್ತಿದ್ದರು. ಸಾಯಂಕಾಲದ ಹೊತ್ತು ತಮ್ಮ ಗ್ರಾಮದ ಪಕ್ಕದಲ್ಲಿರುವ ಅಂಗಡಿಗೋ ಅಥವಾ ಬೇರೆ ಕಡೆ ಎಲ್ಲಿಯಾದರೂ ಇರುವ ಅಂಗಡಿಗೋ ಕದ್ದುಹೋಗಿ ಕುಡಿದು ಬಂದು ತಮ್ಮ ವಸತಿಯ ಮನೆಯನ್ನು ಸೇರುತ್ತಿದ್ದರು. ಅಂಥ ಕಾಲವಿತ್ತು. ಆದರೆ ಈಗ ಪೋಲೀಸಿನವರ ಎದುರಿಗೆ, ಜನಗಳ ಎದುರಿಗೆ ಕುಡಿದು ರಸ್ತೆಯಲ್ಲಿ ಚೆಲ್ಲಾಪಿಲ್ಲಿಯಾಗಿ ಬಿದ್ದುಕೊಂಡು ಕುಡಿಯುವುದನ್ನು ಕೂಡ ಕಾಣುತ್ತೇವೆ. ಇದಕ್ಕೆ ನಿದರ್ಶನಗಳನ್ನು ಹೇಳಬೇಕಾಗಿಲ್ಲ. ಮೊನ್ನೆ ತಾನೇ ಅರಸೀಕೆರೆ ತಾಲ್ಲೂಕಿನಲ್ಲಿ ಈಚಲು ಮರದಿಂದ ಹೆಂಡವನ್ನು ಇಳಿಸಿ ಬಹಿರಂಗವಾಗಿ ಹಗಲು ಹೊತ್ತು ಮಾರುತ್ತಿದ್ದ ಒಂದು ಪ್ರಕರಣ ಇಡೀ ರಾಜ್ಯದಲ್ಲಿ ಎಲ್ಲರಿಗೂ ತಿಳಿಯುವಂತೆ ವರ್ತಮಾನ ಪತ್ರಿಕೆಗಳಲ್ಲಿ ಬಂತು. ಇಷ್ಟಾದರೂ ಕೂಡ ಸರ್ಕಾರ ಇದೆ ಎಂದು ಹೇಳುವುದಾದರೆ, ಇಂಥ ಕೆಳಮಟ್ಟಕ್ಕೆ ಹೋಗಿರುವ ಅಸ್ಪಷ್ಟವಾದ ನೀತಿಯಿಂದ ದೇಶದ ಜನತೆ ನೀತಿ ಬಾಹಿರರಾಗುವುದಕ್ಕೆ ಅವಕಾಶವನ್ನು ಕೊಟ್ಟಿರುವುದು ಬಹಳ ದುರದೃಷ್ಟಕರ ಸಂಗತಿ. ಸರ್ಕಾರಕ್ಕೆ ನೋವಾದರೂ ಕೂಡ ಒಂದು ಮಾತನ್ನು ಹೇಳುತ್ತೇನೆ. ನಾವು ಗಾಂಧಿವಾದಿಗಳು, ಗಾಂಧೀಜಿಯವರ ಮೊಮ್ಮಕ್ಕಳು, ನಾವು ಗಾಂಧೀಜಿಯ ಹೆಸರನ್ನು ಹೇಳಿಕೊಂಡು ದೇಶವನ್ನು ಕಟ್ಟುತ್ತೇವೆ, ದೇಶವನ್ನು ಆಳುತ್ತೇವೆ ಎಂದು ಏನು ತತ್ವವನ್ನು ಹೇಳಿಕೊಂಡು ಹೊರಟಿದ್ದೀರಿ, ಆ ಒಂದು ತತ್ವಕ್ಕೆ, ಆ ಪುಣ್ಯಾತ್ಮನ ಹೆಸರನ್ನು ಹೇಳತಕ್ಕ ಕೆಲಸಕ್ಕಾದರೂ ಕೂಡ ವಂಚನೆ ಮಾಡದೆ ಈ ಒಂದು ತತ್ವವನ್ನು ನಿಷ್ಠುರವಾಗಿ, ಕಡ್ಡಾಯವಾಗಿ ಜಾರಿಗೆ ತರತಕ್ಕ ಪ್ರವೃತ್ತಿ ತಮ್ಮಲ್ಲಿ ಬೆಳೆಯಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ.

ಹಳ್ಳಿಗಳಲ್ಲಿ ಮರಗಳಲ್ಲಿ ಚಕ್ಕೆಯೇ ಇರುವುದಿಲ್ಲ. ಬೇಲದ ಮರಗಳಲ್ಲಿ ಸ್ವಲ್ಪವೂ ಚಕ್ಕೆ ಉಳಿದಿಲ್ಲ. ಇನ್ನು ಮುಂದೆ ಆಲದ ಮರ ಅಥವಾ ಬೇರೆ ಯಾವುವಾದರೂ ಮರಗಳಿಗೆ ಕೈ ಹಾಕುತ್ತಾರೆ. ಬೆಲ್ಲದ ಧಾರಣೆ ನೋಡಿದರೆ ಹೆಚ್ಚಾಗುತ್ತಿದೆ. ಕಳ್ಳಭಟ್ಟಿ ತಯಾರಿಕೆಗೆ ಬೆಲ್ಲವನ್ನು ಉಪಯೋಗಿಸುವುದೇ ಬೆಲ್ಲದ ಧಾರಣೆ ಹೆಚ್ಚುವುದಕ್ಕೆ ಕಾರಣವಾಗಿದೆ. ಇದು ಜಗತ್ತಿಗೇ ಗೊತ್ತಿದೆ. ಆ ಮಂತ್ರಿಗಳಿಗೂ ಗೊತ್ತಿದೆ. ಆದರೂ ಬಹಳ ಲಘುವಾಗಿ ತೆಗೆದುಕೊಳ್ಳುತ್ತಿದ್ದಾರೆ. ಇದು ಸಲ್ಲತಕ್ಕ ಮಾರ್ಗವಲ್ಲ. ನೀವುಗಳು ಗಾಂಧೀವಾದಿಗಳಾಗಿ ಗಾಂಧೀಜಿಯವರ ಹೆಸರನ್ನು ಹೇಳುವುದಕ್ಕೂ ಲಾಯಖ್ ಆಗುವುದಿಲ್ಲ. ಈ ಒಂದು ಶಾಸನವನ್ನು ಜಾರಿಗೆ ತರುವುದರಲ್ಲಿ ಕೆಲವು ಕಡೆ ಬಿಟ್ಟಿರುತ್ತೀರಿ. ತುಮಕೂರು ಜಿಲ್ಲೆಯಲ್ಲಿ ಕುಡಿಯುವವನು ಅಯೋಗ್ಯ, ಬೆಂಗಳೂರು ಜಿಲ್ಲೆಯಲ್ಲಿ ಕುಡಿಯುವವನು ಯೋಗ್ಯ ಎನ್ನುವಂಥ ಅಸ್ಪಷ್ಟವಾದ ನೀತಿ ಏನಿದೆ, ಸರ್ಕಾರದ ನಿಲುವೇನಿದೆ ಅದು ಸರಿಯಲ್ಲ. ತಮ್ಮ ಧೋರಣೆಯನ್ನು ಬದಲಾಯಿಸಿ ಜನತೆ ಕುಡಿಯಬಾರದು ಎನ್ನುವುದನ್ನು ಕಡ್ಡಾಯವಾಗಿ, ನಿಷ್ಠುರವಾಗಿ ಜಾರಿಗೆ ತರುವುದಕ್ಕೆ ನಿಮ್ಮ ಅಧಿಕಾರಿಗಳಿಗೆ ಸೂಚನೆಯನ್ನು ಕೊಡಿ. ರಾಜ್ಯದಲ್ಲಿ ಭ್ರಷ್ಟಾಚಾರ ಹೆಚ್ಚಾಗುತ್ತಿದೆ, ಜನತೆಯಲ್ಲಿ ಭ್ರಷ್ಟಾಚಾರ ಹೆಚ್ಚಾಗುತ್ತಿದೆ, ಅಧಿಕಾರಿಗಳಲ್ಲಿ ಕೂಡ ಭ್ರಷ್ಟಾಚಾರ ಹೆಚ್ಚಾಗುತ್ತಿದೆ. ಇದಕ್ಕೆ ಪಾನನಿರೋಧ ಕಾನೂನೂ ಕಾರಣವೆಂದು ಹೇಳುತ್ತೇನೆ. ಕುಡಿಯುವುದನ್ನು ತಪ್ಪಿಸಬೇಕು, ನಿಸ್ಪೃಹತೆಯಿಂದ ದಕ್ಷತೆಯಿಂದ ಕೆಲಸ ಮಾಡಬೇಕು ಎನ್ನುವುದಾದರೆ ಪಾನನಿರೋಧವನ್ನು ಕಟ್ಟುನಿಟ್ಟಾಗಿ ಇನ್ನುಮುಂದಾದರೂ ಕೂಡ ಜಾರಿಗೆ ತರುತ್ತೀರೆಂದು ಆಶಿಸುತ್ತೇನೆ.

ಸ್ವಾಮಿ, ನ್ಯಾಯಾಂಗ ಖಾತೆಯಲ್ಲಿ ಯಾರಿಗೇ ಆಗಲಿ ಜಾತೀಯ ಮನೋಭಾವನೆ ಬರಬಾರದು. ಬಹಳ ದಕ್ಷತೆಯಿಂದ ನ್ಯಾಯವನ್ನು ಎತ್ತಿ ಹಿಡಿಯತಕ್ಕ ನ್ಯಾಯಾಧಿಪತಿಗಳು ಬೇಕು. ಜಾತಿ ಮತ ಇರಬಾರದು. ಅಂಥಾದ್ದು ನಡೆದಿಲ್ಲವೆಂದು ನಾವಾದರೂ ಭಾವಿಸುತ್ತೇವೆ. ನಡೆದಿದ್ದರೆ, ಇನ್ನು ಮುಂದಾದರೂ ನಡೆಯದಂತೆ ಈ ಇಲಾಖೆಯನ್ನು ಕೊಂಡೊಯ್ಯುವ ಜವಾಬ್ದಾರಿ ತಮ್ಮ ಮೇಲೆ ಇದೆ.

ಸೀನಿಯಾರಿಟಿ ಪಟ್ಟಿಯ ಬಗ್ಗೆ ಹೊರಗಡೆ ಜನಗಳು ಟೀಕೆ ಮಾಡುತ್ತಾರೆ. ಅಂಥ ಟೀಕೆಗಳಿಗೆ ಅವಕಾಶ ಕೊಡದೆ ನ್ಯಾಯ ಇಲಾಖೆ ಬಹಳ ಉತ್ತಮ ಮಟ್ಟದಲ್ಲಿ ನ್ಯಾಯವನ್ನು ಎತ್ತಿ ಹಿಡಿಯುತಕ್ಕ ಯಂತ್ರವಾಗಲಿ, ದೇಶದ ಜನತೆಯ ಹಿತಕ್ಕೆ ಧಕ್ಕೆಬಾರದಂತೆ ಆ ಇಲಾಖೆ ವರ್ತಿಸಲಿ ಎಂದು ಹೇಳಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಂಥ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

SRI K. S. SURYANARAYANA RAO (Mysore City).—I would like to support the Demand of this grant. While doing so, I would like to offer a few suggestions for consideration of the Government. The first and foremost that is in my mind at the present moment is about the legislature. I do not wish to go into details or to debate about the Demands. I wholeheartedly welcome the self-denying ordinance as suggested by the Law Minister. I only wish and pray that such high traditions will be maintained and no occasion will arise hereafter where the Demand of the legislature comes to criticism on the floor of this House. I leave it at that because when we prescribe conventions for ourselves, it is hoped that they also practice them with a full sense of responsibility.

With regard to the policy of prohibition I would like to say a few words. If prohibition has failed or is on the way to failure, it is because of the policy of the State Government. If they mean effective control, it is not very difficult. But unfortunately what happens is that we ourselves are not decided about the future of the prohibition policy. Discussions go on about the possibility of the rivision of this policy. If men at the helm of affairs begin to think aloud about this matter, it is but natural the administration also slackens. Therefore there is no point in blaming the administration or the implementing authority. The blame lies not only on the implementing authority but more so on the policy makers. If we feel that we can effectively implement it, let us do it. On the contrary, if we feel diffident about enforcing it, let us not make a secret about it and let us boldly say that we shall not have it. Personally I am not speaking anything against the Minister in charge of this demand because whatever be his views, I am sure it cannot be implemented fully because there are certain antecedent circumstances. Unless the State makes up its mind to take a decision one way or the other, this policy is not going to succeed whatever be the punitive punishment and whatever be the code of conduct we may prescribe for the implementing authority. The Finance Minister in his budget speech gives statistics for three years and says that there has been a decrease in the number of cases detected. If the number of cases detected is less, that will not prove the case. It may be that the people who are used to this job have grown intelligent and have many more ways of evading it, I do not say that it has failed hundred per cent. Aclass of people have arisen in society—it is rather a dangerous class of people because this illicit distillation brings money without effort and much physical labour. I would not say, risk because there is risk of being caught and if he is caught he knows how to get out. He will put somebody in charge of the whole thing and walks away with the money. People have grown wise. Therefore, it is rather very difficult to enforce prohibition. Illicit distillation can be stamped out only by educating public not to drink.

(SRI K. S. SURYANARAYANA RAO)

I know particular cases where men of influence resort to illicit carrying of prohibited articles I know of cases where articles have been seized and even carts are seized but I do not know what has happened thereafter. I can say without any fear of contradiction that that case was not taken notice of because the persons involved were such. Such things should not happen. Whoever be the person, to whatever party he may belong or whatever be his position in society, he should not be allowed to go scotfree. A class of people who have absolutely no stake are having large sums of money with them. They are even prepared to spend that money against a person who opposes. I know of instances where there they say that they will spend money to defeat their rivals in the election to the Taluk Board or to the Assembly election. This is because they have money to which they have no legitimate claim. With huge sums of money with such unscrupulous persons in society, the society is going in the wrong direction. It is not that the Minister does not know these things. I therefore appeal to him to make up his mind and take a decision one way or the other. I do not know how the Minister feels about the administration of prohibition and implementation of prohibition being with two different departments If we take the implementation of this policy from the police force and tag it on to the Minister in charge of prohibition, possibly he will take strong measures to see that such a thing does not happen. This dual control is another thing that is responsible for the weak implementation of this policy. It is not that people have taken to drink. It is true that people who were not used to drink have taken to it and that people who were used to it have given it up. It is said that those who were used to it have started this trade, but they do not do it themselves. The anomaly is that it is not an offence if we drink in Bangalore but it is an offence if we drink in Tumkur or Mandya. Things will begin to flow from Bangalore or from where it is wet to a place where it is dry. Therefore, we should introduce total prohibition. If that is not possible, let us put certain restrictions in respect of the quantity and the places where drinking may be allowed, if we are definite about its failure. Otherwise, take a bold step and enforce it well. Anyway, let us await the Tekchand Committee Report. But before the auction season starts, Government should take a decision and make bold to announce its policy and implement it with full throat.

On the Adiministration of Justice, I want to say one word. I do not wish to comment on the conduct of the members of the judiciary or the officers of the court. It is commonly said—I do not wish to associate with it that the standards have fallen in the adiministration of justice. I wish the Law Minister gives thought to this matter and see how best to tone up adiministration of justice.

3-30 P.M.

The other point I would like to mention is about the Stenographers. The Stenographers in the High Court are differentiated from the

Stenographers in the District Court and the lower court. I did bring this to the notice of the Finance Minister once. I am sorry I did not mention this to the Law Minister, but I am telling him now. There is some disparity between the Stenographers in the High Court and those in the District Court and the lower court. I wish there was uniform scales of pay and service conditions for all Stenographers, whether they be in the High Court or in the District Court or lower court.

Then there is another doubt in my mind. I do not know whether that subject is really relevant on this demand, but there is a cut motion before us on that subject and that is about the Law Colleges. I do not know whether the Law Minister has got anything to do with administration of Law Colleges. Anyway since there is a cut motion, I would like to mention this point.

Sri M. V. RAMA RAO.—Anything pertaining to Law Colleges would not fall within the ambit of the demands now.

Sri K. S. SURYANARAYANA RAO.—I was also thinking like that, but since there is a cut motion on the subject before us, I would like to say a word about it. Sometime ago the Government passed an order reducing the fees in all colleges. They said it applies to law colleges also. But I understood this morning that this fee reduction has not been made applicable to Law Colleges in spite of the assurance given on the floor of the House and also the G.O issued. If that is a fact, I only request Government through the Law Minister to rectify this mistake and see that the fee in Law Colleges is reduced to the standard prevailing in other colleges and these students are helped to take their examinations to start next week.

ಶ್ರೀ ಪಿ. ವೆಂಕಟಗಿರಿಯಪ್ಪ (ಕೋಲಾರ).—ಸ್ವಾಮಿ, ಸಭೆಯ ಮುಂದೆ ಚರ್ಚೆಗೆ ಬಂದಿರುವ ಬೇಡಿಕೆಗಳ ಬಗ್ಗೆ ಒಂದೆರೆಡು ಮಾತು ಹೇಳಲು ಬಯಸುತ್ತೇನೆ. ಪಾನ ನಿರೋಧ ವಿಚಾರದಲ್ಲಿ ಅನೇಕ ಸ್ನೇಹಿತರು ಮಾತನಾಡಿ ಕೆಲವು ವಿಷಯಗಳನ್ನು ಈಗಾಗಲೇ ಸಭೆಯ ಮುಂದೆ ಇಟ್ಟಿದ್ದಾರೆ. ಈ ವಿಷಯ ಬಹಳ ಪ್ರಾಮುಖ್ಯವಾದುದು. ಆಡಳಿತ ಪಕ್ಷದ ಕೆಲವು ಸದಸ್ಯರು ಹೇಳಿದರು. ಮಹಾತ್ಮಾ ಗಾಂಧೀಜಿಯವರು ಹೇಳಿರುವಂತೆ ಪಾನ ನಿರೋಧ ನೀತಿ ಅನುಸರಿಸಿಕೊಂಡು ಬಂದಿದ್ದೇವೆ, ಇದರಿಂದ ದೇಶದ ಕಲ್ಯಾಣವಾಗುತ್ತದೆ, ಜನತೆಯ ಹಿತದೃಷ್ಟಿಯಿಂದ ಈ ಶಾಸನವನ್ನು ಮುಂದುವರಿಸಿಕೊಂಡು ಬಂದಿದ್ದೇವೆ ಎಂದು ಹೇಳಿದರು. ಆದರೆ ಇಂದು ಪಾನ ನಿರೋಧ ನೀತಿಯ ವಿಷಯದಲ್ಲಿ ಬಹಳ ಜಿಜ್ಞಾಸೆ ಉಂಟಾಗಿದೆ, ಚರ್ಚೆ ನಡೆಯುತ್ತಿದೆ. ಆದುದರಿಂದ ಪಾನ ನಿರೋಧ ಇರುವುದು ಸರಿಯೇ, ಅದು ಯಶಸ್ವಿಯಾಗಲು ಸಾಧ್ಯವಿದೆಯೇ ಎಂಬುದನ್ನು ಪರಿಶೀಲನೆ ಮಾಡಬೇಕಾಗಿದೆ. ಇದಕ್ಕಾಗಿ ಕೇಂದ್ರ ಸರಕಾರದವರು ಟೇಕ್‌ಚಂದ್ ಕಮಿಟಿ ನೇಮಕ ಮಾಡಿದ್ದಾರೆ. ಸಮಿತಿಯ ವರದಿ ದೇಶದ ಮುಂದೆ ಸರಕಾರ ಇಡುತ್ತಾರೆ. ಎಂದು ನನಗೆ ಅನಿಸುತ್ತದೆ. ಪ್ರಪಂಚದಲ್ಲಿ ಯಾವ ದೇಶದಲ್ಲಿಯೂ ಕೂಡ ಪಾನ ನಿರೋಧ ಯಶಸ್ವಿಯಾಗಿಲ್ಲ. ಈ ವಿಚಾರದಲ್ಲಿ ಒಬ್ಬ ಪರದೇಶದ ಡೈಸನ್ ರಾಟೀರ್ ಎಂಬ ಲೇಖಕರು ಒಂದು ಪುಸ್ತಕ ಬರೆದಿದ್ದಾರೆ. ಅದನ್ನು ಮಾನ್ಯ ಮಂತ್ರಿಗಳಿಗೆ ಕೊಡಬೇಕೆಂದು ಇದ್ದೇನೆ. ಅಮೇರಿಕಾದಲ್ಲಿಯೂ ಕೂಡ ಪಾನ ನಿರೋಧ ಯಶಸ್ವಿಯಾಗಿಲ್ಲ ಎಂದು ಅವರು ಪುಸ್ತಕದಲ್ಲಿ ಬರೆದಿದ್ದಾರೆ. ನಮ್ಮ ದೇಶದಲ್ಲಿಯೂ ಕೂಡ ಮಹಾರಾಷ್ಟ್ರ ರಾಜ್ಯದ ಮುಖ್ಯ ಮಂತ್ರಿಗಳು ಇದನ್ನು ಸಡಿಲಗೊಳಿಸಿ ಬೇರೆ ರೂಪದಲ್ಲಿ ಅದನ್ನು ಈಗ ತಂದಿದ್ದಾರೆ. ಉತ್ತರ ಪ್ರದೇಶದ ಶ್ರೀ ಗುಪ್ತಾ ಅವರೂ ಕೂಡ ಜಾರಿಗೆ ತರಲು ಸಾಧ್ಯವಿಲ್ಲ ಬದಲಾವಣೆ ಮಾಡಬೇಕು ಎಂದು ಒಪ್ಪಿಕೊಂಡಿದ್ದಾರೆ. ಅನೇಕ ತಜ್ಞರು ಕೂಡ ಇದೇ ರೀತಿಯಾಗಿ ಹೇಳಿದ್ದಾರೆ. ಆದುದರಿಂದ ನಮ್ಮ ದೇಶದ ಪರಿಸ್ಥಿತಿಯಲ್ಲಿ ಪಾನ ನಿರೋಧ ಜಾರಿಗೆ ತರುವುದು ಸಾಧ್ಯವಿಲ್ಲ. ಹೀಗೆ ಇದ್ದರೂ ಕೂಡ ನಮ್ಮ ರಾಜ್ಯ ಸರಕಾರ ಬೇರೆ ನಿಲುವು ತಾಳಿದ್ದಾರೆ. ನಮ್ಮ ಮುಖ್ಯ ಮಂತ್ರಿಗಳು ಬೊಂಬಾಯಿಯಲ್ಲಿ ಒಂದು ಹೇಳಿಕೆ ಕೊಟ್ಟಿದ್ದಾರೆ, ದಿಲ್ಲಿಯಲ್ಲಿ ಮತ್ತೊಂದು ಹೇಳಿಕೆ ಕೊಟ್ಟಿದ್ದಾರೆ.

(ಶ್ರೀ ಪಿ. ವೆಂಕಟಗಿರಿಯಪ್ಪ)

ಅವರಿಗೆ ಒಂದು ಖಚಿತವಾದ ನಿಲುವು ಇದ್ದ ಹಾಗೆ ಕಾಣುವುದಿಲ್ಲ. ಬದಲಾವಣೆ ಮಾಡುವುದಕ್ಕೆ ಒಪ್ಪಿಕೊಂಡ ಹಾಗೆ ಕಾಣಿಸುತ್ತದೆ. ಆದರೆ ಪಾನ ನಿರೋಧ ಮಂತ್ರಿಗಳು ಮಾತ್ರ ಬಹಳ ಹಟ ಮಾರಿ ಸ್ವಭಾವದವರಾಗಿದ್ದಾರೆ. ಚಿಕ್ಕ ವಯಸ್ಸಿನಿಂದ ಅವರನ್ನು ನಾನು ಬಲ್ಲೆ. ಅವರ ಸ್ವಭಾವ ನನಗೆ ಗೊತ್ತು.

ಅಧ್ಯಕ್ಷರು.—ಅವರು ಹಟವಾದಿ ಇಲ್ಲ.

ಶ್ರೀ ಪಿ. ವೆಂಕಟಗಿರಿಯಪ್ಪ.—ಹಳ್ಳಿಗಾಡಿನ ಪ್ರದೇಶದಲ್ಲಿ ಯಾವ ರೀತಿ ನಡೆಯುತ್ತಿದೆ ಎಂಬುದು ಅವರಿಗೆ ಗೊತ್ತಿದೆ. ಹಿಂದಕ್ಕೆ ನಾಲ್ಕೈದು ಜನ ಒಂದು ಹಳ್ಳಿಯಲ್ಲಿ ಕುಡಿಯುತ್ತಿದ್ದರು, ಆದರೆ ಇಂದು 50-60 ಜನ ಕುಡಿಯುವವರು ಇದ್ದಾರೆ. ಹಳ್ಳಿಯಲ್ಲಿ ಕಳ್ಳಭಟ್ಟಿ ತಯಾರ್ಮಾಡುವ ಹತ್ತಾರು ಕೇಂದ್ರಗಳು ಇವೆ. ಆದರೆ ಅವುಗಳನ್ನು ಗೊತ್ತು ಹಚ್ಚಿ ಕ್ರಮ ತೆಗದುಕೊಳ್ಳಲು ಸಾಕಷ್ಟು ಎವಿಡೆನ್ಸ ಸಿಕ್ಕುವುದಿಲ್ಲ. ಸಾಕ್ಷಿ ಸಿಕ್ಕುವುದಿಲ್ಲ. ಪೋಲೀಸ ಇಲಾಖೆಯವರು ಕೂಡ ಏನೂ ಮಾಡುವುದಿಲ್ಲ. ಇಲೆಕ್ಷನ್‍ನಲ್ಲಿ ಓಟು ಬೇಕಾದರೂ ಕೂಡ ಇಂದು ಕುಡಿಯುವವರ ಮೊರೆ ಹೋಗಬೇಕಾದ ಕಾಲ ಬಂದಿದೆ. ಇದನ್ನು ಜಾರಿಗೆ ತರಲು ವಿರೋಧ ಪಕ್ಷದವರು ಸಹಕಾರ ಮಾಡಬೇಕೆಂದು ಮಂತ್ರಿಗಳ ಹೇಳಬಹುದು. ನಮ್ಮ ತಾಲ್ಲೂಕಿನಲ್ಲಿ ಕಳ್ಳಭಟ್ಟಿ ಸರಾಯಿ ನಿಲ್ಲಿಸಬೇಕೆಂದು ಕೆಲವು ಹಳ್ಳಿಗಳಲ್ಲಿ ಸ್ನೇಹಿತರು ಬಹಳ ಪ್ರಯತ್ನ ಮಾಡಿದರು. ಈ ವ್ಯವಹಾರದಲ್ಲಿ ಪೋಲೀಸಿನವರು ಕೂಡ ಶರೀಕಾಗಿರುವುದರಿಂದ ಒಂದು ಕೇಸಿನಲ್ಲಿ ಕೂಡ ಅಪರಾಧಿತರಿಗೆ ಶಿಕ್ಷೆಯಾಗಲಿಲ್ಲ. ಯಾರಾದರೂ ಸಾಕ್ಷಿ ಹೇಳಿದರೆ ಅಂಥವರು ಊರಿನಲ್ಲಿ ವಾಸ ಮಾಡುವುದೇ ಸಾಧ್ಯವಿಲ್ಲ ಎನ್ನತಕ್ಕಂಥ ಪರಿಸ್ಥಿತಿ ಬಂದಿದೆ. ಶ್ರೀಮಾನ್ ಮುಕ್ಕಣ್ಣಪ್ಪನವರು ಹೇಳಿದ ಹಾಗೆ ಪೋಲೀಸಿನವರು ಎಲ್ಲರೂ ಕುಡಿಯುತ್ತಾ ಇರುವಾಗ್ಗೆ ಇದನ್ನು ಜಾರಿ ಮಾಡಿದರೂ ಕೂಡ ಸಫಲವಾಗುವುದು ಹೇಗೆ ಎಂದು ಕೇಳುತ್ತೇನೆ.

ಇದನ್ನು ರದ್ದು ಮಾಡಿದರೆ ದೇಶಕ್ಕೆ ಸುಮಾರು 15 ಕೋಟಿ ರೂಪಾಯಿಗಳ ಹೆಚ್ಚು ವರಮಾನ ಬರುವುದಕ್ಕೆ ಸಾಧ್ಯವಿದೆ. ಇದನ್ನು ರದ್ದು ಮಾಡಿದರೆ, ಏನೋ ಮಹಾತ್ಮ ಗಾಂಧಿಯವರು ಹೇಳಿದ್ದರು ಅಥವಾ ನಾವು ತಂದಿರುವ ಕಾನೂನನ್ನು ಬದಲಾವಣೆ ಮಾಡಿದರೆ ತಪ್ಪು ಇತ್ತು, ವಾಪಸ್ಸು ತೆಗೆದುಕೊಂಡಿದ್ದಾರೆ ಎಂದು ಹೇಳಿದರೆ ತಮ್ಮ ಪ್ರತಿಷ್ಠೆ ಕಡಿಮೆಯಾಗುತ್ತದೆ ಎಂಬ ಒಂದು ಭಾವನೆಯಿಂದ ಮುಂದುವರಿಸಿಕೊಂಡು ಹೋಗುವುದರಲ್ಲಿ ಏನೇನೂ ಉಪಯೋಗವಿಲ್ಲ, ಸಾಮಾನ್ಯ ಜನಗಳಿಗೆ ಉಪಯೋಗವಾಗುವುದಿಲ್ಲ. ಹಳ್ಳಿಗಳಲ್ಲಿ ಕೂಲಿಗಾರ ವರ್ಗದಲ್ಲಿ ಕುಡಿಯುವವರು ಹಿಂದಿಗಿಂತ ಹೆಚ್ಚಾಗಿದ್ದಾರೆ. ಪ್ರೊಹಿಬಿಶನ್ ಬರುವುದಕ್ಕೆ ಮುಂಚೆ ಎಷ್ಟು ಕುಡಿಯುತ್ತಿದ್ದರೋ, ಈಗ ಅದಕ್ಕಿಂತ ಹೆಚ್ಚು ಜನ ಕುಡಿಯುತ್ತಿದ್ದಾರೆ. ಇದರ ಅಂಕಿಅಂಶ ಬೇಕೆಂದರೆ, ಮಾನ್ಯ ಮಂತ್ರಿಗಳು ನನ್ನ ಜೊತೆ ಬರುವುದಾದರೆ ತೋರಿಸುತ್ತೇನೆ. ಕೆ.ಜಿ.ಎಫ್. ನಲ್ಲಿ ಇದನ್ನು ತಯಾರಿಸುವ ವಿಧಾನಗಳನ್ನು ನೋಡಿದರೆ ನಿಜವಾಗಿ ಆಶ್ಚರ್ಯವಾಗುತ್ತದೆ. ಕಾಫಿ, ಟೀಯನ್ನು ಎಷ್ಟು ಸುಲಭವಾಗಿ, ಜಾಗ್ರತೆಯಾಗಿ ಮಾಡಬಹುದೋ ಅಷ್ಟು ಸುಲಭವಾದ, ತೀವ್ರವಾದ ರೀತಿಯಲ್ಲಿ ಮಾಡುವ ವಿಧಾನಗಳನ್ನು ಕಂಡು ಹಿಡಿದಿದ್ದಾರೆ. ಅಷ್ಟು ಹೆಚ್ಚಿನ ಪ್ರಮಾಣದಲ್ಲಿ ಇದರ ತಯಾರಿಕೆ ನಡೆಯುತ್ತಾ ಇದೆ. ಬಟ್ಟಿ ಕೇಂದ್ರಗಳಲ್ಲಿ ನವಸಾಗರ ಮತ್ತು ಆರೋಗ್ಯಕ್ಕೆ ವಿರುದ್ಧವಾದ ಕೆಲವು ಪದಾರ್ಥಗಳನ್ನು ಉಪಯೋಗಿಸಿ, ಜನಗಳ ಆರೋಗ್ಯ ಈ ದಿವಸ ಕೆಡುವುದಕ್ಕೆ ಕಾರಣವಾಗಿದೆ. ಮತ್ತು ಸರಕಾರಕ್ಕೆ ತರ್ತು ಪರಿಸ್ಥಿತಿಯಲ್ಲಿ ಹಣದ ಅಭಾವ ದೇಶಕ್ಕೆ ಇರುವಾಗ ಇದನ್ನು ಮುಂದುವರಿಸಿಕೊಂಡು ಹೋಗುವುದರಿಂದ ಜನಗಳಿಗಾಗಲಿ ಅಥವಾ ಸರ್ಕಾರಕ್ಕಾಗಲಿ ಯಾವ ಪ್ರಯೋಜನವೂ ಇಲ್ಲ. ಅಷ್ಟೇ ಅಲ್ಲದೆ ಪೋಲೀಸು ಇಲಾಖೆ ಹೆಚ್ಚು ಸಡಿಲವಾಗುವುದಕ್ಕೆ, ಶಿಸ್ತು ಕೆಡಲಿಕ್ಕೆ ಕೂಡ ಈ ಶಾಸನ ಕಾರಣವಾಗಿದೆ ಎಂದು ನಾನು ಭಾವಿಸುತ್ತೇನೆ. ಈ ಪರಿಸ್ಥಿತಿಯಲ್ಲಿ ದೇಶಕ್ಕೆ ಯಾವ ವಿಧದಲ್ಲಿಯೂ ಪ್ರಯೋಜನವಿಲ್ಲದೆ ಇರತಕ್ಕಂಥ ಶಾಸನವನ್ನು ಬರಿ ಹಠಮಾಡಿ ಹಿಂದೆ ಒಂದು ಶಾಸನವನ್ನು ತಂದಿದ್ದೇವೆ ಕಾಂಗ್ರೆಸ್ ಪ್ರಣಾಳಿಕೆಯಲ್ಲಿದೆ, ಯಾರು ಏನೇ ಹೇಳಲಿ, ಮುಂದುವರಿಸಿಯೇ ತೀರುತ್ತೇವೆ ಎಂದು ಹೇಳುವುದು ಸರಿಯಲ್ಲ. ನಮಗೆ ಬಹುಮತವಿದೆ, ಸದಸ್ಯರ ಬೆಂಬಲವಿದೆ ಎಂದು ಹಠ ಹಿಡಿಯಬಾರದು. ಇದನ್ನು ಕೂಲಂಕಷವಾಗಿ ಎಲ್ಲ ದೃಷ್ಟಿಯಿಂದ ವಿಮರ್ಶೆ ಮಾಡಬೇಕು. ವಾಸ್ತವವಾಗಿ ಪರ್ಯಟಣೆಮಾಡಿ ಸಾಮಾನ್ಯ ಜನಗಳಿಗೆ ಇದರಿಂದ ಪ್ರಯೋಜನವಾಗಿದೆಯೋ ಎಂದು ಪರಿಶೀಲನೆ ಮಾಡಿ ಅಥವಾ ನಿಮ್ಮ ಪೋಲೀಸು ಅಧಿಕಾರಿಗಳಿಗಾಗಲಿ ಬೇರೆ ಅಧಿಕಾರಿಗಳಿಗಾಗಲಿ ಇದನ್ನು ಕಾರ್ಯಗತಮಾಡಲಿಕ್ಕೆ ಶಕ್ತಿ ಇದೆಯೋ ಅನ್ನುವುದನ್ನು ಪರಿಶೀಲನೆಮಾಡಿ, ಇದರ ಬಗ್ಗೆ ಪುನರ್ವಿಮರ್ಶೆ ಮಾಡಬೇಕು ಮತ್ತು ಅದಷ್ಟು ಜಾಗ್ರತೆ ಇದನ್ನು ರದ್ದು ಮಾಡಬೇಕೆಂಬ ಸಲಹೆ ಕೊಡುತ್ತೇನೆ.

ಇನ್ನೊಂದು ಮುಖ್ಯ ವಿಷಯ ಅಂತ ಹೇಳಿದರೆ ಶಾಸನಾಂಗದ ಬಗ್ಗೆ ಮತ್ತು ಲೆಜಿಸ್ಲೇಚರ್ ಖರ್ಚು ಬಗ್ಗೆ ಒಂದನ್ನೂ ಇಲ್ಲಿ ಚರ್ಚೆ ಮಾಡಬಾರದು ಅಂತ ನಮ್ಮ ಸ್ಪೀಕರ್‌ರವರು ತಿಳಿಸಿದ್ದಾರೆ. ಆದರೆ ಈ ದಿವಸ ನಾವು ವೈಯಕ್ತಿಕವಾಗಿ ಸ್ಪೀಕರ್‌ರವರ ಅಥವಾ ಮೇಲ್ಮನೆಯ ಚೇರ್ಮನ್ನರ ಬಗ್ಗೆ ಮಾತನಾಡುವುದಿಲ್ಲ. ಆದರೆ ನಾನಾದರೂ ಈ ದಿವಸ ಕೇಳಿಕೊಳ್ಳುವುದೇನೆಂದರೆ, ನಾವು ಒಳ್ಳೆಯ ಪರಂಪರೆ ಬೆಳಸಬೇಕು, ಅದರಲ್ಲಿಯೂ ಕೂಡ ಉನ್ನತ ಸ್ಥಾನದಲ್ಲಿರತಕ್ಕಂಥವರು ಅದನ್ನು ಬೆಳೆಸಲು ಸಹಾಯವಾಗುವ ರೀತಿಯಲ್ಲಿ ನಡೆದುಕೊಳ್ಳುವುದು ಬಹಳ ಅವಶ್ಯಕವಾಗಿದೆ. ನಮಗೆ ಕೆಲವು ಸಮಾಚಾರ ಗೊತ್ತಾಗಿದೆ. ಕೆಲವು ಸಂದರ್ಭಗಳಲ್ಲಿ ಪ್ರಿಸೈಡಿಂಗ್ ಆಫೀಸರುಗಳೂ ಟೂರ್ ಹೋಗುವಾಗ ರಾಜಕೀಯ ಪಕ್ಷದ ಕೆಲಸಕ್ಕೆ ತಮ್ಮ ಸ್ಥಾನವನ್ನು ಬೆಳೆಸುತ್ತಿದ್ದಾರೆ. ನಮ್ಮ ಸ್ಪೀಕರ್‌ರವರು ವಿಶೇಷ ಇದರ ಬಗ್ಗೆ ಏನು ಮಾಡಬೇಕೆಂಬುದನ್ನು ಅವರೇ ಆಲೋಚನೆ ಮಾಡಿ, ಇದಕ್ಕೆ ಪರಿಹಾರ ಕಲ್ಪನೆ ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ಅವರಿಗೆ ಭಿನ್ನೈಸಿ ಕೊಂಡು ನನಗೆ ಮಾತನಾಡಲು ಅವಕಾಶ ಕೊಟ್ಟದ್ದಕ್ಕೆ ಅವರನ್ನುಅಭಿನಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Sri SANJEEVANATH AIKALA.—Mr. Speaker, Sir, much has been said on prohibition policy pursued by the Government. Instead of adding my own, I only want to quote there or four sentences from the famous authority.

Mr. SPEAKER.—He may put it in his own words.

Sri SANJEEVANATH AIKALA.—Every social reform must be based on certain principles. It is well-known that no social reforms could be brought into force without the support of the people for whose benefit those social reforms are intended. Prohibition is sought to be introduced on three grounds, moral, social and economic. On all these three fronts, prohibition has failed, not only failed, it failed miserably and utterly. That has been the consensus of opinion of all the leading authorities on prohibition and it has been agreed to by several committees constituted by the various State Governments. A Committee was constituted by the Andhra Government and they have submitted a report that prohibition cannot be introduced successfully. So also, the Central Government formed an evaluation committee and they too felt that prohibition as a social reform cannot be introduced successfully. So also Rajasthan Government formed a committee and that committee has given a valuable report saying that prohibition has not been a success. Coming to the recent events, the Central Government have appointed Tekchand Committee and the scope of reference of that committee does not permit it to go into the success or failure of the prohibition policy; They are to enquire and see how for the prohibition could be successfully implemented. So, I do not think that the report of that committee will have any bearing upon the success or failure of prohibition. The Central Government has directed them not to touch about success or failure of prohibition, but only to report how to implement the prohibition programme successfully. Sir, the object of the reform is not to subscribe to an ideal, but to bring about certain results related to the ideal. Practicability is the essence of the reform. We believe that drinking is bad but what is the practical aspect of drinking? People have been accustomed to toddy drinking for centuries together. Even in Mahabharatha, we have examples that Yadavas were drinking often and so also Vanaras and others in those days were drinking a sort of alcohol. Taking the example of present day generations, we see in the West and everywhere people get to drink, but they do not get drunkenness. So,

(SRI SANJEEVANATHA AIKALA)

we have to make a distinction between drinking and drunkenness. Whereas the Government has in view only drunkenness and not drinking

Sri J. H. SHAMSUDDIN (Deputy Minister for Electricity).—Who will prescribe the limit ?

Sri SANJEEVANATH AIKALA.—The man who drinks himself. He knows better than what I and you could judge about him.

Mr. SPEAKER.—I am sure, neither of them knows the limit.

4 P. M.

Sri SANJEEVANATH AIKALA.—Personally I am not a drunkard.

Mr. SPEAKER.—I know the other friend also equally well.

Sri SANJEEVANATH AIKALA.—Sir, I feel that this is a social reform. This cannot be brought into effective enforcement without the support of the people. About the prevailing conditions, as far as the implementation of the prohibition policy is concerned, it is well-known and it has been strongly expressed here. After the introduction of prohibition, people not only drink toddy, but they drink arrack too. In our side, permits are given to tap toddy for the manufacture of jaggery from palmirah trees. If we go to the villages, you will not find palmirah jaggery at all. At the food of the tree itself, when it is being tapped, and brought down you find a number of people waiting for the man to get down. As soon as he comes down, it is almost snatched from his hands and the contents got by the waiting crowd and drunk. After that, they take arrack. This is how prohibition policy is working. In the name of manufacturing jaggery, they get permits to tap palmirah trees and the toddy that is extracted from palmirah trees is not used for the manufacture of jaggery. People take this toddy in the morning and after going home they take arrack too. This is the morning process. In the evening too, the same process continue. How these people who extract toddy are hand in glove with the Police people which is a well-known fact. I feel reluctant to tell that sad picture here. Perhaps it is known to all that every police station in our side get an indirect income of two to three thousand rupees per month which the Hon'ble Home Minister may please note. This is not the first time that I am making this allegation. This was made last year and year before last, and it is an open secret that this goes on uninterruptedly.

Mr. SPEAKER.—If we can go to the root of the matter, I have not been able to understand. How can it be a secret if it is open ? If it is a secret it is not open.

Sri SANJEEVANATH AIKALA.—I suggest the Government to form a committee to go into this problem. If the Government is not willing to scrap prohibition, let them form a committee. Let it go round the country and see the facts of this policy. If they really feel that it is not worthwhile to continue this programme, I wish they take immediate steps to abolish this programme, because, it not only drains the State—it is a very important part of our revenues—but it also drains the man of his moral and physical strength. If we go to the village side—why even

in towns too—almost 75 per cent of the drunkards are suffering either from Cancer or T. B. If you care to conduct a survey of drunkards you will find that 75 per cent of them are suffering either from Cancer or T. B. That is the position in the villages. In all humility and in the name of the future generation and posterity, I beg of this Law Minister, who is an adamant tea-totaller to see that a committee is formed immediately, to submit a report to the Government

Coming to Administration of Justice, enough has already been said. I have sent a cut motion regarding the failure of the Government to provide adequate court halls in Bangalore, and in mofussil headquarters as well. This is a very sad state of affairs. We find judges in Bangalore running from one court to another. Some courts work, on shift system as in colleges and schools. There is shift system in courts also. Some sit in the morning and some in the afternoon. Some court is meant for some judge in the morning and the same is meant for another in the afternoon. This is a very sad state of affairs, as far as dispensation of justice in Bangalore City is concerned. Enough Court halls should be provided.

About another cut motion which I have sent pertains to the Education Department. Last year I sent a similar cut motion on the subject of Education. But, no note has been taken. I want to bring to the attention of the Law Minister about not providing a good Law College building.

MR. SPEAKER.—If somebody did not take notice...... he can come to the Law Minister!

SRI SANJEEVANATH AIKALA.—Sir, we have to train a large number of lawyers, but we are doing so in dungeon-like rooms of the present law college buildings. It does not befit the *luminosity* of law to train lawyers in such congested rooms. I request that immediate steps should be taken to provide a decent Law College building.

Lastly, I request the Government to open Neera parlours. Neera drinking is permitted according to prohibition policy.

MEMBERS.—No, No.

SRI SANJEEVANATH AIKALA.—Even the Andhra Government introduced a novel plan. They started what is known as sweet toddy drinking. I do not know how toddy can be sweet. It is bitter. If it is sweet, nobody would drink. In order to escape the clutches of law....

SRI S. M. KRISHNA (Maddur).—I would like to know who said that toddy is bitter.

SRI SANJEEVANATH AIKALA.—I have not tasted it and that is the difficulty for me to know whether it is sweet or bitter.

MR. SPEAKER.—He may mention the word in Tulu—Sour.

SRI SANJEEVANATH AIKALA.—Sour. In order to evade the clutches of the Central Government's Directive Principles, now they started sweet toddy parlours and they have started opening toddy parlours everywhere. I request the Hon'ble Minister to see that Neera parlours are opened wherever there is a demand for them.

ಶ್ರೀ ಆರ್. ಮುನಿಸ್ವಾಮಯ್ಯ (ದೇವನಹಳ್ಳಿ).—ಸ್ವಾಮಿ, ಈಗ ನಮ್ಮ ಮುಂದೆ ಇಟ್ಟಿರತಕ್ಕ ಅಬ್ಕಾರಿ ಮನವಿಯನ್ನು ಅನುಮೋದಿಸುತ್ತಾ ನಾನು ಕೆಲವು ಮಾತುಗಳನ್ನು ಹೇಳಲು ಆಶಿಸುತ್ತೇನೆ. ಸ್ವಾಮಿ, ಇದುವರೆಗೂ ಮಾತನಾಡಿದಂತಹ ಕೆಲವು ಸದಸ್ಯರು ಪಾನನಿರೋಧದ ವಿಷಯದಲ್ಲಿ ಬಹಳ ವಾಗಿ ಮಾತನಾಡಿದ್ದಾರೆ. ಅನೇಕ ಸದಸ್ಯರು ಅಧಿಕಾರಿಗಳು ಕುಡಿಯುತ್ತಾರೆ, ಸಾಧಾರಣ ಜನ ಕುಡಿಯುತ್ತಾರೆ, ಎಲ್ಲೆಲ್ಲಿ ಪಾನನಿರೋಧ ಜಾರಿಯಲ್ಲಿದೆಯೋ ಅಲ್ಲೆಲ್ಲ ಕಳ್ಳಭಟ್ಟಿ ತಯಾರಾಗುತ್ತಿದೆ, ಹಾಗೆ ಹೀಗೆ ಎಂದು ಹೇಳಿ ನಿಜದ ಜೊತೆಗೆ ಒಂದಷ್ಟು ಸುಳ್ಳನ್ನೂ ಸೇರಿಸಿಕೊಂಡು ಮಾತನಾಡಿದ್ದಾರೆ. ಪಾನನಿರೋಧ ಬರುವುದಕ್ಕೆ ಮೊದಲು ಸ್ವಲ್ಪಮಟ್ಟಿಗೆ ಮಾತ್ರ ಕುಡಿಯುತ್ತಾ ಇದ್ದರು, ಪಾನನಿರೋಧ ಬಂದ ಮೇಲೆ ಅನೇಕ ಜನ ಕುಡಿಯುತ್ತಾ ಇದ್ದಾರೆ, ಕುಡಿಯುವವರ ಸಂಖ್ಯೆ ಹೆಚ್ಚಾಗಿದೆ ಎಂದು ಸದಸ್ಯರು ಹೇಳಿದ್ದಾರೆ. ಪಟ್ಟಣಗಳ ಕಡೆ ಸಂಚಾರ ಮಾಡುವಾಗ ಪಾನನಿರೋಧವಿಲ್ಲದಿರುವ ಕಡೆ ಕುಡಿಯುತ್ತಾರೆ, ಈಗ ಪಾನನಿರೋಧವಿರುವ ಕಡೆಯೂ, ಇಲ್ಲದಿರುವ ಕಡೆಯೂ ಕುಡಿಯುವವರು ಕಾಣಿಸುತ್ತಾರೆ. ಪಾನನಿರೋಧವಿಲ್ಲದಿರುವ ಕಡೆ ಇಲ್ಲದಿದ್ದ ಕಾಲದಲ್ಲೇ ಕಳ್ಳಭಟ್ಟಿ ತಯಾರಿಸಿ ಕುಡಿಯುತ್ತಿದ್ದರು, ಕಳ್ಳತನದಲ್ಲಿ ಸಾರಾಯಿ ಮಾರುವ ಅಂಗಡಿ ಪಕ್ಕದಲ್ಲಿ ತಂದು ಸರ್ಕಾರದಿಂದ ಬಂದ ಸಾರಾಯಿ ಎಂದು ಕುಡಿಯುತ್ತಿದ್ದರು. ಈಗ ಪಾನನಿರೋಧವಿರುವ ಕಡೆ ಕಳ್ಳತನದಲ್ಲಿ ಮದ್ಯ ತಯಾರಿಸಿ ಕೆಲವು ಕಡೆ ಕುಡಿಯುತ್ತಿದ್ದಾರೆ. ಅನೇಕ ಕಡೆ ಇಂಥಾದ್ದನ್ನು ಕಂಡುಹಿಡಿದಿದ್ದಾರೆ, ಶಿಕ್ಷೆ ಕೂಡ ತಪ್ಪು ಮಾಡಿದವರಿಗೆ ವಿಧಿಸಿದ್ದಾರೆ. ಕೆಲವು ಕಡೆ ಹಿಡಿದಿದ್ದರೂ ಪೋಲೀಸಿನವರು ಕ್ರಮ ನಡೆಸಿಲ್ಲ ಎಂದು ಹೇಳುತ್ತಾರೆ. ಆ ತರಹ ಸ್ವಲ್ಪ ಇದ್ದರೂ ಇರಬಹುದು. ಆದರೆ ಹಿಡಿದುಕೊಟ್ಟ ಕೇಸುಗಳನ್ನು ರುಜುವಾತಾದಾಗ ಪೋಲೀಸಿನವರು ತನಿಖೆ ನಡೆಸಿ ಕ್ರಮ ತೆಗೆದುಕೊಂಡಿದ್ದಾರೆ ಎಂದು ಧೈರ್ಯದಿಂದ ಹೇಳುತ್ತೇನೆ. ಪೋಲೀಸಿನವರು ಬೇರೆ, ಜನರು ಬೇರೆ ಅಲ್ಲ, ಎಲ್ಲರೂ ಮನುಷ್ಯರೇ. ಮನುಷ್ಯರಿಗಿರುವ ನಿರ್ಬಲತೆಯನ್ನು ದೊಡ್ಡದು ಮಾಡಿ ಅಧಿಕಾರಿಗಳೇ ಕುಡಿಯುವುದರಿಂದ, ಈ ಸಭೆಯ ಸದಸ್ಯರೇ ಕುಡಿಯುವುದರಿಂದ ಪಾನನಿರೋಧವನ್ನು ತೆಗೆದುಹಾಕಬೇಕೆಂದು ಹೇಳಿದರೆ ಅದು ತಮಾಷೆಯ ಮಾತಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ಪಾನನಿರೋಧವನ್ನು ಏಕೆ ಜಾರಿಗೆ ತಂದಿದೆ ಎಂದು ಮೂಲವನ್ನು ನೋಡಿದರೆ ಆಗ ನಿರೋಧವನ್ನು ಪೂರ್ಣವಾಗಿ ತೆಗೆದು, ಕುಡಿಯುವುದಕ್ಕೆ ಅವಕಾಶ ಕೊಡಬೇಕೆಂದು ಹೇಳುವುದು ಪೂರ್ಣವಾಗಿ ಅನುಚಿತವೆಂದು ಕಾಣುತ್ತದೆ. ನಿರೋಧ ಮಾಡಿದ ಮೇಲೆ ಅನೇಕ ಬಡವರು ಸುಖವಾಗಿ ಜೀವನ ಮಾಡುತ್ತಿದ್ದಾರೆ, ಅನೇಕ ಸಂಸಾರಗಳಲ್ಲಿ ಜಗಳವಾಡುತ್ತಿದ್ದುದು ನಿಂತಿದೆ, ಬಡತನದಿಂದ ಆಹಾರವಿಲ್ಲದೆ ನರಳುತ್ತಿದ್ದುದು ಈ ದಿವಸ ತಪ್ಪಿ ಸುಖವಾಗಿದ್ದಾರೆ. ಇದನ್ನು ಅನೇಕರು ನೋಡಿ ಸಂತೋಷಪಟ್ಟಿದ್ದಾರೆಂದು ಭಾವಿಸುತ್ತೇನೆ. ನಿರೋಧ ಮಾಡದಿದ್ದರೆ ಗಂಡಸರು ಇಷ್ಟ ಬಂದ ಹಾಗೆ ಕುಡಿದು ಹೆಂಡತಿ ಮಕ್ಕಳಿಗೆ ಅನ್ನ ಆಹಾರವಿಲ್ಲದೆ ತೊಂದರೆ ಕೊಡುತ್ತಿದ್ದರು. ಆದುದರಿಂದ ಪಾನನಿರೋಧವನ್ನು ಮತ್ತೆ ಹೆಚ್ಚು ಬಳಕೆಯಲ್ಲಿ ತರಬೇಕು, ಯಾವ ತಾಲ್ಲೂಕಿನಲ್ಲಿ ಜಾರಿಯಲ್ಲಿಲ್ಲವೋ ಅಲ್ಲಿ ಕೂಡಲೆ ಜಾರಿಗೆ ತರಲು ಕ್ರಮ ಕೈಕೊಳ್ಳಬೇಕು, ಅದಕ್ಕೆ ಸದಸ್ಯರು ಮತ್ತು ಹೊರಗಿನ ಜನರು ಸಹಕಾರ ನೀಡಬೇಕೆಂದು ಸಲಹೆ ಮಾಡುತ್ತೇನೆ. ಯಾರೋ ಒಬ್ಬ ಮಿತ್ರರು ನೀರಾ ಕೇಂದ್ರ ತೆರೆಯಲು ಅವಕಾಶ ಕೊಟ್ಟರೆ ಒಳ್ಳೆಯದೆಂದು ಹೇಳಿದರು. ಆಂಧ್ರ, ಮದ್ರಾಸು ಮುಂತಾದ ಕೆಲವು ಪ್ರದೇಶಗಳಲ್ಲಿ ನೀರಾ ಮಾರಾಟ ಮಾಡುತ್ತಿದ್ದಾರೆ. ಅದು ಬಿಸಲಿಗೆ ಸಿಕ್ಕಿ ಮತ್ತು ಬರುವ ಹಾಗಾಗುತ್ತದೆ. ಹೆಂಡಕ್ಕೆ ಬದಲಾಗಿ ಅದನ್ನು ಕೊಟ್ಟರೂ ಹೆಂಡವನ್ನು ಬೇರೆ ರೀತಿಯಲ್ಲಿ ಕುಡಿಸಿದಂತಾಗುತ್ತದೆ. ಆದುದರಿಂದ ನೀರಾ ತಯಾರಿಕೆಗೆ ಅನುಮತಿ ಕೊಡಬಾರದು. ನೀರಾ ಎಂಬ ಹೆಸರಿನಲ್ಲಿ ಕುಡಿಯುವುದನ್ನು ಕಲಿಸಬಾರದು. ಇಷ್ಟು ಮಾತ್ರ ಪಾನನಿರೋಧದ ಬಗ್ಗೆ ಹೇಳುತ್ತೇನೆ.

ಬೆಂಗಳೂರಿನಲ್ಲಿ ಕೋರ್ಟುಗಳು ಒಂದಾನೊಂದು ಕಾಲದಲ್ಲಿ ಹೇಗೆ ಆಸ್ಪತ್ರೆಯಿದ್ದ ಕಟ್ಟಡದಲ್ಲಿ ನಡೆಯುತ್ತಿವೆ, ಬಹಳ ವರ್ಷಗಳಿಂದ ಕೆಲವು ಆ ಕಟ್ಟಡದಲ್ಲೇ ಇವೆ. ಅಲ್ಲಿ ಕೋರ್ಟನ್ನು ನಡೆಸುವುದು ನ್ಯಾಯವಲ್ಲ. ಮಂತ್ರಿಗಳು ಇದನ್ನು ಗಮನಿಸಿ ಕಟ್ಟಡಗಳಿಗೆ ಭೇಟಿಕೊಟ್ಟು ಸರಿಯಾದ ಹೊಸ ಕಟ್ಟಡ ಕಟ್ಟಿಸಿ ಕೋರ್ಟುಗಳು ಚೆನ್ನಾಗಿ ಕಾಣುವಂತೆ, ಜನರು ಗೌರವ ಕೊಡುವ ಹಾಗೆ ಅವಕಾಶ ಮಾಡಬೇಕು.

ಈಗ ಪಬ್ಲಿಕ್ ಪ್ರಾಸಿಕ್ಯೂಟರುಗಳನ್ನು ಸರ್ಕಾರ ನೇಮಕ ಮಾಡುತ್ತಿದೆ. ಹಾಗೆ ಮಾಡುವಾಗ ಹರಿಜನರನ್ನೂ ನೇಮಿಸಬೇಕು. ಅವರಲ್ಲೂ ಒಳ್ಳೆಯ ಲಾಯರುಗಳೂ, ದಕ್ಷರೂ ಇದ್ದಾರೆ. ಅಂಥವರನ್ನು ಸಹ ಪಬ್ಲಿಕ್ ಪ್ರಾಸಿಕ್ಯೂಟರಾಗಿಯೂ ಸರ್ಕಾರಿ ಪ್ಲೀಡರುಗಳಾಗಿಯೂ ನೇಮಕ ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಗೋಪಾಲ ಗೌಡ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೇ, ಸಭೆಯ ಮುಂದೆ ಸರ್ಕಾರದವರು ಮಂಡಿಸಿರುವ ಬೇಡಿಕೆಗಳನ್ನು ವಿರೋಧಿಸುತ್ತಾ ಒಂದೆರಡು ಮಾತುಗಳನ್ನು ಹೇಳ

ಬೇಕೆಂದಿದ್ದೇನೆ. ಪಾನನಿರೋಧದ ವಿಷಯದಲ್ಲಿ ಪರವಾಗಿ ಮತ್ತು ವಿರೋಧವಾಗಿ ಈಗಾಗಲೆ ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ಕೊಟ್ಟರು. ಹಿಂದೆ ಕೂಡ ಹೀಗೆಯೇ ಬೇಡಿಕೆ ಬಂದಾಗ ನಮ್ಮ ಅಭಿಪ್ರಾಯ ಕೊಟ್ಟಿದ್ದೇವೆ. ದೇಶದಲ್ಲಿ ಈ ಪಾನನಿರೋಧದ ನೀತಿಯ ಬಗ್ಗೆ ಸಾಕಷ್ಟು ಅನುಮಾನ, ಶಂಕೆಗಳು ಆಡಳಿತ ಪಕ್ಷದಲ್ಲಿ ಈ ಧೋರಣೆಯನ್ನು ನಿರೂಪ ಮಾಡುವ ವಲಯಗಳಲ್ಲೂ ಕೂಡ ಉಂಟಾಗಿ ಈ ನೀತಿಯನ್ನು ಪುನರ್ವಿಮರ್ಶೆ ಮಾಡಬೇಕು ಎಂದು ತೇಕ್‌ಚಂದ್‌ರವರ ಅಧ್ಯಕ್ಷತೆಯಲ್ಲಿ ಸಮಿತಿ ಮಾಡಿರುವುದು ಮತ್ತು ಅದರ ವರದಿಗೆ ಕಾದಿರುವುದು ಎಲ್ಲರಿಗೂ ಗೊತ್ತಿರುವ ವಿಷಯ. ಈಚೆಗೆ ನಮ್ಮ ರಾಜ್ಯದ ಮುಖ್ಯಮಂತ್ರಿಗಳೂ ಕೂಡ ಕಳೆದ ಒಂದು ವರ್ಷದಿಂದ ಈ ನೀತಿಯನ್ನು ಪುನರ್ವಿಮರ್ಶೆ ಮಾಡುವ ಸಮಯ ಬಂದಿದೆ ಎಂದು ಹೇಳುತ್ತಿದ್ದಾರೆ. ಅಲ್ಲದೇನೇ ಮಹಾರಾಷ್ಟ್ರದ ಮುಖ್ಯಮಂತ್ರಿಗಳು ಬರುವ ಏಪ್ರಿಲ್‌ನಿಂದ ಈ ನೀತಿಯನ್ನು ಕೆಲವು ವಿಷಯಗಳಲ್ಲಿ ಬದಲಾಯಿಸುವುದಾಗಿ ಹೇಳಿದ್ದಾರೆ. ಇದರ ಬಗ್ಗೆ ನಾನೂ ಸಹ ಹಿಂದೆಯೇ ನನ್ನ ಅಭಿಪ್ರಾಯವನ್ನು ಕೊಟ್ಟಿದ್ದೇನೆ. ಕೆಲವರು ಮಾನ್ಯ ಸದಸ್ಯರು, ಮುನಿಸ್ವಾಮಯ್ಯನವರು, ರಾಚಯ್ಯನವರು ಮುಂತಾದವರು ಪಾನನಿರೋಧದ ವಿಷಯದಲ್ಲಿ ಏನು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ ಅದು ಅಂಕಿಸಂಖ್ಯೆ ಸಂಗ್ರಹಿಸಿ ತಿಳಿಯಬೇಕಾದ ವಿಷಯ. ಹಿಂದೆ ಯಾರು ಪಾನನಿರೋಧ ಇಲ್ಲದಿರುವಾಗ ಹೆಚ್ಚು ಸೇವನೆ ಮಾಡಿ ಅದರಿಂದ ತಮ್ಮ ಸಂಸಾರಗಳು ಹಾಳಾಗುವುದಕ್ಕೆ ಅವಕಾಶ ಕೊಡುತ್ತಿದ್ದರೋ ಆ ವರ್ಗ ಮತ್ತು ಜಾತಿಗಳಲ್ಲಿ ಪಾನನಿರೋಧ ಜಾರಿಗೆ ಬಂದಮೇಲೆ ಜನರು ಎಷ್ಟರಮಟ್ಟಿಗೆ ಕುಡಿಯುವುದನ್ನು ಬಿಟ್ಟಿದ್ದಾರೆ ಮತ್ತು ಅವರ ಮುಂದಿನ ಪೀಳಿಗೆ ಬಿಟ್ಟಿದೆ ಎಂದು ಪರಿಶೀಲಿಸಿ ತೀರ್ಮಾನಿಸಬೇಕಾದ ವಿಷಯವಿದು ಎಂದು ನನಗನ್ನಿಸುತ್ತದೆ.

ಕೆಲವು ಜನಾಂಗ, ಕೆಲವು ವರ್ಗದವರು ಈ ಮದ್ಯಪಾನಗಳು ಮಾರಾಟವಾಗದೆ ಇರುವುದರಿಂದ, ಸಲೀಸಾಗಿ ಸಿಕ್ಕದೇ ಇರುವುದರಿಂದ ಕುಡಿತವನ್ನು ಬಿಟ್ಟಿರಬಹುದು ಎಂದು ನನಗನಿಸುತ್ತದೆ. ಆದರೆ ಅವರ ಸಂಖ್ಯೆ ಎಷ್ಟು? ಈ ಒಂದು ಕಾನೂನನ್ನು ಕಾರ್ಯಗತ ಮಾಡುವ ಸಿಬ್ಬಂದಿಗಳಿಂದ ಬರತಕ್ಕ ಅಡ್ಡಿ ಆತಂಕಗಳು, ರಾಜ್ಯದ ಬೊಕ್ಕಸಕ್ಕೆ ಪ್ರತಿವರ್ಷವೂ ನೇರವಾಗಿ ಪ್ರತ್ಯಕ್ಷವಾಗಿ ಆಗತಕ್ಕ ನಷ್ಟ, ಮತ್ತು ಕಳ್ಳಭಟ್ಟಿಯ ಮೂಲಕ ಪರೋಕ್ಷವಾಗಿ ಆಗುವ ನಷ್ಟ, ಇದಕ್ಕೆ ಸರಿತೂಗುತ್ತದೆಯೇ? ನೀತಿವಂತರು ಕುಡಿಯುವುದನ್ನು ಬಿಟ್ಟ ಜನರ ಸಂಖ್ಯೆ ಎಷ್ಟಾಗಬಹುದು ಇದನ್ನು ಕಂಡುಕೊಂಡರೆ ಬಹುಶಃ ಇದು ಇಷ್ಟು ಯಶಸ್ಸಾಗಿದೆ ಎಂದು ಹೇಳುವುದಕ್ಕಾಗುವುದಿಲ್ಲ. ಇನ್ನೂ ಕೆಟ್ಟುಹೋಗುವುದಕ್ಕೆ ಸಾಧ್ಯವಿದೆ. ಏಕೆಂದರೆ ತೇಕ್‌ಚಂದ್ ಸಮಿತಿಯವರು ಇಲ್ಲಿಗೆ ಬಂದಾಗ ಅವರು ಕೆಲವರನ್ನು ಮಾತ್ರ ಆಮಂತ್ರಿಸಿದ್ದರು ಎಂದು ಕೇಳಿದೆ. ಯಾರು ಯಾರನ್ನು ಕರೆಸಿದ್ದರು ಮತ್ತು ಯಾವ ಯಾವ ಆಧಾರಗಳ ಮೇಲೆ ಅವರನ್ನು ಆಮಂತ್ರಿಸಿದ್ದರು ಮತ್ತು ಅವರು ಏನು ಅಭಿಪ್ರಾಯಗಳನ್ನು ಸಂಗ್ರಹಿಸಿದರು ಎನ್ನುವುದು ನನಗೇನೋ ಅಷ್ಟು ಸ್ಪಷ್ಟವಾಗಿ ಗೊತ್ತಿಲ್ಲ. ನಾನು ಅವರನ್ನು ಭೇಟಿ ಮಾಡಲು ಬೇರೆ ಕಾರಣದಿಂದಾಗಿ ಆಗಲಿಲ್ಲ. ನಾವು ಇಲ್ಲಿ ಎರಡು ಅಂಶಗಳ ಬಗ್ಗೆ ಪದೇ ಪದೇ ಇಲ್ಲಿ ವಿವಂಚನೆಯನ್ನು ವ್ಯಕ್ತಪಡಿಸುತ್ತ ಬಂದಿದ್ದೇವೆ. ರಾಜ್ಯದಲ್ಲಿ ಕುಡಿಯುವ ಅಥವಾ ಕುಡಿಯದೇ ಇರುವ ನೀತಿ ಎಲ್ಲ ಕಡೆಯಲ್ಲಿಯೂ ಜಾರಿಯಲ್ಲಿಲ್ಲ. ಟೋಟಲ್ ಪ್ರಾಹಿಬಿಷನ್ನು ಎಲ್ಲಿಯೂ ಇಲ್ಲ ಎಂದು ಹೇಳುವುದು ಒಂದು ವಿಚಾರ. ಮಹಾರಾಷ್ಟ್ರದಲ್ಲಿರುವ ವಿದರ್ಭ ಭಾಗದಲ್ಲಿ ಪಾನನಿರೋಧ ಇದೆ, ಮರಾಠ್‌ವಾಡಾದಲ್ಲಿ ಇಲ್ಲ. ಅದು ಆ ರಾಜ್ಯಕ್ಕೆ ಅನ್ವಯಿಸುವ ಮಾತು. ಮೊದಲನಿಂದಲೂ ಈ ವಿಷಯದಲ್ಲಿ ಇಲ್ಲಿ ಮತ್ತು ಬಹಳ ಕಡೆಗಳಲ್ಲಿ ಇದನ್ನು ಇಂಪ್ಲಿಮೆಂಟು ಮಾಡುವಾಗ ಸರಿಯಾದ ನೀತಿಯನ್ನು ಅನುಸರಿಸದೇ ಇರುವುದೇ ಇದರಲ್ಲಿ ಸಂದೇಹ, ಅನುಮಾನಕ್ಕೆ ಅವಕಾಶವಾಗಿ ಒಂದು ಡೋಲಾಯಮಾನವಾದ ನೀತಿಯನ್ನು ಅನುಸರಿಸುತ್ತಿದ್ದರೆಂದು ಹೇಳುವುದಕ್ಕೆ ಅವಕಾಶವಾಗಿದೆ. ಇದು ಒಂದು ಮೂಲ ದೋಷ. ಇದರಿಂದ ಅನೀತಿಗೆ ಅವಕಾಶವಾಗಿದೆ. ರಾಜ್ಯದ ಯಾವ ಮೂಲೆಗೆ ಬೀರು ಬೇಕಾದರೂ ಬೆಂಗಳೂರಿನಿಂದ ಅಲ್ಲಿಗೆ ಹೋಗುತ್ತದೆ, ಮಾರಾಟವಾಗುತ್ತದೆ. ನಿಮ್ಮಲ್ಲಿ ಸೀಕ್ರೆಟ್ ಸರ್ವಿಸ್ ಇದೆ, ಬೇಕಾದರೆ ಅವರ ಮೂಲಕ ವಿಚಾರಗಳನ್ನು ತಿಳಿಯಬಹುದು, ಇವೆಲ್ಲಾ ಓಪನ್ ಸೀಕ್ರೆಟ್ಟಾಗಿಯೇ ನಡೆಯುತ್ತಿವೆ. ಮಂಗಳೂರಿನಲ್ಲ ಸಮುದ್ರದ ಬದಿಯಲ್ಲಿ ಹೊಂಡಗಳಲ್ಲಿ ಇಟ್ಟಿರುತ್ತಾರೆ, ಯಾರು ಯಾವಾಗ ಎಷ್ಟು ಕೇಳಿದರೂ ಕೊಡುತ್ತಾರೆ.

ಶ್ರೀ ಸಂಜೀವನಾಥ ಐಕಳ.—ನಿಮಗೆ ಇದು ಹೇಗೆ ಗೊತ್ತು?

ಶ್ರೀ ಎಸ್. ಗೋಪಾಲ ಗೌಡ.—ನನಗೆ ಗೊತ್ತಿದೆ. ನಿಮಗೆ ಅಲ್ಲಿ ನೀರಾ ಮಾಡುತ್ತಾರೆ, ಯಾವತ್ತು ಬೇಕಾದರೂ ಎಷ್ಟು ಹೊತ್ತಿಗೆ ಬೇಕಾದರೂ ನೀವು ಹೋಗಿ ಪಡೆಯಬಹುದು. ಕಾನೂನು ಪಾಡಿಗೆ ಕಾನೂನು ಇರುತ್ತದೆ. ಘುಡ್‌ಲಿಂಕ್ ಮಾಡಿ ಅದನ್ನು ಕುಡಿಯುತ್ತಾರೆ, ಕಂಡರೂ ಕಾಣದಂತೆ ನೋಡಿಕೊಂಡು ಹೋಗಬೇಕು ಅಷ್ಟೇ. ಇದನ್ನು ಹುಡುಕಿಕೊಂಡು ಹೋಗಿ ನೋಡಬೇಕಾಗಿಲ್ಲ. ಹಿಂದೆ ದುರ್ಯೋಧನ ಒಂದು ಬಾರಿ ಧರ್ಮರಾಜನ ಸಭೆಗೆ ಬಂದಾಗ ಅಲ್ಲಿ ಅವನ ಕಣ್ಣಿಗೆ ಎಲ್ಲರೂ ಕೃಷ್ಣನಂತೆಯೇ ಕಂಡರಂತೆ. ಆ ತರಹ ಪರಿಸ್ಥಿತಿ ಇದರಲ್ಲಿಯಂತಾಗಿದೆ, ಇದನ್ನು ಇನ್ನೂ ಉತ್ಪ್ರೇಕ್ಷೆ ಮಾಡಿ ನಾವು ಹೇಳಬಹುದು, ಮಾನ್ಯ ಕಾನೂನು ಮಂತ್ರಿಗಳ ಮನೆಯ ಹಿಂದೆಯೇ ಕಳ್ಳಭಟ್ಟಿ

(ಶ್ರೀ ಎಸ್. ಗೋಪಾಲ ಗೌಡ)

ವ್ಯಾಪಾರ ನಡೆಯುತ್ತಿದೆ ಎನ್ನುವಷ್ಟರಮಟ್ಟಿಗೆ ಹೇಳಬಹುದು. ಅದೇ ರೀತಿ ಮಾನ್ಯ ಗೃಹ ಮಂತ್ರಿಗಳ ಮನೆಯ ಹಿಂದೆಯೂ ಕಳ್ಳಭಟ್ಟಿ ಆಗುತ್ತಿದೆ ಎಂದು ಉತ್ಪ್ರೇಕ್ಷೆಯಿಂದ ಹೇಳಬಹುದು. ಶ್ರೀಮಾನ್ ಮುನಿಸ್ವಾಮಿಯವರು ಹೇಳುವಂತೆ ನೀತಿವಂತರು ಎಲ್ಲ ಕುಡಿಯುವುದನ್ನು ಬಿಟ್ಟು ಬಿಟ್ಟಿದ್ದಾರೆ ಎಂದು ಹೇಳುವಂತಿಲ್ಲ. ವಾಸ್ತವ ಸ್ಥಿತಿಯನ್ನು ನೀವು ಗಮನಕ್ಕೆ ತಂದುಕೊಳ್ಳುವುದಾದರೆ, ತೃಪ್ತಿಕರ ವಾದ ರೀತಿಯಲ್ಲಿ ನೀವು ಪಾನನಿರೋಧವನ್ನು ಜಾರಿಗೆ ತರುವುದಕ್ಕೆ ಸಾಧ್ಯವಾಗಿಲ್ಲ.

ಇನ್ನೊಂದು ಮೂಲ ಲೋಪ ಏನೆಂದರೆ ನೀವು ಇವುಗಳ ಉತ್ಪಾದನೆಗಾಗಿ ಲೈಸನ್ಸುಗಳನ್ನು ಪರ್ಮಿಷನ್ನುಗಳನ್ನು ಕೊಡುತ್ತಿದ್ದೀರಿ. ಈ ಬೆಂಗಳೂರಿನಲ್ಲಿ ಬೀರನ್ನು ತಯಾರು ಮಾಡುವ ಎರಡು ಮೂರು ಕಂಪನಿಗಳಿವೆ. ಅವು ಬ್ರಾಂದಿ ತಯಾರು ಮಾಡುತ್ತವೆ, ವಿಸ್ಕೀ ತಯಾರು ಮಾಡುತ್ತವೆ ಮತ್ತು ಇನ್ನಿತರ ಮದ್ಯದ ಪದಾರ್ಥಗಳೂ ತಯಾರಾಗುತ್ತವೆ. ಮಂಡ್ಯದಲ್ಲಿ ಬ್ರಾಂದಿಯನ್ನು ತಯಾರುಮಾಡುತ್ತಿದ್ದಾರೆ. ಇದನ್ನೆಲ್ಲಾ ತಯಾರು ಮಾಡುವುದರ ಉದ್ದೇಶವಾದರೂ ಏನು? ಆದಾಯದ ದೃಷ್ಟಿಯಿಂದ ಮಾಡುತ್ತಿದ್ದಾರೆಯೇ ಅಥವಾ ಪರದೇಶಗಳಿಗೆ ಎಕ್ಸ್‌ಪೋರ್ಟ್ ಮಾಡಿ ಆದಾಯ ಗಳಿಸುವುದಕ್ಕಾಗಿ ಮಾಡುತ್ತಿದ್ದಾರೆಯೇ? ಅಥವಾ ತಮ್ಮ ಖರ್ಚಿಗೋಸ್ಕರ ಎಂದು ಮಾಡು ತ್ತಿದ್ದಾರೆಯೇ? ಎನ್ನುವ ಪ್ರಶ್ನೆ ಬರುತ್ತದೆ. ಯಾವಾಗ ನೀವು ಉತ್ಪಾದನೆಗಾಗಿ ಲೈಸನ್ಸನ್ನು ಕೊಡುತ್ತೀರೋ ಅದರ ವ್ಯಾಪಾರ ವಿತರಣೆಗಳ ಕಡೆಗೂ ನೀವು ಗಮನ ಕೊಡಬೇಕು. ಇವೊತ್ತು ಕಳ್ಳಭಟ್ಟಿ ಇಳಿಸುವಾಗ ಅದರೊಡನೆ ಇನ್ನೂ ಕೆಲವು ಪದಾರ್ಥಗಳನ್ನೂ ಮಾಡುತ್ತಾರೆ. ಅನೇಕ ತರಹದ ಹಳಸಿದ ಮತ್ತು ಕೊಳೆತ ಹಣ್ಣಿನ ಪದಾರ್ಥಗಳನ್ನುಪಯೋಗಿಸಿ, ಕಸದಲ್ಲಿ ರಸ ಮಾಡುವಂತೆ, ಮಾಡುತ್ತಾರೆ, ಇವೆಲ್ಲ ಅಂಶಗಳನ್ನೂ ಗಮನಕ್ಕೆ ತೆಗೆದುಕೊಂಡು ಒಂದು ರ್‍ಯಾಷನಲ್ಲಾಗಿ, ವಿಚಾರ ಪರರು ಒಪ್ಪುವಂತಹ ನೀತಿಯನ್ನು ಅನುಸರಿಸುವ ಧೈರ್ಯವನ್ನು ನಾವು ಮಾಡೋಣ.

4-30 P.M.

ಏಕೆಂದರೆ ಪೂರ್ಣವಾಗಿ ಈ ಮಾದಕ ವಸ್ತುಗಳನ್ನು ಈ ಜಗತ್ತಿನಿಂದಲೇ ಓಡಿಸಿಬಿಡಬೇಕೆಂದರೆ ಅದು ಮನುಷ್ಯಮಾತ್ರದವನಿಂದ ಸಾಧ್ಯವಾಗಲಾರದ ಮಾತದು. ಈ ದಿವಸ ನಮಗೆ ಅವಶ್ಯಕವಾಗಿ ಬೇಕಾಗಿರತಕ್ಕ ಅನೇಕ ವಸ್ತುಗಳ ತಯಾರಿಕೆಗೆ ಆಲ್ಕೋಹಾಲಿಲ್ಲದೆ ಅವುಗಳನ್ನು ತಯಾರಿಸು ವುದಕ್ಕಾಗುವುದಿಲ್ಲ. ಆಲ್ಕೋಹಾಲಿಲ್ಲದೆ ಈ ಮಾದಕ ವಸ್ತುಗಳನ್ನು ತಯಾರುಮಾಡುವುದಕ್ಕಾಗು ವುದಿಲ್ಲ. ಆ ವಸ್ತುಗಳನ್ನು ತಯಾರಿಸತಕ್ಕ ಬಗ್ಗೆ ತಯಾರಾಗುವ ಆಲ್ಕೋಹಾಲನ್ನೇ ಜನರು ಅಲ್ಲೇ ಕುಡಿದರೂ ಕುಡಿಯಬಹುದು. ಅಂಥ ಸಂದರ್ಭಗಳಿರುತ್ತವೆ. ಅಥವಾ ಆ ಮಾದಕ ವಸ್ತುಗಳು ತಯಾರಾಗತಕ್ಕ ಕಾಲದಲ್ಲೇ ಜನರು ಅಲ್ಲೇ ಕುಡಿಯಬಹುದು. ಈಗ ನಾವು ಈ ಮಾದಕ ಸೇವನೆ ಮಾಡತಕ್ಕ ಜನರ ಬಗ್ಗೆ ಮಾಡಿರತಕ್ಕ ಕಾನೂನು ಅಷ್ಟು ಸರಿಯಾಗಿದ್ದಂತೆ ಕಂಡುಬರುವುದಿಲ್ಲ. ಕೆಲವು ಮಾದಕ ಪದಾರ್ಥಗಳನ್ನು ಸೇರಿಸಿ ತಯಾರುಮಾಡತಕ್ಕ ವಸ್ತುಗಳ ಬಗ್ಗೆ, ಈ ಮಾದಕ ವಸ್ತುಗಳು ಯಾವುವೇ ಆಗಿರಲಿ, ಗಾಂಜಾನೇ ಆಗಿರಲಿ, ಹೊಗೆಯಸೊಪ್ಪೇ ಆಗಿರಲಿ, ಶೇಂದಿಯೇ ಆಗಿರಲಿ ಅಥವಾ ಶರಾಬೇ ಆಗಿರಲಿ ಈ ಪೈಕಿ ಯಾವ ವಸ್ತುವಾದರೂ ಆಗಿರಬಹುದು, ಅದನ್ನು ತಯಾರು ಮಾಡುವ ಮೂಲದಿಂದ ಹಿಡಿದು ಅವುಗಳನ್ನು ತಯಾರುಮಾಡುವ ವಸ್ತುಗಳು, ಅವುಗಳನ್ನು ತಯಾರು ಮಾಡುವ ಕ್ರಮ, ಹಾಗೂ ತಯಾರುಮಾಡುವ ಸ್ಥಳ ಮತ್ತು ಕಾಲ ಈ ಅಂಶಗಳನ್ನೆಲ್ಲಾ ಗಣನೆಯಲ್ಲಿ ಇಟ್ಟುಕೊಂಡು ಇದನ್ನು ಯಾರು ಉಪಯೋಗಿಸಬೇಕು, ಎಂಬುದನ್ನೆಲ್ಲಾ ಕಾನೂನಿನಲ್ಲಿ ಅಡಕಮಾಡಿ, ಈ ವಸ್ತುಗಳ ಮಾರಾಟದಿಂದ ನಮ್ಮ ರಾಜ್ಯಕ್ಕೆ ಬರತಕ್ಕ ವರಮಾನ, ಈ ಸಾಮಾನುಗಳ ಮಾರಾಟ ದಿಂದ ಅಥವಾ ಇವುಗಳ ಸೇವನೆಯಿಂದ ಅಂದರೆ ಇವುಗಳ ತಯಾರಿಕೆಯಿಂದಲೇ ರಾಜ್ಯಕ್ಕೆ ಹಣ ಬರಬಹುದು, ಇಲ್ಲವೇ ಇವುಗಳನ್ನು ಮಾರಾಟಮಾಡುವುದರಿಂದ ರಾಜ್ಯಕ್ಕೆ ವರಮಾನ ಬರಬಹುದು, ಅಥವಾ ಇವುಗಳ ತಯಾರಿಕೆಯಿಂದಲಾದರೂ ರಾಜ್ಯಕ್ಕೆ ಹಣ ಬರಬಹುದು, ಈ ಘಟನಾವಳಿ ಗಳನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಒಂದು ಸಮಗ್ರವಾದ ಕಾನೂನನ್ನು ನಾವೀಗ ತಯಾರಿಸ ಬೇಕಾಗಿದೆ. ಈ ಅಂಶಗಳನ್ನೆಲ್ಲಾ ನಾವು ಗಮನದಲ್ಲಿಟ್ಟುಕೊಂಡು ನಮ್ಮ ಪಾನನಿರೋಧದ ಕಾನೂನನ್ನು ಮಾರ್ಪಾಡು ಮಾಡಿಕೊಂಡರೆ ಇದರಿಂದ ಮಹಾತ್ಮ ಗಾಂಧಿಯವರಿಗೇನೂ ಬೇಸರ ವಾಗುವುದಿಲ್ಲವೆಂದು ನನಗನ್ನಿಸುತ್ತಿದೆ. ಇದೇ ವಿಚಾರವನ್ನು ಡಾ॥ ರಾಮಮನೋಹರ ಲೋಹಿಯಾ ಅವರು ಮಾತನಾಡುವಾಗ ನಮ್ಮ ದೇಶದಲ್ಲಿ ಜನರಿಗೆ ಎಲ್ಲಿಯವರೆಗೆ ತಿನ್ನಲಿಕ್ಕೆ ಅನ್ನ, ಉಡಲಿಕ್ಕೆ ಬಟ್ಟೆ ಇಲ್ಲದಂಥ ದಾರಿದ್ರ್ಯಾವಸ್ಥೆಯಲ್ಲಿರುತ್ತೇವೆಯೋ ಅಲ್ಲಿಯವರೆಗೆ ನಾವು ಈ ಮಾದಕ ವಸ್ತುಗಳನ್ನು ಯಾವ ಕಾರಣಕ್ಕೇ ಆಗಲೀ ಲಗ್ಷುರಿ ವಸ್ತುಗಳೆಂದು ಪರಿಗಣಿಸಿ, ಅವುಗಳನ್ನು ಈ ಅಪಿಟೈಟ್ ಇತ್ಯಾದಿ ಯಾವುದೇ ಕಾರಣಕ್ಕಾಗಲೀ ಇವುಗಳನ್ನು ಉಪಯೋಗಿಸಬಾರದೆಂದು ಹೇಳಿದ್ದಾರೆ. ಇದರಿಂದ ಅನೇಕ ಬಡ ಸಂಸಾರಗಳು ಹಾಳಾಗುತ್ತವೆಂದು ಹೇಳಿ ಇದರ ಬಗ್ಗೆ ಒಂದು ಭಯಾನಕ

ಚಿತ್ರವನ್ನೇ ಅವರು ನಮ್ಮ ಮುಂದೆ ಇಟ್ಟಿದ್ದಾರೆ. ಅದರಲ್ಲಿಯೂ ನಮ್ಮ ದೇಶದಲ್ಲಿ ಪೋಲೀಸರ ನೀತಿ ಸಾರ್ವತ್ರಿಕವಾಗಿ ಕೆಟ್ಟುಹೋಗಿರುವಾಗ ಏನಕ್ಕೊಂದು ಪರಿಹಾರವನ್ನು ತಕ್ಷಣ ಒದಗಿಸಬೇಕೆಂದೂ, ಆ ಪರಿಹಾರ ಶಾಶ್ವತವಾಗಿರಬೇಕೆಂದೂ ಶ್ರೀಮತಿ ಬಿ. ಎಸ್. ಸುಬ್ಬಮ್ಮನವರು ಸದಾ ಹೇಳುತ್ತಲೇ ಇದ್ದಾರೆ. ಆದರೆ ಅವರ ಭಾಷಣದಿಂದೇನೂ ಪ್ರಯೋಜನವಾಗುತ್ತಿಲ್ಲ.

ಅಧ್ಯಕ್ಷರು.—ಶ್ರೀಮತಿ ಸುಬ್ಬಮ್ಮನವರಿಗೆ ಶಾಶ್ವತವಾಗಿ ಈ ಸಭೆಯ ಸದಸ್ಯತ್ವವನ್ನು ತಾವು ಕೊಡಿಸುತ್ತೀರಾ ?

ಶ್ರೀ ಎಸ್. ಗೋಪಾಲ ಗೌಡ.—ನಾನು ಅವರ ಹೆಸರನ್ನು ಏತಕ್ಕಾಗಿ ಹೇಳಿದೆನೆಂದರೆ ಅವರು ಯಾವಾಗಲೂ ಈ ವಿಚಾರವನ್ನು ಬಹಳ ಕಟುವಾಗಿ ಹೇಳುತ್ತಿರುತ್ತಾರೆ. ಆದರೆ ಇದು ಯಾರನ್ನೂ ತೃಪ್ತಿಪಡಿಸತಕ್ಕ ಒಂದು ವಿಚಾರವಲ್ಲ. ಸರ್ಕಾರದವರು ಈ ವಿಚಾರದಲ್ಲಿ ಒಂದು ದಿಟ್ಟತನದಿಂದ ಧೈರ್ಯವಾಗಿ ಒಂದು ನಿಲುವನ್ನು ತೆಗೆದುಕೊಳ್ಳುವುದೊಳ್ಳೆಯದು.

ಇನ್ನು ನಮ್ಮ ಶ್ರೀಮಾರ್ಕ ಮುನಿಸ್ವಾಮಿಯವರು ಹೇಳಿದರು ಅವರ ಹರಿಜನರಲ್ಲೂ ಕೂಡ ಬಹಳ ದಕ್ಷರಾದ ಜನರಿದ್ದಾರೆ—ಆದ್ದರಿಂದ ಅವರಿಗೂ ಈ ಪಬ್ಲಿಕ್ ಪ್ರಾಸಿಕ್ಯೂಟರ ಕೆಲಸವನ್ನೂ, ಗೌರ್ನ್ಮೆಂಟ್ ಪ್ಲೀಡರುಗಳ ಕೆಲಸವನ್ನೂ ಕೊಡಬೇಕೆಂದು ಹೇಳಿದರು. ಅವರ ಮಾತನ್ನು ಸಮರ್ಥನೆ ಮಾಡುವಂತೆ ಮಾನ್ಯ ಸಚಿವರು ಒಂದು ಜಾತೀಯತೆಯ ದೃಷ್ಟಿಯಿಂದ ಕೆಲವು ಸಲ ಪೊಲಿಟಿಕಲ್ ಕಾರಣಗಳಮೇಲೂ ನೇಮಕ ಮಾಡುವುದು ಉಂಟು. ಈ ಪೊಲಿಟಿಕಲ್ ಅಪಾಯಿಂಟ್‌ಮೆಂಟ್ಸ್‌ಗಳನ್ನೆಲ್ಲಾ ಬರೀ ಕಾಂಗ್ರೆಸ್ಸಿನವರಿಗೇ ನೇಮಕ ಮಾಡುತ್ತಾರೆಂದು ಹೇಳುವುದಕ್ಕಾಗುವುದಿಲ್ಲ. ಕೆಲವು ವೇಳೆ ದಕ್ಷತೆಯಿಲ್ಲದವರನ್ನೂ ನೇಮಕ ಮಾಡುತ್ತಾರೆ. ಹೀಗಾಗಿ ಈ ದಿವಸ ಈ ಅಧಿಕಾರಿಗಳ ಮೇಲಿರತಕ್ಕ ಒಂದು ವಿಶ್ವಾಸ ಜನರಲ್ಲಿ ಉಳಿದಿಲ್ಲ. ಅನೇಕ ಸಾಮಾನ್ಯ ಜನರಿಗೆ ಈ ದಿವಸ ನ್ಯಾಯ ದೊರೆಯುತ್ತಿಲ್ಲ; ಅವರಿಗೆ ರಕ್ಷಣೆ ದೊರೆಯುತ್ತಿಲ್ಲ. ಅವರನ್ನು ಯಾರಾದರೂ ಬಾರುಕೋಲಿನಿಂದ ಬಡಿದರೂ ಬಡಿಸಿಕೊಂಡು ಮರ್ಯಾದೆಯಿಂದ ಮನೆಯಲ್ಲೇ ಇರಬೇಕಾಗಿದೆ. ಸರ್ಕಾರದವರು ಈ ವಿಚಾರಕ್ಕೆ ಸೂಕ್ತ ಗಮನ ಕೊಡಬೇಕಾದ್ದು ಅಗತ್ಯ.

ಇನ್ನು ಜನಸಾಮಾನ್ಯರಿಗೆ ದೊರೆಯಬೇಕಾದ ನ್ಯಾಯವೇನಿದೆ ಅದು ಅವರಿಗೆ ಸಕಾಲಕ್ಕೆ ನೇರವಾಗಿ ದೊರೆಯುತ್ತಿಲ್ಲ. ಈ ವಿಚಾರದಲ್ಲಿ ದಿನೇ ಜಾಸ್ತಿಯಾಗುತ್ತಿದೆ. ಜನಸಾಮಾನ್ಯರಿಗೆ ದೊರೆಯಬೇಕಾದ ನ್ಯಾಯ ಹೆಚ್ಚು ವೆಚ್ಚವಿಲ್ಲದೆ ಅವರವರ ಬಾಗಿಲಿಗೇ ಬರುವಂತೆ ಮಾಡುತ್ತೇವೆಂಬ ಮಾತು ಒಂದು ಗಗನ ಕುಸುಮವಾಗೇ ಉಳಿಯಿತು. ಇದು ಜನರಿಗೆ ಲಭಿಸಲಾರದೆಂಬ ಶಂಕೆ ನನಗೆ ಉಂಟಾಗಿದೆ. ಕೆಲವು ಸಂದರ್ಭಗಳಲ್ಲಿ ಆಸಾಮಿ ತೀರಿಕೊಂಡರೂ ಅವನ ಕೇಸುಗಳು ಕೋರ್ಟಿನಲ್ಲಿನ್ನೂ ತೀರ್ಮಾನವಾಗಿರುವುದಿಲ್ಲ. ಆದರೆ ನಾವು ಹೊರಗಡೆ ಈ ವಿಚಾರಗಳನ್ನೇನಾದರೂ ಹೇಳಿದರೆ ಅದು ಒಂದು ತಕ್ಸೀರಾಗುತ್ತದೆ. ಜಡ್ಜಿಗಳಿಗೆ ನೀವು ಹೀಗೇ ಕೇಸುಗಳನ್ನು ವಿಚಾರಣೆ ಮಾಡಿ ಎಂದು ಯಾರೂ ಹೇಳುವುದಕ್ಕಾಗುವುದಿಲ್ಲ. ಇದೊಂದು ಸ್ವಯಂ ನಿಯಂತ್ರಣ. ಇದು ತನ್ನ ಸ್ವಯಂ ಚಲಿತದಲ್ಲೇ ತನ್ನ ಕರ್ತವ್ಯವನ್ನು ಅರಿತುಕೊಂಡು ಕೆಲಸ ಮಾಡಬೇಕಾಗಿದೆ. ಆದರೆ ಈಗ ಕೇಸುಗಳು ಬೇಗ ತೀರ್ಮಾನವಾಗುವುದಿಲ್ಲ. ಆದರೆ ಈ ಕೋರ್ಟ್ ಬಾಬಿನಲ್ಲೂ ವರ್ಷೇ ವರ್ಷೇ ಟ್ಯಾಕ್ಸ್‌ಗಳು, ಸ್ಟ್ಯಾಂಪ್ ಡ್ಯೂಟಿಯನ್ನು ಬಡಜನರ ಮೇಲೆ ಹೇರುತ್ತಲೇ ಇದ್ದಾರೆ. ಇದನ್ನೆಲ್ಲಾ ನೋಡಿ ಬಡವನಾಗಿರತಕ್ಕವನು ನಾಲ್ಕು ಏಟನ್ನು ತಿಂದರೂ ಚಿಂತೆಯಿಲ್ಲ ಎಂದು ಈ ಕೋರ್ಟುಗಳಿಗೆ ಹೋಗಿ ಮನೆ ಮಠಗಳನ್ನು ಹಾಳುಮಾಡಿಕೊಳ್ಳುವುದು ಬೇಡ ಎಂದು ತೆಪ್ಪಗಿದ್ದುಬಿಡುತ್ತಾರೆ. ಈ ದಿವಸ ಜನರು ತಮ್ಮ ಆಸ್ತಿ, ಮಾನ, ನ್ಯಾಯ, ಧರ್ಮ ಇವುಗಳ ಸುರಕ್ಷತೆಯ ಬಗ್ಗೆ ಅವರು ನಿರ್ಭಯವಾಗಿರಬೇಕು. ಆದರೆ ಅದಕ್ಕೆ ಇಂದು ಅವಕಾಶಮಾಡಿಲ್ಲ. ನಮ್ಮ ಅಧ್ಯಕ್ಷರೂ ಕೂಡ 40 ವರ್ಷಗಳಿಗೆ ಮೇಲ್ಪಟ್ಟು ವಕೀಲಿ ಕೆಲಸ ಮಾಡಿದ್ದಾರೆ. ಅಂಥವರ ಅನುಭವವನ್ನಾದರೂ ಲಾ ಇಲಾಖೆಯವರು ಪಡೆಯಬಹುದು. ಅದನ್ನೂ ಸಹ ಅವರು ಮಾಡುತ್ತಿಲ್ಲ. ಇನ್ನು ನಾನು ಭಾಷೆಯ ವಿಷಯವಾಗಿ ಅನೇಕ ಸಾರಿ ಮಾತನಾಡಿದ್ದೇನೆ. ಇವನು ಯಾವಾಗಲೂ ಹೀಗೆ ಮಾತನಾಡುತ್ತಿರುತ್ತಾನೆ ಎಂದು ಕೆಲವರು ಹೇಳಬಹುದು. ಈ ದಿವಸ ಜಡ್ಜ್‌ಮೆಂಟನ್ನು ಇಂಗ್ಲೀಷಿನಲ್ಲಿ ಬರೆದು ಜನರನ್ನು ಗಲ್ಲಿಗೆ ಹಾಕುವುದು ಬೇಡ, ಕನ್ನಡದಲ್ಲೇ ಆ ಜಡ್ಜ್‌ಮೆಂಟನ್ನು ಬರೆದು ಆ ಶಿಕ್ಷೆಯನ್ನು ಕೊಡಬಹುದಲ್ಲ ? ಕನ್ನಡದಲ್ಲಿ ಹೇಳಿದ್ದನ್ನು ಜಡ್ಜಿ ಇಂಗ್ಲೀಷಿನಲ್ಲಿ ಬರೆದುಕೊಳ್ಳುವಾಗ ಏನು ಬೇಕಾದರೂ ಬರೆದುಕೊಳ್ಳಬಹುದು. ಕನ್ನಡದಲ್ಲಿ ಒಬ್ಬ ಮನುಷ್ಯ 'ನನ್ನನ್ನು ದೊಣ್ಣೆಯಿಂದ ಹೊಡೆದನೆಂದು' ಹೇಳುತ್ತಾನೆ. ಆಗ ಜಡ್ಜಿ ಅದನ್ನು 'ಹಿ ವಾಸ್ ಹಿಟ್ ಬೈ ಎ ಸ್ಟಿಕ್' ಎಂತ ಬರೆದುಕೊಳ್ಳಬಹುದು. ಇನ್ನೊಬ್ಬನು ಹತ್ತು ಕಾಲ್ನಡಿಗಳು ಇವೆ ಎಂದು ಹೇಳುತ್ತಾನೆ—ಇಂಥದನ್ನೆಲ್ಲಾ ತರ್ಜುಮೆ ಮಾಡುವುದಕ್ಕಾಗುವುದಿಲ್ಲ. ಜನರ ದಿನಬಳಕೆಯ ಭಾಷೆ ಯಾವುದಿದೆಯೋ ಅದರಲ್ಲೇ ಜಡ್ಜ್‌ಮೆಂಟನ್ನು ಬರೆಯುವಂತೆ ಮಾಡುವುದೊಳ್ಳೆಯದು. ಇಲ್ಲವಾದರೆ ಇದರಿಂದ ಅನೇಕ ಸಂದರ್ಭದಲ್ಲಿ ಕೆಟ್ಟ ಪರಿಣಾಮವಾಗಬಹುದು. ಈ ದಿವಸ ಹೈದ್ರಾಬಾದಿನಲ್ಲಿ ಉರ್ದು ಭಾಷೆಯಲ್ಲಿ ಜಡ್ಜ್‌ಮೆಂಟನ್ನು

(ಶ್ರೀ ಎಸ್. ಗೋಪಾಲ ಗೌಡ)

ಬರೆಯುತ್ತಿಲ್ಲವೇನು ? ಹಾಗೆ ಕನ್ನಡದಲ್ಲೇಕೆ ಬರೆಯಬಾರದು ? ಇನ್ನಾದರೂ ಈ ಇಂಗ್ಲಿಷ್ ಭಾಷೆಯ ವ್ಯವಹಾರವನ್ನು ನಿಲ್ಲಿಸಬೇಕೆಂದು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ವಿ. ಮಸಿಯಪ್ಪ (ಹಿರಿಯೂರು).—ಮಾನ್ಯ ಅಧ್ಯಕ್ಷರೇ, ನಾನೀದಿವಸ ಈ ಡಿಮ್ಯಾಂಡಿನ ಮೇಲೆ ಮಾತನಾಡಲು ಇಷ್ಟಪಟ್ಟಿದ್ದು ಮುಖ್ಯವಾಗಿ ನಮ್ಮ ಚಿತ್ರದುರ್ಗ ಜಿಲ್ಲೆಯಲ್ಲಿ ಒಂದು ಡಿಸ್ಟ್ರಿಕ್ ಮತ್ತು ಸೆಷನ್ಸ್ ನ್ಯಾಯಾಲಯವನ್ನು ತೆರೆಯಬೇಕೆಂಬುದರ ಕಡೆಗೆ ಸರ್ಕಾರದವರ ಗಮನವನ್ನು ಸೆಳೆಯಬೇಕೆಂಬ ಬಗ್ಗೆ ನಾನೀಗ ಮಾತನಾಡಲು ನಿಂತಿದ್ದೇನೆ. ಈ ಒಂದು ವಿಚಾರದಲ್ಲಿ ನಾವು ಒಂದೇ ಸಮನಾಗಿ ಇಲ್ಲಿಗೆ 15-16 ವರ್ಷಗಳಿಂದಲೂ ಪ್ರಯತ್ನಪಡುತ್ತಿದ್ದೇವೆ. ಈ ವಿಚಾರವನ್ನು ಹಿಂದಿನ ಲಾ ಮಂತ್ರಿಗಳಿದ್ದ ಕಾಲದಿಂದಲೂ ಮತ್ತು ಹಿಂದೆ ಇದ್ದ ಈಗಿನ ಮುಖ್ಯಮಂತ್ರಿಗಳ ಕಾಲದಿಂದಲೂ ಮತ್ತು ಈಗಿರತಕ್ಕ ಲಾ ಮಂತ್ರಿಗಳ ಕಾಲದಿಂದಲೂ ಪ್ರಯತ್ನವನ್ನು ಮಾಡುತ್ತಲೇ ಇದ್ದೇವೆ.

ಅಧ್ಯಕ್ಷರು.—ಹಿಂದೆ ಇದ್ದ ಲಾ ಮಂತ್ರಿಗಳ್ಯಾರು ?

ಶ್ರೀ ವಿ. ಮಸಿಯಪ್ಪ.—ಎಲ್ಲರೂ ಕೂಡ ಹಿಂದೆ ಚಿತ್ರದುರ್ಗ ಪೌರಸಭೆಗೆ ಬಂದಂಥ ಸಂದರ್ಭದಲ್ಲಿ ಭರವಸೆಯನ್ನು ಕೊಟ್ಟಿದ್ದಾರೆ.

ಅಧ್ಯಕ್ಷರು.—ಡಿಸ್ಟ್ರಿಕ್ಟ್ ಕೋರ್ಟು ಪ್ರತಿಯೊಂದು ಜಿಲ್ಲೆಗೂ ಮಾಡಿದೆ.

ಶ್ರೀ ವಿ. ಮಸಿಯಪ್ಪ.—ಯಾರೋ ಒಬ್ಬ ಸದಸ್ಯರು ಹೇಳಿದ ಹಾಗೆ ರಜಾ ಅವಧಿ ಮುಗಿದ ಮೇಲೆ ಬಿಲ್ಡಿಂಗ್ ಸೆಲೆಕ್ಟ್ ಮಾಡಿದ್ದಾರೆ. ಆದಷ್ಟು ಜಾಗ್ರತೆ ಅದನ್ನು ಪ್ರಾರಂಭಮಾಡಬೇಕೆಂದು ಹೇಳುತ್ತೇನೆ. ಯಾವ ಕಾರಣದಿಂದಲೂ ಮುಂದುವರಿಯುವುದಕ್ಕೆ ಅವಕಾಶಕೊಡದಂತೆ ಮಾಡಬೇಕು ಎಂಬುದಾಗಿ ಕೇಳಿಕೊಳ್ಳುತ್ತೇನೆ. ಇನ್ನು ನನ್ನ ಮಾನ್ಯ ಸ್ನೇಹಿತರು ಕೆಲವರು ಈ ಪಾನ ನಿರೋಧದ ಅವ್ಯವಸ್ಥೆ ಬಗ್ಗೆ ಒಂದೆರಡು ಮಾತುಗಳನ್ನು ಹೇಳಿದ್ದಾರೆ. ನಾನು ಹೇಳುವುದಿಷ್ಟೆ. ಪ್ರೊಹಿಬಿಷನ್ ಯಶಸ್ವಿಯಾಗಿಲ್ಲವೆಂದು ಹೇಳತಕ್ಕ ಒಂದು ವಾದ ಮತ್ತು ಪ್ರೊಹಿಬಿಷನ್ ಚೆನ್ನಾಗಿ ಯಶಸ್ವಿಯಾಗಿದೆ ಎಂದು ಹೇಳತಕ್ಕ ಮತ್ತೊಂದು ವಾದ ಈಗ ಇದೆ. ಇವೆರಡರಲ್ಲೂ ಸ್ವಲ್ಪಮಟ್ಟಿನ ಸಂತ್ಯಾಂಶವಿದೆ. ಕುಡಿಯುವ ಯಾವ ಜನರಿದ್ದಾರೋ, ಅದರಲ್ಲಿಯೂ ಹಿಂದುಳಿದ ಜನರು ಯಾರು ಇದ್ದಾರೋ, ಅದಾಯ ಕಡಿಮೆ ಇರತಕ್ಕ ಜನ ಯಾರಿದ್ದಾರೆಯೋ ಅವರನ್ನು ನೋಡಿದರೆ ಶೇಕಡ 90 ಭಾಗ ಬಿಟ್ಟಿದ್ದಾರೆಂದು ನಾನು ಹೇಳಬಲ್ಲೆ. ಹೊಸ ಜನ ಕುಡಿಯುವುದನ್ನು ಕಲಿತುಕೊಂಡೇ ಕಳ್ಳಭಟ್ಟಿ ಸಾರಾಯಿ ತಯಾರಾಗುತ್ತಿದೆ. ಮಧ್ಯಮ ವರ್ಗದ ಜನರ ಆರ್ಥಿಕ ಪರಿಸ್ಥಿತಿ ಉತ್ತಮವಾಗುತ್ತಾ ಬಂದ ಹಾಗೆ ಕೆಲವರು ಹೊಸದಾಗಿ ಕುಡಿಯುವುದನ್ನು ಕಲಿತುಕೊಂಡಿದ್ದಾರೆ. ಸರಿಯಾದ ರೀತಿಯಲ್ಲಿ ಪ್ರಯತ್ನ ನಡೆಸಿದ್ದೇ ಆದರೆ ಇದನ್ನು ಹತೋಟಿಗೆ ತರುವುದಕ್ಕೆ ಅಸಾಧ್ಯವೆಂದು ನಾನು ಭಾವಿಸಿಕೊಂಡಿಲ್ಲ. ಐದಾರು ವರ್ಷಗಳ ಹಿಂದೆ ಇದ್ದ ಹಾಗೆ ಇವತ್ತು ಅಷ್ಟು ಭಯಂಕರ ಕೃತ್ಯಗಳು ಇಲ್ಲ. ಅಂತಹ ಒಂದು ಪರಿಸ್ಥಿತಿಯೂ ಇಲ್ಲ. ಅದನ್ನು ಈಗ ಶೇಕಡ 5 ಅಥವಾ 10ರಷ್ಟು ಕಾಣಬಹುದು. ಆದ್ದರಿಂದ ಎಫೆಕ್ಟಿವ್ ಆಗಿ ಪ್ರಯತ್ನಗಳನ್ನು ನಡೆಸಿದರೆ ಇದನ್ನು ಹತೋಟಿಗೆ ತರುವುದಕ್ಕೆ ಖಂಡಿತವಾಗಿ ಅವಕಾಶವಿದೆ. ಪಾನ ನಿರೋಧವನ್ನು ಸಂಪೂರ್ಣವಾಗಿ ರದ್ದುಮಾಡಿ ಪುನಃ ಕುಡಿತವನ್ನು ಜಾರಿಗೆ ತರಬೇಕೆಂದು ಹೇಳುವುದಕ್ಕಿಂತ ಅದನ್ನು ಹತೋಟಿಗೆ ತರುವುದಕ್ಕೆ ಪ್ರಯತ್ನ ಮಾಡುವುದು ಒಳ್ಳೆಯದು ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ವ್ಯವಸಾಯಗಾರರ ದೃಷ್ಟಿಯಿಂದ ಬೆಂಗಳೂರಿನಲ್ಲಿ ದ್ರಾಕ್ಷಿಹಣ್ಣುಗಳನ್ನು ಬೆಳೆಯುವುದರಿಂದ, ಅಲ್ಲಿ ಸಾಕಷ್ಟು ಸೌಕರ್ಯಗಳಿರುವುದರಿಂದ, ಇಲ್ಲಿ ಒಂದು ವೈನ್ ಫ್ಯಾಕ್ಟರಿಯನ್ನು ತಯಾರು ಮಾಡಬೇಕೆಂದು ಅನೇಕ ಕಾಲದಿಂದ ಪ್ರಯತ್ನ ನಡೆಯುತ್ತಾ ಇದೆ. ಆದರೆ ಮಾರ್ಕೆಟ್ ಇಲ್ಲವೆಂಬುದನ್ನು ಇಲ್ಲಿ ಯೋಚನೆ ಮಾಡಬೇಕಾಗಿಲ್ಲ. ಈ ಕೈಗಾರಿಕೆಯಲ್ಲಿ ಉತ್ಪಾದನೆ ಮಾಡುವವರು ಮಾರ್ಕೆಟ್ಟನ್ನು ಕಂಡುಹಿಡಿಯುತ್ತಾರೆ. ಮೈಸೂರು ಸಂಸ್ಥಾನದಲ್ಲಿ ಮಾತ್ರ ಮಾರಾಟವಾಗಬೇಕು, ಅಂದರೆ ಸಾಲದು.

ಶ್ರೀ ಎಸ್. ಗೋಪಾಲ ಗೌಡ.—ಬೇರೆ ಕಡೆಯವರು ಕುಡಿದು ಹಾಳಾಗುವುದಾದರೆ ತಪ್ಪಿಲ್ಲ.

MR. SPEAKER.—Sri Sanjeevanath Aikala drew a distinction between drinking and drunkenness.

ಶ್ರೀ ವಿ. ಮಸಿಯಪ್ಪ.—ಆದ್ದರಿಂದ ದ್ರಾಕ್ಷಿ ಬೆಳೆಯುವವರು ನಗರದ ಸುತ್ತಮುತ್ತಲಿರುವ ಪ್ರದೇಶಗಳಲ್ಲಿ ಸಾಧ್ಯವಾದಷ್ಟು ಜಾಗ್ರತೆಯಾಗಿ ಇಂತಹ ಕಾರ್ಖಾನೆಯನ್ನು ಸ್ಥಾಪನೆ ಮಾಡುವುದು ಅಗತ್ಯವೆಂದು ನಾನು ಹೇಳುತ್ತೇನೆ. ತನಿಖೆ ನಡೆದಿದೆ. ಈ ಹಣ್ಣಿನ ರಸ ಇದಕ್ಕೆ ಹೊಂದಿಕೆಯಾಗುತ್ತದೆಯೋ ಇಲ್ಲವೇ ಎಂಬುದನ್ನು ಈಗ ಪರೀಕ್ಷೆ ನಡೆಸುತ್ತಿದ್ದಾರೆ. ಕೈಗಾರಿಕೆ ಇಲಾಖೆಯಿಂದ ಇದು

ಪರಿಣಾಮಕಾರಿಯಾಗಿ ಮತ್ತು ಲಾಭದಾಯಕವಾಗಿರುವ ಕಾರಣ ಇಲ್ಲಿ ಅಂತಹ ಒಂದು ಕಾರ್ಖಾನೆಯನ್ನು ಸ್ಥಾಪನೆ ಮಾಡುವುದಕ್ಕೆ ಅವಕಾಶವಿದೆಯೆಂದು ನಾನು ತಿಳಿದುಕೊಂಡಿದ್ದೇನೆ. ಆದ್ದರಿಂದ ಇದನ್ನು ಸೀರಿಯಸ್ಸಾಗಿ ಯೋಚನೆಮಾಡಿ ಲೈಸೆನ್ಸ್ ಕೊಡುವುದು ಒಳ್ಳೆಯದು. ಪಬ್ಲಿಕ್ ಸೆಕ್ಟರ್‌ನಿಂದ ಮತ್ತು ಪ್ರೈವೇಟ್ ಸೆಕ್ಟರಿನಿಂದ ಏನೇನು ಯೋಜನೆಗಳನ್ನು ಮಾಡಬೇಕೋ ಅವನ್ನು ಮಾಡಬೇಕೆಂದು ಹೇಳಲು ಇಷ್ಟಪಡುತ್ತೇನೆ.

ಇನ್ನು ಎಕ್ಸೆಸ್ಸ್ ಸರ್ವೆ ನಂಬರ್ಸ್ ಲ್ಯಾಂಡ್ಸ್ ಇವೆ. ಅನೇಕ ಜನ ಬಡವರು ಆ ಜಮೀನುಗಳನ್ನು ಸಾಗುವಳಿಗೆ ಕೊಡಬೇಕೆಂದು ಕೇಳುತ್ತಾ ಇದ್ದಾರೆ. ನಮ್ಮ ತಾಲ್ಲೂಕಿನಲ್ಲಿ ಅಂದರೆ ಹಿರಿಯೂರು ತಾಲ್ಲೂಕಿನ ಜವನಗೊಂಡನಹಳ್ಳಿ ಒಂದು ಗುಡ್ಡಗಾಡು ಪ್ರದೇಶ. ಇಲ್ಲಿ ಹಿಡುವಳಿ ಜಮೀನು ಬಹಳ ಕಡಿಮೆ ಇದೆ. ಹಳ್ಳಗಳಲ್ಲಿ ಮತ್ತು ನದಿಯ ದಂಡೆಗಳಲ್ಲಿ ಬಿಟ್ಟರೆ ಇನ್ನೆಲ್ಲೂ ಸರ್ವೆ ನಂಬರಿಗೆ ಸೇರಿದ ಈಚಲುಮರಗಳಿಲ್ಲ. ಈ ಸರ್ವೆ ನಂಬರ್ ಭೂಮಿಯನ್ನು ಸರ್ಕಾರ ತನ್ನ ವಶದಲ್ಲಿಟ್ಟುಕೊಂಡಿರುವುದಕ್ಕಿಂತ ಸಾಗುವಳಿಗಾದರೂ ಕೊಟ್ಟರೆ ನಾಲ್ಕಾಣೆ ಅಥವಾ ಆರಾಣೆ ಬೆಳೆ ಬೆಳೆಯುವಂತಹ ಬಡವರಿಗೆ ವ್ಯವಸಾಯ ಮಾಡಿಕೊಳ್ಳುವುದಕ್ಕೆ ಎಷ್ಟೋ ಸಹಾಯವಾಗುತ್ತದೆ. ಪ್ರತಿಯೊಬ್ಬರೂ ಬಹಳ ದಿವಸಗಳಿಂದ ಈ ಜಮೀನನ್ನು ಕೇಳುತ್ತಾ ಇದ್ದಾರೆ. ಆದ್ದರಿಂದ ಈಗ ತಾಲ್ಲೂಕಿನ ಅಧಿಕಾರಿಗಳು ಇಡೀ ಹೋಬಳಿಯ ಎಲ್ಲಾ ಗ್ರಾಮಸ್ಥರು ಸೇರಿ ಸರ್ವೆ ನಡೆಸಿ ಒಂದು ಪಟ್ಟಿಯನ್ನು ಕಳುಹಿಸಿಕೊಟ್ಟಿದ್ದಾರೆ. ಮತ್ತೆ ಒಂದು ಕಮಿಟಿಯನ್ನು ಮಾಡಿದ್ದಾರೆ. ಆ ಕಮಿಟಿಯವರು ಕೂಡ ಸರ್ವೆ ನಡೆಸಿ ಸರ್ಕಾರಕ್ಕೆ ಒಂದು ಸಂಪೂರ್ಣವಾದ ವರದಿಯನ್ನು ಕೊಟ್ಟು ಅದರಲ್ಲಿ ಯಾವ್ಯಾವ ಜಮೀನಿನಲ್ಲಿ ಎಷ್ಟೆಷ್ಟು ಎಕರೆಗಳನ್ನು ರಿಲೀಸ್ ಮಾಡಬಹುದು ಎಂಬುದಾಗಿ ವರದಿ ಕಳುಹಿಸಿಕೊಟ್ಟಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಆದ್ದರಿಂದ ಸರ್ಕಾರದವರು ಇದನ್ನು ಆದಷ್ಟು ಜಾಗ್ರತೆ ರಿಲೀಜ್ ಮಾಡಿಕೊಟ್ಟು ಆ ಜಮೀನುಗಳು ಜನಗಳಿಗೆ ಸಿಕ್ಕುವಹಾಗೆ ವ್ಯವಸ್ಥೆ ಮಾಡಿದರೆ ಆಗ ಅಲ್ಲಿನ ರೈತರು ತಮ್ಮ ಸ್ವಂತ ಕಾಲಿನ ಮೇಲೆ ನಿಂತು ವ್ಯವಸಾಯ ಮಾಡಿಕೊಂಡು ಗೌರವಯುತವಾದ ಜೀವನವನ್ನು ನಡೆಸಲಿಕ್ಕೆ ಅವಕಾಶವಾಗುತ್ತದೆ. ಈ ಕಾರ್ಯವನ್ನು ಆದಷ್ಟು ಜಾಗ್ರತೆ ಮಾಡಿಕೊಡಬೇಕೆಂದು ಸರ್ಕಾರದವರನ್ನು ಕೇಳಿಕೊಂಡು, ಇಷ್ಟುಹೊತ್ತು ಅಧ್ಯಕ್ಷರು ಮಾತನಾಡುವುದಕ್ಕೆ ನನಗೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಎಲ್. ಗೌಡ (ಚಳ್ಳಕೆರೆ).—ಅಧ್ಯಕ್ಷರೇ, ಈ ಇಲಾಖೆಯ ಬೇಡಿಕೆಯ ಮೇಲೆ ಮಾತನಾಡುತ್ತಾ ಹುದ್ದೆಗಳ ಸಮೀಕರಣ ಬಗ್ಗೆ ಜುಡಿಷಿಯರಿ ಇಲಾಖೆಯನ್ನು ಕುರಿತು ಒಂದೆರಡು ವಿಷಯಗಳನ್ನು ಹೇಳುತ್ತೇನೆ. ರಾಜ್ಯ ಪುನರ್ವಿಂಗಡಣೆ ಆಗುವುದಕ್ಕಿಂತ ಮುಂಚೆ ಮುಂಬೈ ರಾಜ್ಯದಲ್ಲಿ ರೆಸಿಡೆಂಟ್ ಮ್ಯಾಜಿಸ್ಟ್ರೇಟ್ ಅವರನ್ನು ನೇಮಕ ಮಾಡಿಕೊಳ್ಳುತ್ತಿದ್ದರು. ರೆಸಿಡೆಂಟ್ ಮ್ಯಾಜಿಸ್ಟ್ರೇಟ್ ಅವರನ್ನು ನೇರವಾಗಿ ರೆವಿನ್ಯೂ ಇಲಾಖೆಯಿಂದ ತೆಗೆದುಕೊಂಡಿರುವುದರಿಂದ ಅವರು ಕಲೆಕ್ಟರ್ ಅಥವಾ ರೆವಿನ್ಯೂ ಇಲಾಖೆಯ ಕೈಕೆಳಗೆ ಇರುತ್ತಿದ್ದರು. ಅವರ ಮೇಲೆ ಹೈಕೋರ್ಟಿನಲ್ಲಿ ಯಾವ ಅಧಿಕಾರವೂ ಇರುತ್ತಿರಲಿಲ್ಲ. ಇದಾದ ಮೇಲೆ 1953ರ ಹೊತ್ತಿಗೆ ಬದಲಾವಣೆ ಮಾಡಿ...

Sri R. M. PATIL.—When they were functioning as Resident Magistrates, they were under the control of Judiciary.

ಶ್ರೀ ಬಿ. ಎಲ್. ಗೌಡ.—ನನ್ನ ಹತ್ತಿರ ಕೆಲವು ದಾಖಲೆಗಳಿವೆ. ಬೇಕಾದರೆ ಅವೆಲ್ಲವನ್ನೂ ನ್ಯಾಯಾಂಗ ಸಚಿವರಿಗೆ ತೋರಿಸುತ್ತೇನೆ. They were under the control of the District Collector, they were not under the control of the Judiciary. ಆಗ ಇದನ್ನು ಬದಲಾವಣೆ ಮಾಡಿಬಿಟ್ಟು ಕೆಲವು ವಕೀಲರನ್ನು ಹೊಸದಾಗಿ ನೇಮಕ ಮಾಡಿಕೊಂಡರು. 1953ನೇ ಇಸವಿಯಲ್ಲಿ ಮುಂಬೈ ಕರ್ಣಾಟಕದಲ್ಲಿ ಸೆಪರೇಷನ್ ಆಫ್ ಜುಡಿಷಿಯರಿ ಆದ ಸಂದರ್ಭದಲ್ಲಿ ಎಲ್ಲಾ ಮ್ಯಾಜಿಸ್ಟ್ರೇಟರನ್ನು ಜ್ಯುಡಿಷಿಯರಿಗೆ ತೆಗೆದುಕೊಳ್ಳಲಿಲ್ಲ. ಕೆಲವರನ್ನು ಮಾತ್ರ ಆರಿಸಿ ತೆಗೆದುಕೊಂಡರು. ಇದರಲ್ಲಿ ಹುದ್ದೆಗಳ ಸಮೀಕರಣ ಯಾವ ರೀತಿ ಆಗಬೇಕೆಂಬುದನ್ನು ನಾನು ಹೇಳುತ್ತೇನೆ. 1953ನೇ ಇಸವಿಗಿಂತ ಮುಂಚೆ ರೆಸಿಡೆಂಟ್ ಮ್ಯಾಜಿಸ್ಟ್ರೇಟ್ ಅವರನ್ನು ರೆವಿನ್ಯೂ ಇಲಾಖೆಯಲ್ಲಿ ತೆಗೆದುಕೊಳ್ಳುತ್ತಿದ್ದರು. ಅದಾದ ಮೇಲೆ ಕೆಲವು ವಕೀಲರನ್ನು ತೆಗೆದುಕೊಂಡರು. 53 ರಿಂದಾಚೆಗೆ ಇವರನ್ನು ಜುಡಿಷಿಯರಿ ಆಫೀಸರ್ಸ್ ಎಂದು ಪರಿಗಣಿಸಲಿಲ್ಲ. ನಮ್ಮ ರಾಜ್ಯ ಪುನರ್ವಿಂಗಡಣೆಯಾದ ಮೇಲೆ ಕೆಲವರು ಅಲ್ಲಿಂದ ಇಲ್ಲಿಗೆ ಬಂದಿದ್ದಾರೆ ಅವರಿಗೂ, ಮೈಸೂರು ಸಂಸ್ಥಾನದಲ್ಲಿ ರೆಕ್ರೂಟ್‌ಮೆಂಟ್ ಆದ ಮುನ್ಸೀಫ್ ಅವರಿಗೂ ಯಾವ ರೀತಿ ಸಮೀಕರಣವಾಗಬೇಕೆಂಬ ಬಗ್ಗೆ ಪುನರ್ವಿಮರ್ಶೆ ತೆಗೆದುಕೊಂಡು ಫೈನಲ್ಲಾಗಿ ತೀರ್ಮಾನವನ್ನು ತೆಗೆದುಕೊಂಡಿದ್ದಾರೆಂಬ ವರ್ತಮಾನವಿದೆ. ಈ ಸಂದರ್ಭದಲ್ಲಿ ಸರ್ಕಾರಕ್ಕೆ ಒಂದು ಮಾತನ್ನು ಹೇಳಬಯಸುತ್ತೇನೆ. ಅದರಲ್ಲಿ date of entry into permanent cadre ಎಂಬುದನ್ನು ಗಣನೆಗೆ ತೆಗೆದುಕೊಳ್ಳಬೇಕು. ಅವರನ್ನು ಮುನ್ಸಿಫ್ ಎಂದು ಗಣನೆಗೆ ತೆಗೆದುಕೊಳ್ಳಬೇಕಾದರೆ ಜುಡಿಷಿಯರಿ ಸಪರೇಟ್

(ಶ್ರೀ ಬಿ. ಎಲ್. ಗೌಡ)

ಆದ ಮೇಲೆ ಯಾವ ದಿವಸದಿಂದ ಅವರು ಜೂನಿಯರ್ ಜಡ್ಜ್ ಆದರೋ ಆ ದಿವಸದಿಂದ ಗಣನೆಗೆ ತೆಗೆದುಕೊಳ್ಳಬೇಕು. ಆದರೆ ಅವರು ರೆವಿನ್ಯೂ ಇಲಾಖೆಯಲ್ಲಿ ಕೆಲಸ ಮಾಡುತ್ತಾ ಇದ್ದ ಕಾಲವನ್ನು ಗಣನೆಗೆ ತೆಗೆದುಕೊಂಡರೆ ಹಳೆಯ ಮೈಸೂರಿನ ಮುನ್ಸೀಫ್ ವರ್ಗಕ್ಕೆ ಬಹಳ ಅನ್ಯಾಯ ವಾಗುತ್ತದೆ. ಇದು ಬಹಳ ದಿವಸಗಳಿಂದ ನಿಧಾನವಾಗಿದೆ. ಈ ಬಗ್ಗೆ ತೀರ್ಮಾನವನ್ನು ಕೂಡಲೇ ತೆಗೆದುಕೊಳ್ಳಬೇಕು. ಈ ಒಂದು ಅಂಶವನ್ನು ಸರ್ಕಾರದವರು ತಮ್ಮ ಗಮನದಲ್ಲಿಡಬೇಕು. ನ್ಯಾಯಾಂಗ ಇಲಾಖೆಯೇ ಇಷ್ಟು ನಿಧಾನವಾದರೆ ಜನಗಳಿಗೆ ತುಂಬಾ ಅತೃಪ್ತಿಯುಂಟಾಗುತ್ತದೆ. ಇದರಿಂದ ನ್ಯಾಯಾಂಗದಲ್ಲಿ ಪ್ರಬಲವಾದ ಕೊರತೆಯಾಗಬಹುದೆಂಬುದಾಗಿ ನನ್ನ ಶಂಕೆ. ಇನ್ನು ಮುನ್ಸೀಫ್ ಹುದ್ದೆಗಳ ಸಮೀಕರಣ ಬಗ್ಗೆ ಎಷ್ಟೋ ವಿಷಯಗಳನ್ನು ನನ್ನ ಸ್ನೇಹಿತರಾದ ಶ್ರೀಮಾನ್ ಮಸಿಯಪ್ಪನವರು ಹೇಳಿದರು. ಆದ್ದರಿಂದ ಚಿತ್ರದುರ್ಗ ಜಿಲ್ಲೆಯಲ್ಲಿ ಒಂದು ಜಿಲ್ಲಾ ಕೋರ್ಟನ್ನು ಸ್ಥಾಪನೆಮಾಡಬೇಕು. ಇದರಿಂದ ಸರ್ಕಾರಕ್ಕೆ ಹೆಚ್ಚಿಗೆ ಖರ್ಚು ಆಗುವುದಿಲ್ಲ. ಹಿಂದೆ ಮಲ್ಲಪ್ಪ ಕಮಿಟಿ ಎಂದು ಮಾಡಿದ್ದರು. ಆ ಸಮಿತಿಯವರು ಸಂಸ್ಥಾನಾದ್ಯಂತ ತಿರುಗಿ ತಾಲ್ಲೂಕು ಮಟ್ಟದಲ್ಲಿ ಒಂದು ಕೋರ್ಟನ್ನು ಸ್ಥಾಪನೆ ಮಾಡಬೇಕೆಂದು, ಬಹಳವಾಗಿ ಅಂಕಿಅಂಶಗಳನ್ನು ಸಂಗ್ರಹಣೆ ಮಾಡಿದ್ದಾರೆ. ಆ ವರದಿ ಪ್ರಕಾರ ಕೋರ್ಟಿಗೆ ಒಬ್ಬೊಬ್ಬ ಮುನ್ಸಿಫ್ ಮ್ಯಾಜಿಸ್ಟ್ರೇಟರನ್ನು ನೇಮಕ ಮಾಡಬೇಕೆಂದಿತ್ತು. ಈಗ ಆ ವರದಿಯೇನಾಯಿತೋ ಗೊತ್ತಾಗಲಿಲ್ಲ. ರಾಜ್ಯದಲ್ಲಿ ಜನಗಳಿಗೆ ನ್ಯಾಯ ಸಿಗುವ ರೀತಿಯಲ್ಲಿ ಪ್ರತಿಯೊಂದು ತಾಲ್ಲೂಕು ಹೆಡ್ ಕ್ವಾರ್ಟರಿನಲ್ಲಿಯೂ ಎಲ್ಲಿ ಸಾಧ್ಯವೋ ಅಲ್ಲೊಂದು ಮುನ್ಸೀಫ್-ಮ್ಯಾಜಿಸ್ಟ್ರೇಟ್ ಕೋರ್ಟನ್ನು ಸ್ಥಾಪನೆ ಮಾಡಬೇಕು. ನಮ್ಮ ಜಿಲ್ಲೆಯಲ್ಲಿ ಒಂದು ನ್ಯಾಯವಾದ ಸ್ಥಳೀಯ ಮುನ್ಸೀಫ್ ಮ್ಯಾಜಿಸ್ಟ್ರೇಟ್ ಕೋರ್ಟನ್ನು ಕೂಡಲೇ ಸ್ಥಾಪನೆ ಮಾಡಬೇಕೆಂದು ನಾನು ಸರ್ಕಾರದವರನ್ನು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ.

ಇನ್ನು ಪಾನನಿರೋಧದ ಬಗ್ಗೆ ಹೇಳುವುದಾದರೆ ನನಗೆ ಇದರ ಬಗ್ಗೆ ನೇರವಾದ ಸಂಬಂಧ ಇಲ್ಲದೆ ಹೋದರೂ ಕೆಲವರು ಇದನ್ನು ಬೇಕು ಎಂದು ಹೇಳುವಾಗ ನಾನು ರದ್ದಾಗಲಿ ಎಂದು ಹೇಳು ವವನಲ್ಲ. ಪಾನನಿರೋಧ ಉಳಿಯಬೇಕು. ಇದರಿಂದೇನೋ ತೀರ ಕಡಿಮೆ ದರ್ಜೆಯವರಿಗೆ ಹೆಚ್ಚಿಗೆ ಅನುಕೂಲವಾಗಿದೆ. ಆದರೆ ಇದನ್ನು ಎನ್‌ಫೋರ್ಸ್ ಮಾಡುವುದರಲ್ಲಿ ಸರ್ಕಾರ ವಿಫಲ ವಾಗಿದೆ. ಇದನ್ನು ಸ್ಟ್ರಿಕ್ಟಾಗಿ ಎನ್‌ಫೋರ್ಸ್ ಮಾಡಬೇಕು ; ಇಲ್ಲದಿದ್ದರೆ ಕೈ ಬಿಡಬೇಕು.

ಇಷ್ಟು ಹೇಳಿ, ನನಗೆ ಇದುವರೆಗೆ ಮಾತನಾಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಚ್. ಡಿ. ದೇವೇ ಗೌಡ.—ಮಾನ್ಯ ಅಧ್ಯಕ್ಷರೇ, ಈಗ ಈ ಸಭೆಯ ಮುಂದಿರುವ ಡಿಮ್ಯಾಂಡ್ ನಂಬರ್ 3, 9, 11, ಇವುಗಳ ಬಗ್ಗೆ ನಾನು ಒಂದೆರಡು ವಿಷಯಗಳನ್ನು ಹೇಳಬಯ ಸುತ್ತೇನೆ. ಮಾನ್ಯ ಹಣಕಾಸಿನ ಮಂತ್ರಿಗಳ ಬಜೆಟ್ ಭಾಷಣದಲ್ಲಿ ಎಕ್ಸೈಜ್ ಇಲಾಖೆಯ ಅರಿಯರ್ಸ್ ಬಗ್ಗೆ ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. 44,54,000 ರೂಪಾಯಿಗಳ ಅರಿಯರ್ಸ್ ಇದೆ ಎಂದು ಹೇಳಿದ್ದಾರೆ. ಇದರ ಬಗ್ಗೆ ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳುವುದರಲ್ಲಿ ಏನೇನು ಕಾರ್ಯ ಕ್ರಮಗಳನ್ನು ಹಾಕಿ ಕೊಂಡಿದ್ದಾರೆ ಎಂಬುದನ್ನು ತೋರಿಸಿದ್ದಾರೆ. ಎಕ್ಸೈಜ್ ಕಂಟ್ರಾಕ್ಟರುಗಳು ಬಡವರೇನೂ ಅಲ್ಲ. ಅವರಿಗೆ ಯಾವತರಹ ದಾಕ್ಷಿಣ್ಯವನ್ನು ತೋರಿಸಿದ್ದರಿಂದ ಅವರು ಅಷ್ಟೊಂದು ಬಾಕಿಯನ್ನು ಇಟ್ಟುಕೊಂಡರು ? ನಿಜವಾಗಿಯೂ ಇದು ಖಂಡನೀಯವಾದದ್ದು. ಒಬ್ಬ ಸಾಮಾನ್ಯ ರೈತ ಸರ್ಕಾರದಲ್ಲಿ ಯಾವುದಾದರೂ ಒಂದು ಸಾಲವನ್ನು ತೆಗೆದುಕೊಂಡಿದ್ದರೆ ಅದನ್ನು ಅವನಿಂದ ವಸೂಲು ಮಾಡಲು ಎಲ್ಲಾ ವಿಧವಾದ ಕ್ರಮವನ್ನು ಅವನ ಮೇಲೆ ತೆಗೆದುಕೊಳ್ಳುವ ಸಂದರ್ಭದಲ್ಲಿ ಸರ್ಕಾರಕ್ಕೆ ಬರಬೇಕಾದ ಇಷ್ಟೊಂದು ಭಾರಿ ಮೊತ್ತದ ವಿಷಯದಲ್ಲಿ ಅವರಿಗೆ ಸಹಾನುಭೂತಿಯನ್ನು ತೋರಿಸಬಾರದು. ಅವರ ಮೇಲೆ ಉಗ್ರವಾದ ಕ್ರಮವನ್ನು ಕೈಗೊಳ್ಳುವ ವ್ಯವಸ್ಥೆಯನ್ನು ಮಾಡ ಬೇಕು ಎಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಆ ಮೇಲೆ 5 ಲಕ್ಷ ರೂಪಾಯಿಗಳನ್ನು ರೈಟ್ ಆಫ್ ಮಾಡುವ ಬಗ್ಗೆ ತಿಳಿಸಿದ್ದಾರೆ. ಅದನ್ನು ರೈಟ್ ಆಫ್ ಮಾಡುವುದಕ್ಕೆ ಇದರ ಹಿನ್ನೆಲೆ ಏನು ಎಂದು ನಾನು ಕೇಳಬಯಸುತ್ತೇನೆ. ಅನೇಕ ಜನ ಎಕ್ಸೈಜ್ ಕಂಟ್ರಾಕ್ಟರುಗಳು ಮತ್ತು ಪಬ್ಲಿಕ್ ವರ್ಕ್ಸ್ ಇಲಾಖೆಯ ಕಂಟ್ರಾಕ್ಟರುಗಳು ಇವೊತ್ತಿನ ದಿವಸ ರಾಜ್ಯವನ್ನು ಆಳುತ್ತಿದ್ದಾರೆ. ಎಕ್ಸೈಜ್ ಕಂಟ್ರಾಕ್ಟರುಗಳಿಂದ ಈ ದೇಶದಲ್ಲಿ ಈ ರಾಜ್ಯದ ಆಡಳಿತದ ವೈಖರಿ ಹೇಗೆ ನಡೆಯುತ್ತಿದೆ ಎಂಬುದು ಗೊತ್ತಿದೆ. ರಾಜಕೀಯ ಒತ್ತಡಕ್ಕೆ ಸೋತು 5 ಲಕ್ಷ ರೂಪಾಯಿಗಳನ್ನು ರೈಟ್ ಆಫ್ ಮಾಡುವುದಕ್ಕೆ ಹೊರಟಿರುವ ಸನ್ನಿವೇಶವೇನು ಎನ್ನುವ ದನ್ನು ತಿಳಿಸಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ.

ಪಾನ ನಿರೋಧವನ್ನು ಜಾರಿಗೆ ತರುವುದರಲ್ಲಿ ಅದನ್ನು ಸ್ಟ್ರಿಕ್ಟಾಗಿ ಎನ್ ಫೋರ್ಸ್ ಮಾಡುವ ಅಭಿಪ್ರಾಯ ಸರ್ಕಾರದವರಿಗೆ ಇದ್ದರೆ ಕೆಲವು ಜಮೀನುಗಳಲ್ಲಿ ಈಚಲು ಮರಗಳಿರುವ ಡೇಟ್ ರಿಜರ್ವ್ ಅನ್ನು ಇಟ್ಟುಕೊಂಡು ಅದನ್ನು ವ್ಯವಸಾಯಕ್ಕೂ ಕೊಡದೆ ಆತಂಕವನ್ನುಂಟುಮಾಡುತ್ತಿರುವ ನೀತಿಯೇನು ? ಸರ್ಕಾರದ ಧೋರಣೆ ಏನು ಎನ್ನುವುದನ್ನು ತಿಳಿಸಬೇಕು. ಅದು ಒಳ್ಳೆಯ ಉತ್ತಮವಾದ ಭೂಮಿ, ಅದು ವ್ಯವಸಾಯಕ್ಕಾದರೂ ಉಪಯೋಗವಾಗದೆ ಹಾಗೆಯೇ ಇದೆ. ನಾವು ಇವೊತ್ತಿನ ದಿವಸ ನಮ್ಮ ದೇಶದಲ್ಲಿ ವ್ಯವಸಾಯವನ್ನು ಅಭಿವೃದ್ಧಿ ಮಾಡಬೇಕು. ಆಹಾರದ ಕೊರತೆಯನ್ನು ನೀಗಬೇಕು ಎಂದು ಹೇಳುತ್ತಿರುವಾಗ ಡೇಟ್ ರಿಜರ್ವ್ ಜಮೀನನ್ನು ಏತಕ್ಕೆ ಇಟ್ಟುಕೊಂಡಿದ್ದಾರೆ ಎನ್ನುವುದನ್ನು ತಿಳಿಸಬೇಕು. ಈ ಎಕ್ಸೈಜ್ ಇಲಾಖೆಯ ವಿಷಯದಲ್ಲಿ ಅನೇಕ ಜನ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಆದ್ದರಿಂದ ಎಕ್ಸೈಜ್ ಇಲಾಖೆಯ ಕಡೆ ಮಾನ್ಯ ಮಂತ್ರಿಗಳ ಮನಸ್ಸು ಹರಿಯುವ ಹಾಗೆ ಮಾಡಬೇಕು.

ಇನ್ನು ಖಾದಿ ಮತ್ತು ವಿಲೇಜ್ ಇಂಡಸ್ಟ್ರಿ ವಿಷಯದಲ್ಲಿ ಹೇಳುವುದಾದರೆ, ಈ ಖಾದಿ ಮತ್ತು ವಿಲೇಜ್ ಇಂಡಸ್ಟ್ರಿ ಯೋಜನೆಯಲ್ಲಿ ನೀರಾ ತೆಗೆದು ಮಾರಾಟ ಮಾಡುವುದಕ್ಕೆ ಸರ್ಕಾರದವರು ಲೈಸೆನ್ಸ್ ಕೊಟ್ಟಿದ್ದಾರೆ. ಅದನ್ನು ಯಾರು ಸೂಪರ್‌ವೈಜ್ ಮಾಡುತ್ತಾರೆ, ಅದಕ್ಕೆ ಸಂಬಂಧಪಟ್ಟ ಸಿಬ್ಬಂದಿ ವರ್ಗದವರು ಎಷ್ಟರ ಮಟ್ಟಿಗೆ ಶ್ರದ್ಧೆಯನ್ನು ವಹಿಸಿ ಕೆಲಸ ಮಾಡುತ್ತಾರೆ ಎನ್ನುವ ಕಡೆ ಮಾನ್ಯ ಮಂತ್ರಿಗಳ ಗಮನ ಹರಿಯಬೇಕು.

ಪ್ರೊಹಿಬಿಷನ್ ಬಗ್ಗೆ ಹೇಳುವುದಾದರೆ ಹಾಸನ ಡಿಸ್ಟ್ರಿಕ್ಟಿನಲ್ಲಿ ಪ್ರೊಹಿಬಿಷನ್ ವಿಚಾರದಲ್ಲಿ ಅನೇಕ ಜನ ಮಾನ್ಯ ಸದಸ್ಯರು ಟೀಕಿಸಿದ್ದಾರೆ. ಸಬ ಇನ್‌ಸ್ಪೆಕ್ಟರು ಮತ್ತು ಮಾನ್ಯ ಗೃಹಸಚಿವರು ಹಾಸನ ಡಿಸ್ಟ್ರಿಕ್ಟಿನಲ್ಲಿರತಕ್ಕ ಕೆಲವು ಮನೆಗಳಿಗೆ ನೇರವಾಗಿ ಹೋಗಿ ತನಿಖೆ ಮಾಡಿದ್ದಾರೆ. ಆದರೆ ಆ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳ ಕೈಗೆ ಸಿಕ್ಕಿದಂತಹ ತಪ್ಪಿತಸ್ಥರ ಮೇಲೆ ಏನ್ ಕಾರ್ಯಕ್ರಮ ತಗೆದುಕೊಂಡರು ? ಇವೊತ್ತು ಅಧಿಕಾರಿಗಳ ಒಂದು ಸುಳ್ಳುವರದಿಯ ಮೇಲೆ ಈ ಸಭೆಯಲ್ಲಿ ಉತ್ತರವನ್ನು ಕೊಡತಕ್ಕ ನಿದರ್ಶನಗಳನ್ನು ನಾನು ನೋಡಿದ್ದೇನೆ. ಟೀಕೆ ಮಾಡುವುದಕ್ಕೋಸ್ಕರ ನಾನು ಈ ವಿಷಯನ್ನು ಹೇಳುತ್ತಿಲ್ಲ. ಈ ಮಾನ್ಯ ಸಭೆಯಲ್ಲಿ ಸುಳ್ಳು ಅಂಕಿ ಅಂಶಗಳನ್ನು ಒದಗಿಸುವುದರಿಂದ ಈ ಸಭೆಯ ಘನತೆ ಮತ್ತು ಗೌರವಗಳಿಗೆ ಧಕ್ಕೆಯನ್ನು ತರುತ್ತಾರೆ. ನಾನು ಮೊನ್ನೆ ಒಂದು ಇಂಟರ್ ಪೆಲೇಷನ್ ಕಳುಹಿಸಿದ್ದೆ. ಅದಕ್ಕೆ ಉತ್ತರವಾಗಿ 6 ಸಾವಿರ ಮಣ ನೀರಾ ಬೆಲ್ಲವನ್ನು ತೆಗೆದಿದ್ದಾರೆಂದು ಹೇಳಿದ್ದಾರೆ. ಇದು ಸರ್ಕಾರಕ್ಕೆ ಗೌರವವನ್ನು ತರತಕ್ಕದ್ದಲ್ಲ. ಸುಳ್ಳು ಅಂಕಿ ಅಂಶಗಳನ್ನು ಒದಗಿಸತಕ್ಕದ್ದು ಸರಿಯಾದ ಮಾರ್ಗವಲ್ಲ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇವೊತ್ತು ಈ ಪಾನ ನಿರೋಧದಿಂದ ಒಂದು ಕಡೆ ಬಡವರಿಗೆ ಅನುಕೂಲವಾಗಿದೆ. ಆದರೆ ಮಧ್ಯಮ ವರ್ಗದ ಜನ ಕುಡಿಯುವುದಕ್ಕೆ ಷುರು ಮಾಡಿದ್ದಾರೆ. ಶ್ರೀ ತೇಕ್‌ಚಂದ್ ಅವರ ವರದಿ ಬಂದಮೇಲೆ ಅದರ ಆಧಾರದ ಮೇಲೆ ಈ ಪಾನ ನಿರೋಧ ನೀತಿಯ ವಿಚಾರದಲ್ಲಿ ಸರ್ಕಾರದ ನೀತಿಯನ್ನು ಬದಲಾವಣೆ ಮಾಡತಕ್ಕ ಒಂದು ಅಭಿಪ್ರಾಯ ಇದೆ. ಅದ್ದರಿಂದ ನಾವು ಅಲ್ಲಿಯವರೆಗೂ ಕಾದು ನೋಡಬೇಕಾಗಿದೆ. ಈ ಇಲಾಖೆಯ ಆಡಳಿತದಲ್ಲಿರತಕ್ಕ ಲೋಪದೋಷಗಳನ್ನು ತಿದ್ದುಪಾಟು ಮಾಡುವುದಕ್ಕೆ ಸೂಕ್ತ ಕ್ರಮವನ್ನು ಕೈಗೊಳ್ಳಬೇಕು ಎಂದು ನಾನು ಸಲಹೆ ಮಾಡುತ್ತೇನೆ. ಇಲ್ಲದೇ ಹೋದರೆ ಇದು ಯಾರಿಗೂ ಗೌರವ ತರತಕ್ಕದ್ದಲ್ಲ.

ಇನ್ನು ನಾನು ಸ್ಟೇಟ್ ಲೆಜಿಸ್ಲೇಚರ್ ವಿಷಯದಲ್ಲಿ ಒಂದೆರಡು ಮಾತುಗಳನ್ನು ಹೇಳ ಬಯಸುತ್ತೇನೆ, ಅದರ ಆಡಳಿತದ ವಿಷಯದಲ್ಲಿ ನಾನು ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ. ಶ್ರೀಮಾನ್ ವಿ. ಎಸ್. ಪಾಟೀಲ್ ಅವರು ಲೆಜಿಸ್ಲೇಚರ್ ಸಕ್ರೆಟೇರಿಯಟ್ ಅನ್ನು ಸರ್ಕಾರದ ಆಡಳಿತದಿಂದ ಬೇರ್ಪಡಿಸಬೇಕೆಂದು ಹೇಳಿದರು ಅದನ್ನು ನಾನು ಸಮರ್ಥಿಸುತ್ತೇನೆ. ಲೆಜಿಸ್ಲೇಚರ್ ಸೆಕ್ರೆಟೇರಿಯಟ್ ನಿಂದ ಸರ್ಕಾರಕ್ಕೆ ಏನಾದರೂ ಒಂದು ಕಾಗದಪತ್ರ ಹೋದರೆ ಅದಕ್ಕೆ ಸರ್ಕಾರದವರಿಂದ ಬೇಗ ಉತ್ತರ ಬರುತ್ತಿಲ್ಲ. ಆ ವಿಷಯದಲ್ಲಿ ಸರ್ಕಾರದ ಧೋರಣೆ ಸರಿಯಾಗಿಲ್ಲ. ಸರ್ಕಾರಕ್ಕೆ ಒಂದು ಪ್ರಶ್ನೆಯನ್ನು ಕಳುಹಿಸಿದರೆ ಅದಕ್ಕೆ 15 ದಿವಸಗಳೊಳಗಾಗಿ ಉತ್ತರವನ್ನು ಕೊಡಬೇಕೆಂಬ ನಿಯಮವಿದ್ದರೂ ಕೂಡ ಸರ್ಕಾರದವರು ಆ ಬಗ್ಗೆ ಸರಿಯಾಗಿ ಗಮನವನ್ನು ಕೊಡುತ್ತಿಲ್ಲ. ಈ ವಿಷಯದಲ್ಲಿ ಸರ್ಕಾರದ ಧೋರಣೆ ಸರಿಯಾಗಿಲ್ಲ. ಈ ಲೆಜಿಸ್ಲೇಚರ್ ಸೆಕ್ರೆಟೇರಿಯಟ್ ಬಗ್ಗೆ ಸರ್ಕಾರದ ನೀತಿ ಏನಿದೆ ಅದು ಸರಿಯಾದ್ದಲ್ಲ. ಇದು ಖಂಡನೀಯ ಎಂದು ನಾನು ಸರ್ಕಾರಕ್ಕೆ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಈ ಮಾನ್ಯ ಸಭೆ ಏನು ಕಾರ್ಯ ಕಲಾಪಗಳನ್ನು ಟ್ರಾನ್ಸಾಕ್ಟ್ ಮಾಡುತ್ತದೆಯೋ ಆ ವಿಷಯದಲ್ಲಿ ಸರ್ಕಾರದವರು ಹೆಚ್ಚಿನ ಗಮನವನ್ನು ಕೊಡಬೇಕೆಂದು ನಾನು ಹೇಳುತ್ತೇನೆ ಮತ್ತು ಈ ಲೆಜಿಸ್ಲೇಚರ್ ಸೆಕ್ರೆಟೇರಿಯಟ್‌ಅನ್ನು ಸರ್ಕಾರದ ಹಿಡಿತದಿಂದ ಬೇರ್ಪಡಿಸಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

(ಶ್ರೀ ಎಚ್. ಡಿ. ದೇವೇಗೌಡ)

ಇನ್ನು ನ್ಯಾಯಾಂಗ ಇಲಾಖೆಯ ವಿಷಯದಲ್ಲಿ ಒಂದೆರಡು ಮಾತುಗಳನ್ನು ನಾನು ಹೇಳ ಬಯಸುತ್ತೇನೆ. ಪ್ರಜಾಪ್ರಭುತ್ವದಲ್ಲಿ ಇದು ಕಾಂಗ್ರೆಸ್ ಪಕ್ಷ, ಮತ್ತೊಂದು ಪಕ್ಷ ಎಂದು ನಾನು ವಾದಮಾಡುವುದಕ್ಕೆ ಹೋಗುವುದಿಲ್ಲ. ಉಚ್ಚನ್ಯಾಯಾಸ್ಥಾನದ ವಿಷಯದಲ್ಲಿ ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಭಾಷಣ ಮಾಡುತ್ತಾ ಕೆಲವು ವಿಚಾರಗಳನ್ನು ಹೇಳಿದರು. ಮತ್ತು ಇನ್ನೂ ಕೆಲವು ನನ್ನ ಸ್ನೇಹಿತರು ಈ ಕೋರ್ಟುಗಳ ವಿಷಯದಲ್ಲಿ ಅನೇಕ ತರಹ ರಾಜಕೀಯ ವಿಚಾರಗಳನ್ನು ಹೇಳಿದ್ದಾರೆ. ಆ ವಿಷಯವನ್ನು ನಾನು ಮತ್ತೆ ಹೇಳುವುದಕ್ಕೆ ಹೋಗುವುದಿಲ್ಲ. ಹೈಕೋರ್ಟಿನಲ್ಲಿ ಕೆಲವರು ತಮ್ಮ ಪ್ರಭಾವವನ್ನು ಬೀರಿ ಕೇಸುಗಳನ್ನು ತಮ್ಮಂತೆ ಮಾಡಿಕೊಳ್ಳುತ್ತಾರೆ. ಇದು ಸರಿಯಲ್ಲ. ನ್ಯಾಯಾಂಗದ ಒಂದು ಮಟ್ಟವನ್ನು ಕುಗ್ಗಿಸತಕ್ಕದ್ದು ಸರಿಯಲ್ಲ. ಆ ವಿಷಯದಲ್ಲಿ ಸರ್ಕಾರದ ಗಮನ ಇರಬೇಕು ಎಂದು ಹೇಳಿ, ಇಷ್ಟು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟದ್ದಕ್ಕೆ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೆ. ಲಕ್ಕಪ್ಪ.—ಮಾನ್ಯ ಅಧ್ಯಕ್ಷರೇ ಪಾನನಿರೋಧ ನೀತಿಯ ಬಗ್ಗೆ ಅನೇಕ ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ಈ ಸಭೆಯಲ್ಲಿ ಈಗಾಗಲೇ ವ್ಯಕ್ತಪಡಿಸಿದ್ದಾರೆ. ಹಿಂದೆ ಒಂದು ಸಾರಿ ಈ ಸಭೆಯಲ್ಲಿ ಮಾತನಾಡುವಾಗ ನಾನೂ ಕೂಡ ಈ ಪಾನನಿರೋಧದ ನೀತಿಯ ವಿಷಯದಲ್ಲಿ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದೇನೆ. ಈ ಪಾನನಿರೋಧದ ನೀತಿಯ ಬಗ್ಗೆ ಕಾಂಗ್ರೆಸ್ ಸರ್ಕಾರದವರಿಗೆ ದ್ವಿಮುಖ ನೀತಿ ಇರತಕ್ಕದ್ದು ಈ ದೇಶದಲ್ಲಿ ಅನೇಕ ದುಷ್ಕೃತ್ಯಗಳಿಗೆ, ದರೋಡೆಗೆ, ಖೂನಿಗೆ ಅವಕಾಶವಾಗಿದೆ. ಮತ್ತು ಈ ಪಾನನಿರೋಧ ನೀತಿಯಿಂದ ಜನಗಳ ಆರೋಗ್ಯ ಕೂಡ ಕೆಡತಕ್ಕ ಒಂದು ಪರಿಸ್ಥಿತಿ ಬಂದಿದೆ.

5—P.M.

ಈಗಾಗಲೇ ನಮ್ಮ ಸ್ನೇಹಿತರು ಹೇಳಿದ ಹಾಗೆ ಮಂತ್ರಿಗಳಿಗೂ ಕೂಡ ಪಾನನಿರೋಧ ನೀತಿ ವಿಫಲವಾಗಿದೆ ಎನ್ನುವ ವಿಚಾರ ಗೊತ್ತಿದ್ದರೂ ಅವರ ಪಕ್ಷದ ಸಿಸ್ತಿಗೆ ಕಟ್ಟುಬಿದ್ದು ಅದನ್ನು ಒಪ್ಪಿ ಕೊಳ್ಳದೆ ಯಶಸ್ವಿಯಾಗಿದೆ ಎಂದು ತೋರಿಸಿಕೊಳ್ಳಬೇಕಾಗಿದೆ. ಪಾನನಿರೋಧ ನೀತಿಯಲ್ಲಿಯೂ ಕೂಡ ಇಡೀ ದೇಶದಲ್ಲಿ ಒಂದು ಅಭಿಪ್ರಾಯವಿಲ್ಲ. ಮಹಾರಾಷ್ಟ್ರದ ಮುಖ್ಯಮಂತ್ರಿಗಳು ಹೇಳಿದರು— ಪಾನನಿರೋಧ ನೀತಿಯನ್ನು ನಾವು ಸಡಿಲ ಮಾಡುತ್ತೇವೆಂದು. ನಮ್ಮ ಮುಖ್ಯ ಮಂತ್ರಿಗಳು ಹೇಳಿದರು ಈ ಬಗ್ಗೆ ಪರಿಶೀಲನೆ ನಡೆಸಿ ಒಂದು ತೀರ್ಮಾನಕ್ಕೆ ಬರುತ್ತೇವೆಂದು. ಪಾನನಿರೋಧವನ್ನು ನೀವು ರದ್ದುಗೊಳಿಸುವುದೂ ಇಲ್ಲ, ಅದನ್ನು ಸರಿಯಾಗಿ ಸುಭದ್ರತೆಯಿಂದ ದೇಶದಲ್ಲೆಲ್ಲ ಜಾರಿಗೆ ತರುವುದೂ ಇಲ್ಲ. ಹೀಗೆ ಪಾನನಿರೋಧವನ್ನು ಜಾರಿಗೆ ತರುವುದರಲ್ಲಿಯೂ ವಿಫಲರಾಗಿದ್ದೀರಿ. ಈಗ ದೇಶದಲ್ಲಿ ಪಾನನಿರೋಧವನ್ನು ತೆಗೆಯಬೇಕೆನ್ನುವ ಅಭಿಪ್ರಾಯವಿದೆ. ಪಾನನಿರೋಧವು ಜಾರಿಗೆ ಬರುವುದಕ್ಕೆ ಮುಂಚೆ ಕುಡಿಯುತಕ್ಕವರ ಸಂಖ್ಯೆ ಕಡಮೆ ಇತ್ತು. ಈಗ ಬಹಳ ಜಾಸ್ತಿಯಾಗಿದೆ. ಬಡವರಾದವರು ಕೆಲವರಿಗೆ ಪಾನನಿರೋಧದಿಂದ ಅನುಕೂಲವಾಗಿರುವುದನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಪಾನನಿರೋಧವನ್ನು ಜಾರಿಗೆ ತರತಕ್ಕ ಅಧಿಕಾರಿಗಳು, ಪೋಲಿಸಿನವರು, ಈ ಸಂಬಂಧದಲ್ಲಿ ತೆಗೆದುಕೊಳ್ಳತಕ್ಕ ಲಂಚ ಜಾಸ್ತಿಯಾಗಿದೆ, ಭ್ರಷ್ಟಾಚಾರ ಜಾಸ್ತಿಯಾಗಿದೆ. ಪಾನನಿರೋಧವನ್ನು ದೇಶದಲ್ಲಿ ಸರಿಯಾಗಿ ಪಾಲಿಸಿಕೊಂಡು ಬರಬೇಕಾದ ಪೋಲೀಸಿನವರು ಕಳ್ಳಭಟ್ಟಿಸಾರಾಯಿ ಮಾಡುವವರನ್ನು ಹಿಡಿಯಲು ಅಮಲಿನಲ್ಲಿ ಹೋಗುತ್ತಾರೆ. ಇವರು ಯಾವಾಗಲೂ ಅಮಲಿನಲ್ಲಿಯೇ ಇದ್ದು ಹಿಡಿಯುತ್ತಾರೆ; ಅದೇ ಅಮಲಿನಲ್ಲಿ ಅವರನ್ನು ವಿಚಾರಣೆಗೆ ಗುರಿಪಡಿಸುತ್ತಾರೆ, ಅದೇ ಅಮಲಿನಲ್ಲಿ ಅವರಿಗೆ ಶಿಕ್ಷೆ ವಿಧಿಸುವಂಥ ನ್ಯಾಯಾಧೀಶರನ್ನು ನಾವು ನೋಡುತ್ತೇವೆ. ಇದು ಎಂಥ ನೀತಿ ಎನ್ನುವುದನ್ನು ತಾವು ಆತ್ಮಮುಟ್ಟಿ ನೋಡಿಕೊಂಡು, ವಿವೇಚಿಸಿ, ಈ ನೀತಿಯನ್ನು ತೆಗೆದು ಹಾಕಬೇಕೆಂದು ನಾನು ಬಹಳ ಒತ್ತಾಯವಾಗಿ ಈ ಸಭೆಯಲ್ಲಿ ತಿಳಿಸುತ್ತೇನೆ ಸ್ವಾಮಿ.

ನ್ಯಾಯಾಂಗ ಇಲಾಖೆ ಪವಿತ್ರವಾದ ದೇಗುಲವಾಗಬೇಕು ಎನ್ನುವ ಅಭಿಪ್ರಾಯವಿದೆ. ಕೋರ್ಟು ಗಳ ಬಗ್ಗೆ ನಮ್ಮ ತುಮಕೂರು ಜಿಲ್ಲೆಯವರೇ ಆದಂಥ ಸಚಿವರಿಗೆ ಹೋದಸಾರಿ ಕೂಡ ಹೇಳಿದ್ದೆ, ಕಟ್ಟಡಗಳ ಬಗ್ಗೆ ಏನಾದರೂ ಒಂದು ಕ್ರಮವನ್ನು ತೆಗೆದುಕೊಳ್ಳಬೇಕು ಎಂದು ನ್ಯಾಯಾಧೀಶರು ಕುಳಿತುಕೊಳ್ಳುವ ಜಾಗದಲ್ಲಿ ಹೆಂಚುಗಳೇ ಇಲ್ಲ, ಗೋಡೆಗಳೆಲ್ಲ ಬಿದ್ದು ಹೋಗಿ ಹರಕಲು ಮುರಕಲಾಗಿರತಕ್ಕ ಕಟ್ಟಡಗಳು ಹೀಗೆ ಇದೆ. ಇಂಥ ಸನ್ನಿವೇಶದಲ್ಲಿ ನ್ಯಾಯ ಪರಿಪಾಲನೆಯನ್ನು ಯಾವ ಮಟ್ಟದಲ್ಲಿ ಮಾಡಬೇಕು ಎನ್ನುವುದನ್ನು ಯೋಚನೆ ಮಾಡಬೇಕು, ಇಂಥ ಪವಿತ್ರವಾದ ಸ್ಥಳಗಳು ಭದ್ರವಾಗಿಲ್ಲದೆ ಹೋದರೆ ಹೇಗೆ ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ತುಮಕೂರು ಜಿಲ್ಲೆಯಲ್ಲಿ ಕೋರ್ಟ್ ಕಟ್ಟಡಗಳ ಅಭಾವವಿದೆ, ಹಾಗೂ ಬಹಳ ದೂರದಿಂದ ವರ್ಗವಾಗಿ ಬರತಕ್ಕ ನ್ಯಾಯಾಧೀಶರಿಗೆ ಇರಲು ಅನುಕೂಲವಾಗುವಂತೆ ಕಟ್ಟಡಗಳನ್ನು ಒದಗಿಸಬೇಕೆಂದು ಹೇಳುತ್ತೇನೆ.

ದೇಶದಲ್ಲಿ ಸರಿಯಾಗಿ ನ್ಯಾಯವಿಮರ್ಶೆ ಮಾಡಬೇಕಾದರೆ ವಕೀಲರ ಸಂಘಗಳು ಚೆನ್ನಾಗಿ ಬೆಳೆಯಬೇಕು. ಆ ಸಂಘಗಳಿಗೆ ಕೊಡತಕ್ಕ ಧನ ಸಹಾಯವನ್ನು ಬಹಳ ಮಟ್ಟಿಗೆ ಕಡಮೆ ಮಾಡಿದ್ದಾರೆ. ನಮ್ಮ ಮಾನ್ಯ ಅಧ್ಯಕ್ಷರು ಒಂದುಸಾರಿ ತುಮಕೂರಿಗೆ ಬಂದಿದ್ದಾಗ, ಅವರಿಗೆ ಒಂದು ಬಿನ್ನವತ್ತಳೆಯನ್ನರ್ಪಿಸಿ ಅವರಿಗೂ ತಿಳಿಸಿದೆವು, ಮಂತ್ರಿಗಳು ನಮ್ಮ ಜಿಲ್ಲೆಯವರೇ. ಅವರಿಗೂ ಹೇಳಿದ್ದೇವೆ.

ಸ್ವಾಮಿ, ನನ್ನ ಆಕ್ಷೇಪಣೆ ನೇರವಾಗಿ ನ್ಯಾಯಾಂಗ ಮಂತ್ರಿಗಳ ಮೇಲೆ ಇರತಕ್ಕದ್ದು ಒಂದೇ ಒಂದು. ಅದು Government pleaders ಮತ್ತು public prosecutors ನೇಮಕದ ವಿಚಾರ. ಡೆಪ್ಯುಟಿ ಕಮಿಷನರು ಈ ಸ್ಥಾನಗಳಿಗೆ ಹೆಸರುಗಳನ್ನು ಸಿಫಾರಸುಮಾಡುತ್ತಾರೆಂದು ಹೇಳುತ್ತಾರೆ, ಮಾನ್ಯ ಮಂತ್ರಿಗಳಿಗೆ ನಾನು ಒಂದು ನೇರವಾದ ಪ್ರಶ್ನೆ ಹಾಕುತ್ತೇನೆ, ಈ ಡೆಪ್ಯುಟಿ ಕಮಿಷನರುಗಳು ಯಾವ ವಕೀಲರುಗಳು, ಯಾವ ರೀತಿ, ಯಾವ ತರಹದಲ್ಲಿ ವಿಚಾರವನ್ನು ತಿಳಿದಿದ್ದಾರೆ, ಇವರು ಸರಿಯಾದ ರೀತಿ ನೀತಿಯಲ್ಲಿ ಕೆಲಸಮಾಡುತ್ತಾರೆಯೋ, ಇವರ ಕೆಲಸದ ದಕ್ಷತೆ ಏನು ಎಂಬುದನ್ನೆಲ್ಲ ವಿಚಾರ ಮಾಡುವುದಕ್ಕೆ ಅವರಿಗೆ ಎಲ್ಲಿ ಅವಕಾಶವಿದೆ ? ಇಂಥ ಡೆಪ್ಯುಟಿ ಕಮಿಷನರುಗಳು ನೇರವಾಗಿ ಸರ್ಕಾರದ ಹಂಗಿನಲ್ಲಿ ಸೇರಿಕೊಂಡು ಯಾರ ಯಾರ ಹೆಸರನ್ನು ಕಳಿಸಿ ಕೊಡಿ ಎಂದು ಹೇಳುತ್ತಾರೆಯೋ ಅಂಥವರ ಹೆಸರನ್ನು ಕಳಿಸತಕ್ಕ ಅಧಿಕಾರಸೂತ್ರಧಾರಿಗಳಾಗಿರುವುದನ್ನು ನಾವು ಈ ದಿವಸ ನೋಡಬಹುದು.

ಆದುದರಿಂದ ಯಾವ ಪಬ್ಲಿಕ್ ಪ್ರಾಸೆಕ್ಯೂಟರ್ ಅಥವಾ ಗವರ್ನಮೆಂಟ್ ಪ್ಲೀಡರ್ ನೇಮಕ ಮಾಡುವಾಗ ದಕ್ಷತೆಯನ್ನು ಗಮನಿಸಿ ಬಾರ್ ಅಸೋಸಿಯೇಷನ್ನಿನ ಅಭಿಪ್ರಾಯವನ್ನು ಪಡೆಯಬೇಕು. ಅಲ್ಲದೆ ಡಿಸ್ಟ್ರಿಕ್ಟ್ ಜಡ್ಜ್ ಮತ್ತು ಸೆಷನ್ಸ್ ಜಡ್ಜರ ಅಭಿಪ್ರಾಯದಂತೆ ಒಪ್ಪಿಕೊಳ್ಳುವುದಾದರೆ ಒಳ್ಳೆಯ ಜನರನ್ನು ನೇಮಕ ಮಾಡುವುದಕ್ಕೆ ಸರಕಾರಕ್ಕೆ ಅನುಕೂಲವಾಗುತ್ತದೆ. ಈಗ ಮಾಡಿರುವಂತಹ ನೇಮಕವನ್ನು ಮುಂದಾದರೂ ನ್ಯಾಯಾಂಗ ಮಂತ್ರಿಗಳು ಮಾಡಬಾರದೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಕೋರ್ಟುಗಳಲ್ಲಿ ರಸೀತಿ ಪುಸ್ತಕ ಮತ್ತು ಇತರ ಕೆಲವು ಪುಸ್ತಕಗಳು ಸರಕಾರದಿಂದ ಸರಬರಾಯಿ ಆಗಬೇಕಾಗಿದೆ. ಇದು ಬಹಳ ವಿಳಂಬವಾಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಇದಕ್ಕೆ ಗಮನ ಕೊಟ್ಟು ಸರಿಪಡಿಸಬೇಕು. ಹಳ್ಳಿಗಳ ಜನರಿಗೆ ನ್ಯಾಯ ಬೇಗ ದೊರಕಬೇಕು. ಡಿಲೇ ಡಿಫೀಟ್ಸ್ ಜಸ್ಟಿಸ್, ಎಂದರೆ, ನ್ಯಾಯ ದೊರಕುವುದು ನಿಧಾನವಾದಲ್ಲಿ ನ್ಯಾಯಕ್ಕೆ ಧಕ್ಕೆ ಬರುತ್ತದೆ ಎನ್ನುತ್ತಾರೆ. ನ್ಯಾಯ ದೊರಕುವುದು ನಿಧಾನವಾಗಬಾರದು ಎಂದು ಈ ಸಮಯದಲ್ಲಿ ನ್ಯಾಯ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ನ್ಯಾಯಾಧೀಶರಿಗೆ ವಾಸಕ್ಕೆ ಮನೆಗಳಿಲ್ಲ. ಲೋಕೋಪಯೋಗಿ ಇಲಾಖೆ ಕೋಟ್ಯಾಂತರ ರೂಪಾಯಿ ಖರ್ಚುಮಾಡುತ್ತಿದೆ. ಒಬ್ಬ ಅಸಿಸ್ಟೆಂಟ್ ಇಂಜಿನಿಯರು ಯಾವ ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರಿಗೆ ಹೋದರೂ ಅತನಿಗೆ ವಾಸಮಾಡುವುದಕ್ಕೆ ಮನೆ ಇರುತ್ತದೆ. ಆದರೆ ಜಿಲ್ಲಾ ನ್ಯಾಯಾಧೀಶರಿಗೆ ಗೃಹವಸತಿಯ ಬಗ್ಗೆ ಸರಕಾರದವರು ಗಮನ ಕೊಡದೇಯಿರುವುದು ವಿಷಾದಕರವಾದ ಸಂಗತಿ. ಎಷ್ಟೋ ಸಾರಿ ನೂರಾರು ಮೈಲಿಗಳ ದೂರ ನ್ಯಾಯಾಧೀಶರು ವರ್ಗವಾದರೆ ಮುಸಾಫರ್‌ಖಾನೆಗಳಲ್ಲಿ ವಾಸವಿದ್ದು ತೊಂದರೆ ಪಟ್ಟುಕೊಂಡು ಕೋರ್ಟುಗಳಿಗೆ ಬರುವುದು ಮತ್ತು ಕೆಲವು ಸಂದರ್ಭಗಳಲ್ಲಿ ಕೋರ್ಟುಗಳಿಗೆ ರಜ ಹಾಕುವುದು ಇಂಥಾದ್ದನ್ನು ನೋಡುತ್ತಿದ್ದೇನೆ. ಅವರಿಗೆ ಮನೆಯಿಲ್ಲದೆ ಬಹಳ ತೊಂದರೆಯಾಗಿದೆ. ನ್ಯಾಯಾಂಗ ಇಲಾಖೆ ಶ್ರೇಷ್ಠವಾದ ಇಲಾಖೆ, ಅಲ್ಲಿ ಶೀಘ್ರವಾಗಿ ನ್ಯಾಯ ದೊರಕುವಂತೆ, ಅಲ್ಲಿರುವ ಕೆಲವು ಅನಾನುಕೂಲಗಳನ್ನು ಪರಿಹಾರ ಮಾಡಬೇಕೆಂದು ಹೇಳಿ ನನಗೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದನೆಗಳನ್ನರ್ಪಿಸುತ್ತೇನೆ.

†ಶ್ರೀ ಅಂದಾನಯ್ಯ (ಕುಣಿಗಲ್).—ಮಾನ್ಯ ಸಭಾಪತಿಗಳೆ ; ಈಗಾಗಲೇ ಅನೇಕ ಸ್ನೇಹಿತರು ಈ ಅಬ್ಕಾರಿ ಇಲಾಖೆಯ ವಿಚಾರದಲ್ಲಿ ಮಾತನಾಡಿದ್ದಾರೆ. ದೇಶಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಬರುತ್ತಿದ್ದ ತೆರಿಗೆ ಈ ಇಲಾಖೆಯಲ್ಲಿ ಕಡಮೆಯಾಗಿದೆ. ಇದಕ್ಕೆ ಕಾರಣ ಪಾನನಿರೋಧವನ್ನು ಜಾರಿಗೆ ತಂದದ್ದು ಎಂಬ ಅಭಿಪ್ರಾಯವನ್ನು ಎಲ್ಲರೂ ವ್ಯಕ್ತಪಡಿಸಿದ್ದಾರೆ. ಬಹುಶಃ ಮಹಾತ್ಮ ಗಾಂಧಿಯವರ ಅಭಿಪ್ರಾಯವನ್ನು ಮನ್ನಿಸುವುದಕ್ಕೆ, ಅವರ ಇಷ್ಟವನ್ನು ಈಡೇರಿಸುವದಕ್ಕೆ ಪಾನನಿರೋಧವನ್ನು ಜಾರಿಗೆ, ತಂದರು. ತಂದಮೇಲೆ ಇದು ಯಶಸ್ವಿಯಾಗಿ ನಡೆಯುತ್ತಿದೆಯೆ, ಇದರಿಂದ ಒಳ್ಳೆಯ ಫಲ ದೊರಕಿದೆಯೆ ಎಂದು ನೋಡಿದರೆ ನಿಜವಾಗಿಯೂ ದೊರಕಿಲ್ಲ. ದೇಶಾದ್ಯಂತ ಪಾನ ನಿರೋಧ ಯಶಸ್ವಿಯಾಗಿಲ್ಲ. ಆದಕಾರಣ ಸರಕಾರ ಇದನ್ನು ಪುನಃ ಆಲೋಚನೆ ಮಾಡಿ, ನಮ್ಮ ಪಕ್ಕದ ರಾಜ್ಯ

(ಶ್ರೀ ಅಂದಾನಯ್ಯ)

ಗಳಾದ ಆಂಧ್ರ ಮತ್ತು ಮಹಾರಾಷ್ಟ್ರ ರಾಜ್ಯಗಳನ್ನು ನೋಡಿ, ಈ ಬಗ್ಗೆ ನೀತಿ ನಿಯಮಗಳನ್ನು ಬದಲಾವಣೆ ಮಾಡುವುದು ಅಗತ್ಯ. ಅವರು ಇದರ ಸಂಬಂಧವಾದ ನಿಯಮಗಳನ್ನು ಸಡಿಲಗೊಳಿಸ ಬೇಕೆಂದು ಯೋಚನೆ ಮಾಡುತ್ತಿದ್ದಾರೆ. ಅದೇ ರೀತಿ ನಮ್ಮ ರಾಜ್ಯದಲ್ಲಿಯೂ ಪಾನನಿರೋಧದ ಬಗ್ಗೆ ಯೋಚನೆ ಮಾಡಿ ಬದಲಾವಣೆ ಮಾಡಬೇಕೆಂದು ನಿವೇದಿಸುತ್ತೇನೆ. ಇದರಿಂದ ಈ ಹೊತ್ತು ದೇಶಕ್ಕೆ ಅಪಾರವಾದ ಸುಮಾರು 15 ಕೋಟಿ ರೂಪಾಯಿನಷ್ಟು ತೆರಿಗೆ ಬರುತ್ತಿತ್ತು. ಇಷ್ಟು ದೊಡ್ಡ ಪ್ರಮಾಣದ ಆದಾಯವನ್ನು ಕಳೆದುಕೊಳ್ಳಬಾರದು. ಯಾವುದೇ ಒಂದು ಕಾನೂನನ್ನು ಜಾರಿಗೆ ತಂದಮೇಲೆ ಅದು ಯಶಸ್ವಿಯಾಗಿ ನಡೆಯದೇ ಹೋದರೆ, ಅದನ್ನು ಪುನಃ ಪರಿಶೀಲನೆ ಮಾಡಿ ಬದಲಾವಣೆ ಮಾಡತಕ್ಕದ್ದು ಅಗತ್ಯ; ಹೀಗೆ ಮಾಡಬೇಕೆಂದು ಸಂಬಂಧಪಟ್ಟ ಮಂತ್ರಿಗಳಲ್ಲಿ ಅರಿಕೆ ಮಾಡುತ್ತೇನೆ.

ಎರಡನೆಯದಾಗಿ, ನ್ಯಾಯಾಂಗದ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳಬಯಸು ತ್ತೇನೆ. ನ್ಯಾಯಾಲಯಗಳಲ್ಲಿ ಶೀಘ್ರವಾಗಿ ನ್ಯಾಯ ದೊರಕಬೇಕಾದರೆ ನ್ಯಾಯಾಧೀಶರಿಗೆ ಹೆಚ್ಚಿನ ಸಂಬಳ ಕೊಡಬೇಕು. ಕೆಲವು ನ್ಯಾಯಾಧೀಶರು ತೀರ್ಪನ್ನು ಮಾರುತ್ತಿದ್ದಾರೆ. ಇದಕ್ಕೆ ಕಾರಣ ಈ ಹೊತ್ತು ಅವರಿಗೆ ಕೊಡತಕ್ಕ ಸಂಬಳ ಬಹಳ ಕಡಮೆ. ಯಾವಾಗ ಹಣದ ಕೊರತೆ ಹೆಚ್ಚಾಗು ತ್ತದೆ, ಆಗ ನ್ಯಾಯವನ್ನು ವಿಮರ್ಶಿಸಿ ಸರಿಯಾಗಿ ತೀರ್ಪನ್ನು ಕೊಡುವುದಕ್ಕೆ ಸಾಧ್ಯವಿಲ್ಲವೆಂದು ನನ್ನ ಅಭಿಪ್ರಾಯ. ಈ ದೃಷ್ಟಿಯಿಂದ ನ್ಯಾಯಾಧೀಶರಿಗೆ ಸಂಬಳ ಹೆಚ್ಚುಮಾಡಬೇಕೆಂದು ಪ್ರಾರ್ಥಿಸು ತ್ತೇನೆ.

ನ್ಯಾಯಾಲಯಗಳು ನಡೆಯುತ್ತಿರುವ ಕಡೆ ಸಾಕಷ್ಟು ಸ್ಥಳಾವಕಾಶವಿಲ್ಲ. ಉದಾಹರಣೆಗೆ ತುಮಕೂರಿನಲ್ಲಿ ಒಂದು ಕೋರ್ಟು ನಡೆಯುವ ಸ್ಥಳದಲ್ಲಿ ಮೂರು ಕೋರ್ಟುಗಳು ನಡೆಯುತ್ತಿವೆ; ನ್ಯಾಯಾಧೀಶರು ಕುಳಿತುಕೊಳ್ಳುವುದಕ್ಕೂ ಸರಿಯಾದ ಸ್ಥಳಾವಕಾಶವಿಲ್ಲ. ಸಂಬಂಧಪಟ್ಟ ಮಂತ್ರಿ ಗಳು ತುಮಕೂರಿನ ನ್ಯಾಯಾಲಯಗಳ ಕಟ್ಟಡಗಳ ವಿಚಾರದಲ್ಲಿ ಗಮನ ಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ. ನ್ಯಾಯಾಲಯಗಳಲ್ಲಿ ತೀರ್ಪು ಕೊಡುವುದು ತಡವಾಗಬಾರದು. ನ್ಯಾಯ ದೊರಕು ವುದು ತಡವಾಗಬಾರದೆಂದು ಹೇಳುತ್ತಿದ್ದೇವೆ. ಆದರೆ ತುಮಕೂರಿನಲ್ಲಿ ನಾಲ್ಕೈದು ವರ್ಷಗಳಾ ದರೂ ಅನೇಕ ವ್ಯವಹಾರಗಳು ತೀರ್ಮಾನವಾಗದೆ ನಿಂತಿವೆ. ಎಷ್ಟೋ ಉದಾಹರಣೆಗಳನ್ನು ಕೊಡ ಬಹುದು. ಆದುದರಿಂದ ಒಂದೇಕಡೆ ಕೋರ್ಟುಗಳು ಕೇಂದ್ರೀಕೃತವಾಗುವುದಕ್ಕೆ ಬದಲು ಯಾವ ತಾಲ್ಲೂಕಿನಲ್ಲಿ ಹೆಚ್ಚು ಕೇಸುಗಳಿರುತ್ತವೆ ಅಲ್ಲಿ ಮುನ್ಸೀಫ್ ಮ್ಯಾಜಿಸ್ಟ್ರೇಟ್ ಕೋರ್ಟು ತೆರೆದು ಬೇಗನ್ಯಾಯ ಜನರಿಗೆ ದೊರಕುವಂತೆ ಮಾಡಬೇಕೆಂದು ವಿನಂತಿ. ಇದನ್ನು ನ್ಯಾಯಾಂಗ ಮಂತ್ರಿ ಗಳ ಗಮನಕ್ಕೆ ತರುತ್ತಿದ್ದೇನೆ. ತುಮಕೂರು ಕೋರ್ಟುಗಳಲ್ಲಿರುವ ವ್ಯವಹಾರಗಳ ಪೈಕಿ ಶೇಕಡ 50ರಷ್ಟು ಕುಣಿಗಲು ತಾಲ್ಲೂಕಿಗೆ ಸಂಬಂಧಪಟ್ಟವು. ಆದುದರಿಂದ ಅಲ್ಲಿ ಒಂದು ಕೋರ್ಟನ್ನು ತೆರೆಯಬೇಕೆಂದು ಆಗಾಗ ಹೇಳುತ್ತಿದ್ದೇನೆ. ಈ ಸಭೆಗೆ ಈ ಬಗ್ಗೆ ಒಂದು ಪ್ರಶ್ನೆ ಕೂಡ ಕಳುಹಿಸಿದ್ದೆ, ಅದನ್ನು ಯೋಚನೆ ಮಾಡುತ್ತೇನೆಂದು ಹೇಳುತ್ತಿದ್ದರು; ಆದರೆ ಇನ್ನೂ ಕಾರ್ಯಗತ ಮಾಡಿಲ್ಲ. ಆದಷ್ಟು ಬೇಗ ಕುಣಿಗಲಿನಲ್ಲಿ ಒಂದು ಮುನ್ಸೀಫ್ ಮ್ಯಾಜಿಸ್ಟ್ರೇಟ್ ಕೋರ್ಟನ್ನು ತೆರೆಯಲು ಏರ್ಪಾಡು ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಪಬ್ಲಿಕ್ ಪ್ರಾಸಿಕ್ಯೂಟರುಗಳನ್ನು ಮತ್ತು ಗವರ್ನಮೆಂಟ್ ಪ್ಲೀಡರುಗಳನ್ನು ನೇಮಕ ಮಾಡು ವುದರಲ್ಲಿ ಈ ಸಭೆಯಲ್ಲಿ ಗೊಂದಲವೆದ್ದಿತ್ತು. ಬರಿಯ ಜಾತಿಯ ಆಧಾರದ ಮೇಲೆ ನೇಮಕ ಮಾಡು ತ್ತಿದ್ದಾರೆ, ಅದು ತಪ್ಪು ಎಂಬ ಅಭಿಪ್ರಾಯ ಬಂತು. ಈ ಹುದ್ದೆಗಳು ಕಕ್ಷಿಗಾರರಿಗೆ ನ್ಯಾಯಾಲಯ ಗಳಲ್ಲಿ ನ್ಯಾಯವನ್ನು ದೊರಕಿಸುವುದಕ್ಕೆ ಸಂಬಂಧಪಟ್ಟ ಹುದ್ದೆಗಳು. ಇಂತಹ ಹುದ್ದೆಗಳಿಗೆ ನೇಮಕ ಮಾಡುವಾಗ ಯಾವ ರಾಜಕೀಯಕ್ಕೂ ಒಳಗಾಗದೆ ಒಳ್ಳೆಯ ಅರ್ಹರಾದ ಜನರನ್ನು ನೇಮಕ ಮಾಡಬೇಕೆಂದು ನ್ಯಾಯಾಂಗ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀಮಾನ್ ಲಕ್ಕಪ್ಪನವರು ಹೇಳಿದಂತೆ ನ್ಯಾಯಾಧೀಶರಿಗೆ ವಾಸದ ಮನೆಗಳಿಲ್ಲದೆ ಅನೇಕ ಸಂದರ್ಭಗಳಲ್ಲಿ ಅವರು ಮುಸಾಫಿರಖಾನೆಯಲ್ಲಿರಬೇಕಾಗಿದೆ. ಅಂತಹ ಕಡೆ ಅವರಿಗೆ ಸರಿಯಾದ ಗೃಹವಸತಿ ಏರ್ಪಾಡು ಮಾಡಿಕೊಡಬೇಕು. ಇಷ್ಟು ಹೇಳಲು ನನಗೆ ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸುತ್ತೇನೆ.

†ಶ್ರೀ ಎಚ್. ಆರ್. ಕೇಶವಮೂರ್ತಿ (ಗಂಡಸಿ).—ಅಧ್ಯಕ್ಷರೆ, ನ್ಯಾಯಾಂಗದ ವಿಷಯದಲ್ಲಿ ಅನೇಕ ಸ್ನೇಹಿತರು ಮಾತನಾಡಿದ್ದಾರೆ. ನಾನು ಒಂದೆರಡು ಸಲಹೆಗಳನ್ನು ಕೊಡಲಿಚ್ಛಿಸುತ್ತೇನೆ. ನಮ್ಮ ದೇಶದಲ್ಲಿ ಹಿಂದಿನ ಕಾಲದಲ್ಲಿ ಕೋರ್ಟುಗಳಿರಲಿಲ್ಲ. ಮನುಧರ್ಮ ಶಾಸ್ತ್ರದ ಪ್ರಕಾರ ಯಾರಾದರೂ ಸತ್ತರೆ ಅವರ ಮನೆಯಲ್ಲಿ ಗರುಡಪುರಾಣ ಹೇಳುತ್ತಿದ್ದರು. ಆದರಿಂದ ನ್ಯಾಯ,

ಧರ್ಮ, ಸತ್ಯ ಇವುಗಳನ್ನು ಜನರು ತಿಳಿದುಕೊಳ್ಳುತ್ತಿದ್ದರು. ಪಾಪಭೀತಿಯಿಂದ ಸರಿಯಾಗಿ ನಡೆದು ಕೊಳ್ಳುತ್ತಿದ್ದರು. ಆದರೆ ಈಗ ನ್ಯಾಯಾಸ್ಥಾನಗಳು ಹೆಚ್ಚಾಗಿ ನಮ್ಮ ದೇಶದಲ್ಲಿ ಅಧರ್ಮ ಅನ್ಯಾಯಗಳು ಹೆಚ್ಚುತ್ತಿವೆ. ಆದಕಾರಣ ನನ್ನ ಸಲಹೆಯೇನೆಂದರೆ, ಆದಷ್ಟು ಕೋರ್ಟುಗಳ ಸಂಖ್ಯೆಯನ್ನು ಕಡಮೆ ಮಾಡಬೇಕು. ಸಾಧಾರಣವಾಗಿ ಜಿಲ್ಲಾಮಟ್ಟದಲ್ಲಿ ಇಟ್ಟುಕೊಂಡು ಬಾಕಿ ಕೋರ್ಟುಗಳನ್ನು ತೆಗೆದುಹಾಕಿದರೆ, ಕ್ವಾಲಿಟಿ ಆಫ್ ಜಸ್ಟಿಸ್ ಉತ್ತಮವಾಗುತ್ತದೆ. ಕಕ್ಷಿಗಾರರಿಗೆ ಲೀಗಲ್ ಅಡ್ವೈಸ್ ಹೆಚ್ಚಾಗುತ್ತದೆಂದು ಒಪ್ಪಿಕೊಳ್ಳುತ್ತೇನೆ. ಲಾಯರುಗಳ ಸ್ಟ್ಯಾಂಡರ್ಡ್ ಹೆಚ್ಚುತ್ತದೆ. ಒಟ್ಟಿನಲ್ಲಿ ನ್ಯಾಯದ ಮಟ್ಟವನ್ನು ಉತ್ತಮ ಮಾಡಬೇಕು ಮತ್ತು ದೇಶದಲ್ಲಿ ಅಪರಾಧಗಳು ಕಡಿಮೆ ಆಗುವಂತೆ ಮಾಡಬೇಕು. ಹಳ್ಳಿಯ ರೈತರು ಲಾಯರುಗಳ ಜೇಬುಗಳನ್ನು ತುಂಬುತ್ತಾರೆ. ಲಾಯರುಗಳು ದೇಶದಲ್ಲಿ ಎಲ್ಲ ಭಾಗಗಳನ್ನೂ ಆಕ್ರಮಿಸಿದ್ದಾರೆ. ರೈತರ ಪರವಾಗಿ ಮಾತನಾಡುವುದಾದರೆ, ರೈತ ಕ್ರಿಮಿನಲ್ ಕೇಸನ್ನು ತೆಗೆದುಕೊಂಡು ಹೋದರೆ ಪೋಲೀಸಿನವರು ಮತ್ತು ಲಾಯರುಗಳ ಕಾಟ ಸಾಕು, ತಾನು ಬದುಕಿರಬಾರದು, ಸತ್ತುಹೋಗಬೇಕೆಂದು ಹೇಳುತ್ತಾನೆ. ಕ್ರಿಮಿನಲ್ ಕೇಸಿನಲ್ಲಿ ಅಪರಾಧಿಯಾಗಿ ಬಂದರೆ ಅವನು ನಿರಪರಾಧಿಯಾಗಿದ್ದರೂ ಕೂಡ ಅವರ ಕೈಗೆ ಸಿಕ್ಕಿಕೊಂಡರೆ ಅವನಿಗೆ ಬಹಳ ಕಷ್ಟವಾಗುತ್ತದೆ. ಇದನ್ನು ನಿವಾರಿಸುವುದಕ್ಕೆ ಕ್ರಿಮಿನಲ್ ಕೇಸು ಬಂದರೆ ಆಗಾಗ ಹಿಯರಿಂಗ್ ಕೊಡದೆ ಬೇಗ ತೀರ್ಮಾನ ಕೊಡಲು ಏರ್ಪಾಡು ಮಾಡಬೇಕು. ಒಂದೆರಡು ಹಿಯರಿಂಗ್‌ಗಳಲ್ಲಿ ತೀರ್ಪು ದೊರಕಬೇಕು. ಸಿವಿಲ್ ಕೇಸುಗಳಲ್ಲಿ ವರ್ಷಗಟ್ಟಲೆ ಹಿಯರಿಂಗ್‌ಗಳಾಗಿ, ಕಕ್ಷಿದಾರರ ಹಣವಿಲ್ಲದೆ ಹೆಂಡತಿಯ ಒಡವೆ ವಸ್ತುಗಳನ್ನು ಅಡವಿಟ್ಟು ಕೋರ್ಟಿಗೆ ಬರಬೇಕಾಗುತ್ತದೆ. ಅವರ ಮನೆ ಹಾಳಾಗುತ್ತದೆ. ಇಂತಹ ಸನ್ನಿವೇಶವನ್ನು ತಪ್ಪಿಸುವುದಕ್ಕೆ ಹಿಯರಿಂಗ್‌ಗಳನ್ನು ಹೆಚ್ಚು ಕೊಡಬಾರದು. ಎರಡು ಮೂರು ಹಿಯರಿಂಗ್‌ಗಳಲ್ಲಿ ಸಿವಿಲ್ ಕೇಸುಗಳು ತೀರ್ಮಾನವಾಗಬೇಕು. ಹೀಗೆ ಮಾಡಿದರೆ ಕೋರ್ಟಿಗೆ ಬರುವ ನಿರಪರಾಧಿ ಹಾಗೂ ಅಪರಾಧಿ ಬದುಕಿಕೊಳ್ಳುತ್ತಾನೆ. ನ್ಯಾಯಾಸ್ಥಾನಗಳು ಹೆಚ್ಚಿದಂತೆಲ್ಲ ಲಾಯರುಗಳೂ ಹೆಚ್ಚುತ್ತಾರೆ; ಅವರು ತಮ್ಮ ಜೀವನೋಪಾಯಕ್ಕಾಗಿ ಏನೂ ಜಗಳ ಅಥವಾ ವ್ಯವಹಾರವಿಲ್ಲದಿದ್ದರೂ ಕೂಡ ಜನರನ್ನು ಎಳೆಯುತ್ತಾರೆ. ಹಿಂದಿನ ಕಾಲದಲ್ಲಿ ಸತ್ಯ, ನ್ಯಾಯ, ಧರ್ಮ ಇವಕ್ಕೆ ಜನರು ಬೆಲೆ ಕೊಡುತ್ತಿದ್ದರು, ಆಗ ನ್ಯಾಯಾಲಯಗಳಿಗೆ ಬರುತ್ತಿರಲಿಲ್ಲ. ಹಾಗೆಯೇ ಮುಂದೆ ಜನರು ನ್ಯಾಯಾಸ್ಥಾನಗಳಿಗೆ ಬಾರದೇಯಿರುವ ಹಾಗೆ ತಮ್ಮಂತಹ ದೊಡ್ಡವರು ಮಾಡಬೇಕೆಂದು ನನ್ನ ಪ್ರಾರ್ಥನೆ.

ಈಗ ಕೋರ್ಟುಗಳನ್ನು ಪ್ರತಿ ತಾಲ್ಲೂಕಿನಲ್ಲಿಯೂ ತೆರೆದಿದ್ದೇವೆಂದು ಹೇಳುತ್ತಾರೆ. ಅರಸೀಕೆರೆಯ ಕೋರ್ಟನ್ನು ನೋಡಿದರೆ ಅಲ್ಲಿ ಕಕ್ಷಿಗಾರರು ಕೂರುವುದಕ್ಕೂ ಸ್ಥಳವಿಲ್ಲ. ನ್ಯಾಯಾಲಯ ಕತ್ತಲೆ ಕೋಣೆಯಂತಿದೆ. ಹೀಗಿರುವಾಗ ನ್ಯಾಯಾಧೀಶರ ಮನಸ್ಸು ಹೇಗಿರುತ್ತದೆಂಬುದನ್ನು ಯೋಚಿಸಬೇಕು. ಕೇಸುಗಳ ವಿಚಾರವನ್ನು ಸರಿಯಾಗಿ ಪರಿಶೀಲಿಸಿ ತೀರ್ಮಾನ ಕೊಡುವ ಮನಸ್ಸು ಬರುವುದಿಲ್ಲ. ನ್ಯಾಯಾಧೀಶರು ನ್ಯಾಯ ಕೊಡುವ ಜಾಗ ಚೆನ್ನಾಗಿರಬೇಕು. ಸರಕಾರಕ್ಕೆ ಎಷ್ಟೇ ಕಷ್ಟವಾದರೂ ಅವರಿಗೆ ಒಳ್ಳೆಯ ಕಟ್ಟಡಗಳನ್ನು ಒದಗಿಸಬೇಕು.

ಇನ್ನೊಂದು ವಿಷಯ, ಮುನಸೀಫ್‌ರವರಿಗೆ ಬಹಳ ಕಡಿಮೆ ಸಂಬಳ ಇದೆ. ಅವರಿಗೆ ಕಷ್ಟ ಬಹಳ ಇದೆ. ಸಾಧ್ಯವಾದ ಮಟ್ಟಿಗೆ ಅವರ ಇನೀಶಿಯಲ್ ಪೇ ಜಾಸ್ತಿ ಮಾಡಬೇಕು ಎಂದು ಸೂಚಿಸುತ್ತೇನೆ.

ಇನ್ನು ಎಕ್ಸೈಜ್ ಬಗ್ಗೆ ಅನೇಕ ಸ್ನೇಹಿತರು ಮಾತನಾಡಿ ಬೇಕಾದಷ್ಟು ಹೇಳಿದ್ದಾರೆ. ಪ್ರಾಹಿಬಿಷನ್‌ನಿಂದ ದೇಶ ಹಾಳಾಗಿ ಹೋಗಿದೆ. ಮೈಸೂರು ರಾಜ್ಯದ ಆರ್ಥಿಕ ಸ್ಥಿತಿ ಕೆಟ್ಟುಹೋಗಿದೆ.

ಅಧ್ಯಕ್ಷರು.—ದೇಶ ಹಾಳಾಗಲಿಲ್ಲ. ನಮ್ಮ ಸಂಪತ್ತು ಜಾಸ್ತಿಯಾಗಿದೆ.

ಶ್ರೀ ಹೆಚ್. ಆರ್. ಕೇಶವಮೂರ್ತಿ.—ಆರ್ಥಿಕವಾಗಿ ನಾವು ಬಹಳ ಕಷ್ಟಪಡುತ್ತಿದ್ದೇವೆ. ಪ್ರೊಹಿಬಿಷನ್ ಸರಿಯಾಗಿ ಜಾರಿಗೆ ಬಂದಿಲ್ಲ. ಇದು ಯಶಸ್ವಿಯಾಗಿಲ್ಲ. ಬ್ರಿಟನ್ನಿನಲ್ಲಿ ಒಂದು ಕಾನೂನು ಜಾರಿಗೆ ಬಂದರೆ ಜನ ಅದನ್ನು ಪರಿಪಾಲಿಸುತ್ತಾರೆ. ಒಂದು ವೇಳೆ ಹೆಚ್ಚು ಜನ ಅದನ್ನು ವಿರೋಧ ಮಾಡಿದರೆ ಕಾನೂನು ಜನಪ್ರಿಯವಾಗಿಲ್ಲ ಎಂದು ಅಂಥ ಕಾನೂನು ರದ್ದುಪಡಿಸುತ್ತಾರೆ. ಇಂಥ ನೀತಿ ಬ್ರಿಟಿಷ್ ಪಾರ್ಲಿಮೆಂಟಿನಲ್ಲಿದೆ. ನಮ್ಮ ದೇಶದಲ್ಲಿ ಪಾನನಿರೋಧ ಕಾನೂನು ಜನಪ್ರಿಯವಾಗಿದೆಯೇ ? ಹೆಚ್ಚು ಜನ ಅದನ್ನು ಪರಿಪಾಲಿಸುತ್ತಿದ್ದಾರೆಯೇ ? ಅದು ಉಪಯೋಗವಾಗಿದೆಯೇ ? ಇಲ್ಲ, ಎಂದು ಉತ್ತರ ಹೇಳಬೇಕಾಗುತ್ತದೆ. ನಮ್ಮ ಸರಕಾರ ಫಲಕ್ಕೋಸ್ಕರ, ಪ್ರೆಸ್ಟಿಜಿಗೋಸ್ಕರ ಈ ಕಾನೂನು ಜಾರಿಗೆ ತಂದಿರುತ್ತಾರೆ. ನಿಮ್ಮ ಪ್ರೆಸ್ಟಿಜ್ ಉಳಿಸಿಕೊಳ್ಳಲು ದೇಶ ಹಾಳಾಗುತ್ತಿದೆ, ಜನ ಸಾಯುತ್ತಿದ್ದಾರೆ. ಜನಗಳು ಕಾಯಿಲೆಯಿಂದ ನರಳುತ್ತಿದ್ದಾರೆ. ಅನೇಕಾಲು ರೋಗ ಜಾಸ್ತಿಯಾಗಿದೆ. ಒಬ್ಬರು ಹೇಳಿದ ಹಾಗೆ ಫ್ರೆಂಚ್ ಪಾಲಿಶಕ್ಕೆ ಹುಣಸೇ ಹಣ್ಣು ಹಾಕಿ ಕುಡಿದು ಬಿಟ್ಟು ಜನ ಸತ್ತುಹೋಗುತ್ತಿದ್ದಾರೆ. ಕುಡಿತದ ಪ್ರಭಾವ ಹೀಗೆ ಇದೆ. ಈ ನೀತಿಯಿಂದ ದೇಶಕ್ಕೆ ಡಬ್ಬಲ್ ಅಂದರೆ ದ್ವಿಗುಣಿತ ಲಾಸ್ ಆಗುತ್ತಿದೆ. ಇದನ್ನು ಆದಷ್ಟು ಬೇಗನೆ ತಪ್ಪಿಸಬೇಕು. ಪಾನನಿರೋಧ

(ಶ್ರೀ ಎಚ್. ಆರ್. ಕೇಶವಮೂರ್ತಿ)

ಪೂರ್ತಿಯಾಗಿ ಎಲ್ಲಕಡೆ ಜಾರಿಗೆ ತರಬೇಕು. ಇಲ್ಲದಿದ್ದರೆ ಅದನ್ನು ಬಿಟ್ಟುಬಿಡಬೇಕು. ನಮ್ಮ ಅರಸೀಕೆರೆ ತಾಲ್ಲೂಕಿನಲ್ಲಿ ಒಂದು ನೀರಾ ಅಂಗಡಿ ಇದೆ. ಕಾನೂನು ಪ್ರಕಾರ ಐದಾರು ಮೈಲಿ ಸುತ್ತಮುತ್ತಲಿನ ಪ್ರದೇಶದಿಂದ ನೀರಾ ತಂದು ಮಾರುತ್ತಾರೆ. ಮೂಲೆ ಮೂಲೆಯಲ್ಲಿ ಈಚಲ ಮರ ಕಡಿಯುತ್ತಾರೆ ಮತ್ತು ರಾಜಾರೋಷವಾಗಿ ಸೇಂಧಿ ಮಾರಾಟ ಮಾಡುತ್ತಿದ್ದಾರೆ. ನೇರವಾಗಿ ಅಂಗಡಿ ಇಟ್ಟುಕೊಂಡು ನೂರಾರು ರೂಪಾಯಿ ಸಂಪಾದನೆ ಮಾಡುತ್ತಿದ್ದಾರೆ. ಪಾನೆ ಬೆಲ್ಲ ತಯಾರ ಮಾಡುತ್ತೇವೆಂದು ಹೇಳಿ ಲೈಸೆನ್ಸ್ ತೆಗೆದುಕೊಂಡು ರಾಜಾರೋಷವಾಗಿ ಹಗಲೂ ರಾತ್ರಿ ಸೇಂಧಿ ಮಾರುತ್ತಿದ್ದಾರೆ. ಪೋಲೀಸಿನವರೂ ಸಹ ಇದರಲ್ಲಿ ಶರೀಕ ಇರುತ್ತಾರೆ. ಕಳ್ಳಭಟ್ಟಿ ಸರಾಯಿ ಪೋಲೀಸಿನವರಿಗೆ ಒದಗಿಸುತ್ತಾರೆ. ಆದುದರಿಂದ ಯಾವ ಗಲಾಟೆಗೆ ಅವರು ಸಿಕ್ಕುವ ಹಾಗೆ ಇಲ್ಲ. ಇದನ್ನು ತಡೆಗಟ್ಟಬೇಕೆಂದು ಹೋಂ ಮಿನಿಸ್ಟರ್ ಮತ್ತು ಪ್ರೊಹಿಬಿಷನ್ ಮಿನಿಸ್ಟರ್ ಅವರಿಬ್ಬರನ್ನೂ ಕೇಳಿಕೊಳ್ಳುತ್ತೇನೆ.

ಇನ್ನು ಲೆಜಿಸ್ಲೇಚರ ವಿಷಯದಲ್ಲಿ ಒಂದು ಮಾತು ಹೇಳುತ್ತೇನೆ. ಡೆಪ್ಯೂಟಿ ಮಿನಿಸ್ಟರ್ಸ್ ನೇಮಕ ಮಾಡಿದ್ದೀರಿ. ಅವರ ನೇಮಕದ ವಿರೋಧವಾಗಿ ಮಾತನಾಡುವುದಿಲ್ಲ. ಪ್ರತಿಯೊಬ್ಬ ಡೆಪ್ಯೂಟಿ ಮಿನಿಸ್ಟರ್ ಅವರಿಗೆ ಕಾರು, ಮನೆ ಎಲ್ಲಾ ಸೌಕರ್ಯ ಒದಗಿಸಲಾಗಿದೆ. ಆದರೆ ಅವರಿಗೆ ಕೆಲಸವಿಲ್ಲದೆ ಬೇಜಾರಾಗಿದೆ. ಅವರಿಗೆ ಸರಿಯಾಗಿ ಕೆಲಸ ಕೊಡಿ. ಅವರಿಗೆ ಸಂಬಳ ಜಾಸ್ತಿ ಕೊಡಿ, ಅವರು ಸುಖವಾಗಿ ಸಂತೋಷವಾಗಿ ಇರುವ ಹಾಗೆ ಮಾಡಬೇಕು. ಅವರನ್ನು ಕಡೆಗಣಿಸಬಾರದು. ಜಾಸ್ತಿ ಸಂಬಳ ಮಾಡಿ ಅವರಿಗೆ ಕೈ ತುಂಬಾ ಕೆಲಸ ಕೊಡಿ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಯಾರೋ ಡೆಪ್ಯೂಟಿ ಮಿನಿಸ್ಟರ್‌ರು ಹೀಗೆ ಹೇಳಿ ಎಂದು ಹೇಳಿಕೊಟ್ಟಿದ್ದಾರೆ, ಸ್ವಾಮಿ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಇನ್ನು ಲಾ ಕಾಲೇಜ ಬಗ್ಗೆ ಒಂದು ಮಾತು ಹೇಳಲು ಬಯಸುತ್ತೇನೆ. ಲಾ ಕಾಲೇಜು ಎಜ್ಯುಕೇಶನ್ ಡಿಪಾರ್ಟ್‌ಮೆಂಟ್ ಅಧೀನದಲ್ಲಿದೆ. ಅದು ತಪ್ಪು. ಲಾ ಕಾಲೇಜು ಹೈ ಕೋರ್ಟ್ ವಶಕ್ಕೆ ಕೊಟ್ಟುಬಿಡಬೇಕು. ಒಂದು ಸ್ಟ್ಯಾಂಡರ್ಡ್ ಇಟ್ಟುಕೊಂಡು ಲಾ ಕಾಲೇಜು ನಡೆಸಲು ಅನುಕೂಲವಾಗುತ್ತದೆ. ಲಾ ಮಿನಿಸ್ಟರ್ ಅವರಿಗೆ ಈ ಸಲಹೆ ಮಾಡುತ್ತೇನೆ. ಇದಕ್ಕೆ ಅವರು ಗಮನ ಕೊಡುತ್ತಾರೆಂದು ನಾನು ಭಾವಿಸಿದ್ದೇನೆ.

ನನಗೆ ಮಾತನಾಡಲು ಅವಕಾಶ ಉಳಿದಿಲ್ಲ. ಹೆಚ್ಚಿಗೆ ಹೇಳಲು ಕಾಲ ಇಲ್ಲ. ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಅಧ್ಯಕ್ಷರಿಗೆ ವಂದನೆಗಳನ್ನು ಅರ್ಪಿಸಿ ನನ್ನ ಮಾತು ಮುಗಿಸುತ್ತೇನೆ.

†Sri M. V. RAMA RAO (Minister for Law).—Sir, I wish to deal first of all with the views expressed in regard to the necessity for freeing the Legislature Secretariat from the control, as it was called, of the Government. The hon'ble member Sri V. S. Patil who made reference to it made certain citations and expressed his view that the Secretariat of the Mysore Legislature is not free from the control of the executive Government. All that I wish to say with reference to this is that you, Sir, as the Speaker of this House and the custodian of the privileges and the rights that belong to the members of this House, happen to know that there has probably been as far as I can remember and perhaps as far as you can remember, no occasion on which Government has had either to interfere as it is said with the working of the Legislature Secretariat in that sense or to treat any proposals emanating from the Legislature Secretariat with other than the consideration that would be due to such proposals. Before a proposal from the Legislatnre Secretariat is received by the Government it would have been put up to both the Hon'ble Speaker and the Hon'ble Chairman of the Legislative Council who, together, form, what for administrative purpose, is known as the Board of the Presiding Officers. Any proposal which emanates from the Board would receive the most earnest consideration of Government and there is hardly any reason to doubt that Government would

be no less anxious to consider those proposals in the manner in which they ought to be considered.

The position in regard to the Demand for Grant for expenditure in respect of the Legislature was one of the subjects on which certain observations were made. You, Sir, if I may say so, rightly observed

5-30 P.M.

that in so far as the working of the Legislature is concerned and the expenditure which is necessary for the proper functioning of the Legislature is concerned, that matter should not occupy the attention or the time of this House more than is really necessary and you were pleased to suggest that if Hon'ble Members found occasion to bring to your notice any point which they considered of sufficient importance, you would always be ready and willing to listen to them and give your most earnest consideration to whatever they had to say. I must say that I am in general agreement with what you have suggested and that makes my task very much easier than it would be if I had to make myself answerable on the floor of the House for every question that was asked by Hon'ble Members or answerable for everything that was done in the Legislature Secretariat under the immediate directions of the Presiding Officers. As a matter of fact, the Legislature Secretariat does, in fact, enjoy a measure of what may be called administrative autonomy which is not enjoyed by other Departments of the Government Secretariat. Therefore, I should conclude by saying that I should like to disabuse the minds of Hon'ble Members of any possible impression that the Legislature Secretariat is not allowed to function as it should.

The Hon'ble Member Sri V. S. Patil suggested that action should be taken to initiate legislation for providing for the functioning of the Legislature Secretariat as contemplated in the Constitution. Subject to correction, I understand that no such legislation has been initiated in any other State of the Indian Union. We are actually at the moment trying to inform ourselves what action has been taken in this behalf and would like to give further thought to the matter before stating on the floor of the House that action would be taken to initiate legislation in this behalf. The matter is of such importance that I would not venture to say that it should be regulated in the particular manner proposed.

Next, Sir, I would propose to deal with the observations made in regard to Administration of Justice. The main point that was urged by most of the Hon'ble Members who spoke and expressed their views in relation to the Administration of Justice was that the laws' delays should be reduced still further. I am in entire agreement with the expression of those views. I am sure and there is hardly any reason to doubt that the High Court as representing the Judiciary are equally anxious that laws' delays should be eliminated and to achieve that object from time to time circular instructions have been issued to all the subordinate courts by the High Court prescribing the time within which ordinarily different classes of cases shall be disposed of and periodically

(SRI M. V. RAMA RAO)

reports are obtained of the progress of work made in different subordinate courts and at intervals one of the Judges of the High Court also inspects the subordinate courts throughout the State. In addition to the inspection work of the courts by the Judges of the High Court, the District Judges also carry out periodical inspections of the subordinate courts within the jurisdiction of the respective district courts. It is likely that there has been in recent years a certain amount of increase in the total volume of litigation and it has to be ascertained whether there has been any marked increase in what may be called the pace of disposal in the different kinds of courts of various classes of cases. It is within the knowledge of Hon'ble Members who have acquaintance of the law courts that a large number of cases are disposed of in a summary way. For instance, several offences such as non-observance of traffic rules and regulations and many other offences under the Police Act would be tried in a summary way by the courts of Magistrates. A very large number of such cases would be disposed of every month and in the course of the year side by side with that, there would be more serious cases for which more time would be necessary and in which summary procedure could not be adopted and in those cases as much time as would be necessary for the proper trial of the cases and just disposal of the cases would have to be taken by the Presiding Officer of the Court before he can say he has disposed of the work. Having regard to different factors which govern the disposal of cases of diffefent kinds, it cannot be laid down as a general proposition that any hard and fast rule can be prescribed in regard to the time limit within which a case can be disposed of. It does not in fact work in practice. Even the one-year rule which has been prescribed for the disposal of civil suits by courts, while assuring a certain amount of disposal of cases in the aggregate, still leaves a considerable residue of cases which are in fact one-year old and which the Presiding Officer of the Court does not find himself in a position to take up for trial owing to the total volume of work in his hands. Similarly, in the courts of Magistrate, there is what may be called six-months rule in regard to pendency of criminal cases and there although it is the endeavour of the Presiding Magistrate to dispose of cases on his files as expeditiously as possible various factors over which control is by the very nature limited would operate so as to leave a considerable number of cases which would in fact be more than six months old on the file of the Magistrates. From such information as I have been able to obtain in regard to these matters from the High Court I find that on the whole it must be said that the disposal of cases in the courts has been satisfactory and wherever it has been found that owing to other causes and other adverse factors there is an accumulation of work of any kind on the file of a court, there has never been any hesitation on the part of the Government to agree to the proposals whenever they are received from the High Court for the appointment of an additional presiding Officer for the court or the creation of what may

be called an additional court. Therefore, I would on the whole say that while I share in full the feelings of the Hon'ble Members that the delay which has been experienced in the law courts should be reduced, still I must say that there certainly has not been any noticeable increase in the time taken for the disposal of the usual types of cases.

Then, the next matter that was mentioned was about the accommodation for Court buildings. In regard to accommodation for Court buildings, I have satisfied myself that in certain areas, the position in regard to accommodation provided in holding Courts leaves a great deal to be desired. While Government is naturally anxious that suitable accommodation should be provided, if necessary by the construction of new buildings where suitable buildings do not exist or cannot be obtained even on rent, there are as Hon'ble Members will easily perceive, limitations in the way of Government going the whole length, limitations imposed by considerations of the amount of money that can be set apart in a year's Budget for purpose of this kind. As Hon'ble Members are aware, the tempo of constructional activity is such that even buildings for accomodating Law Courts, Courts of Justice, have to take only their proper share in the total amount of building constructi n that can be under-taken in the course of a year. But, I am in a position to in form the House that we have been able to make a small provision this year for providing for the construction of buildings in the areas where they are found to be necessary. As a matter fact, the proposals for the construction of buildings for locating Courts, for making additions to the existing accommodation in Courts and for providing residential accommodation for the presiding officers of the Courts are quite considerable and would probably cost as much as 2½ crores to 3 crores of rupees. Therefore, there is this necessity of phasing out the programme of building construction, of making as much provision as possible in a year's Budget, and that I have said, we have attempted to do. This year, I hope, we will utilise the provision actually made.

The other observation that was made was, that in regard to the work of the Courts a certain amount of difficulty was being experienced in certain Courts owing to lack of supply of the forms which ought to be used in the Courts. I believe the supply of stationery to the Courts is done in the judicial department itself, and if any hardship or inadequate supplies have been experienced in any particular Court, there should be no difficulty whatever in removing that hardship or that difficulty. Actually, I may inform the House that, as recently as, early part of last year, if my memorary serves me right, a small printing press was added as an adjunct to the establishment of the High Court. I do not believe that Press would be able to undertake any work such as the printing of forms and things of that kind that would be used in the Courts. But in regard to the printing of the cause lists of the High Court itself, and I daresay, printing certain other ancillary matters used by the High Court, that Press is found useful: and, I have been informed that to that extent work in the Government Printing Press has lessened and therefore the position should have actually improved since that printing press has

(Sri M. V. Rama Rao)

been added to the High Court. I do not apprehend that there is any difficulty in regard to the supply of these forms, and if any particular difficulty has been experienced anywhere, it could be very easily remedied, and I have no hesitation in saying that it will be so remedied.

Then, it was suggested that the number of Courts should be decreased. I believe it was the last speaker, Sri H. R. Kesavamurthy, who said that the number of Courts, as far as possible, should be decreased, and that the Courts should be located in district headquarters. A contrary view has been, time and again expressed on the floor of the House that as far as possible the Courts should be located in as many place as possible, wherever there is a reasonable volume of work which would justify the establishment of a Court. I should say, that while it is difficult to lay down any rule as to whether there should be a Court in every taluk headquarter, or going to the other extreme and agreeing with Mr. Kesavamurthy that all the Courts......

ಶ್ರೀ ಎಚ್. ಆರ್. ಈಶ್ವರಮೂರ್ತಿ.—ನಾನು ರೈತರ ಪರವಾಗಿ ಮಾತನಾಡುತ್ತೇನೆ. ಅವರು ಲಾಯರುಗಳ ಪರವಾಗಿ ಮಾತನಾಡುತ್ತಾರೆ,

Sri M. V. RAMA RAO.—All the Courts should be located at the district headquarters, in between these two propositions, I have no hesitation in saying that there should be no objection to establish a Court, either a Civil Court or a Magistrate's Court, or a combined Court, wherever the volume of work, originating from that area to be found on the files of the existing Courts, would justify the establishment of a Court in a different locality or place. Actually, various recommendations have in the past been made by a committee which had been set up for the purpose. But it happens that all those recommendations relate only to the erstwhile Mysore State and to that extent, the necessities of the integrating areas into the establishment of new Courts or the dispersal of the existing Courts from the same places would have to be examined further before action could be taken either to shift Courts from the places where they are located or establish new or additional Courts at different places. The entire question has to be examined in the context not merely of establishing new Courts because there is a public demand for additional courts—while that is a very important consideration, due consideration has also to be given to the other aspects where it will result in improving the quality of justice that would be meted out if courts are established in one or the other way.

Then, a suggestion was made that the salary scales of presiding officers of Courts should be increased. That is a matter on which I shall not be in a position to state anything here and now. It is a matter which must engage the consideration of the Government from time to time, and whenever it is found that these salary scales require to be increased in order to ensure that suitable type of persons will become available for appointment to posts in the judicial service, whenever it appears that an increase in the salary scales should be resorted to, that matter would be taken up for consideration.

Then the Hon'ble members Sri B. L. Gowda made a reference to the Resident Magistrates of erstwhile Bombay State and their equation with the Munsiffs of the erstwhile Mysore State. Among the many other things he mentioned, this was the earlier point. All these questions relating to the service matters of the presiding officers of courts and more especially of the subordinate judicial officers below the rank of District Judges, are matters which relate, as I understand them, to the preparation and publication of the final list of Inter State Seniority list of these officers. I have some hesitation in saying everything that I know about this matter on the floor of this House for two reasons. The first and foremost is that Government have under active consideration at present the physical task of preparation of the Inter-State Seniority list finally for publication by the Government of India giving effect to the decisions taken by the Government of India and communicated to the State Government. As the Government is actually engaged in the preparation of this final Inter-State Seniority list for being published by the Govenment of India, I would not like to say more than is necessary. The other reason is that one or two writ petitions by judicial officers have been filed in the High Court of Mysore against the Chief Justice of the High Court of Mysore, Registrar of the High Court of Mysore and the Government of Mysore in regard to this very matter and therefore I would prefer to avoid discussing the merits of the claims either on behalf of Resident Magistrates of erstwhile Bombay State or on behalf of Munsiffs of the erstwhile Mysore State. As I said, the Governmet of India have taken decisions on the representations made by the officers coming from different parts of integrating areas and those decisions have been communicated to this State and those decisions will be conformed to and Inter-State Seniority List of judicial officers below District Judges is being prepared in accordance with the decision of the Government of India and will be published in due course and I hope as early as possible.

The Civil Courts Act which the Mysore legislature has passed has to receive the assent of the President and as soon as the Civil Courts Act is brought into force the question of establishing District Courts at the District Headquarter places where District Courts at present do not exist would be taken up for consideration. The reason for this is that as hon'ble members would remember the Civil Courts Act contemplates a different distribution of the pecuniary jurisdiction of the three classes of courts and they would require a very considerable redistribution of different kinds of work which at present are on the files of the existing District Courts and Courts subordinate thereto. It would be wise to see how much work would devolve upon the court of District Judges if the proposals contained in the Civil Courts Act which the Mysore legislature has passed are given effect to and the work redistributed in the manner contemplated under that Act. Therefore I content myself with saying that the question of establishment of District Courts at either places mentioned by Hon'ble members would be considerd in due course and action would be taken to establish District Courts wherever it is found

(SRI M. V. RAMA RAO)

necessary and would be justified by the volume of work which the District Court whould be having.

I wish to answer as much as I can all that has been said in regard to the first Demand that was moved in this House, namely, Excise. I found that a large number of Hon'ble members spoke on prohibition. I would say that this Demand deals with State Excise duties and no doubt the policy of prohibition and the policy of excise are related in a certain manner, I would consider it not the proper occasion to reply to all that has been said in regard to the alleged failure of the policy of prohibition and the need which has been stressed by every Hon'ble member for enforcing it in a more effective and rigorous fashion. I am grateful to all the Hon'ble members who have expressed themselves in favour of enforcing prohibition successfully and if it is found impossible, to scrap it. We have not yet found it impossible to scrap it. While I appreciate the endeavour made by the Hon'ble member to point out to the Government the lapses and difficulties in the enforcement.

Sri C. J. MUKKANNAPPA.—Sir,.........

Sri M. V. RAMA RAO.—I think I have to conclude by six o' clock.

Mr. SPEAKER.—I have a feeling that I have to put this Demand to vote at six o' clock.

Sri M. V. RAMA RAO.—The report of the Tekchand Committee appointed by the Government of India is being anticipated and as soon as it is received, the question of continuance of the policy of prohibition would be considered and a decision taken and given effect to. With these observations, I commend these demands for the acceptance of the House.

Mr. SPEAKER.—The question is "That the respective sums not exceeding the amounts shown in the list of demands circulated to members be granted to defray the charges which will come in course of payment during the financial year ending with 31st March 1965 in respect of demands Nos. 3, 9 and 11."

The motion was adopted.

As directed by the Chair, the motion for demands for Grants which were adopted by the House are reproduced below :—

DEMAND NO. 3.—STATE EXCISE.

10. *State Excise Duties.*

"That a sum not exceeding Rs. 22,84,500 be granted to the Government to defray the charges which will come in course of payment during the financial year for the period ending 31st day of March 1965, in respect of 'State Excise Duties'."

DEMAND NO. 9.—STATE LEGISLATURE AND ELECTIONS.

18. *Parliament, State and Union Territory Legislatures.*

"That a sum not exceeding Rs. 27,09,400 be granted to the Government to defray the charges which will come in course of payment during the financial year for the period ending 31st day of March 1965, in respect of 'Parliament State and union Territory Legislatures'."

DEMAND NO. 11.—ADMINISTRATION OF JUSTICE.

21. *Administration of Justice.*

"That a sum not exceeding Rs. 93,05,000 be granted to the Government to defray the charges which will come in course of payment during the financial year for the period ending 31st day of March 1965, in respect of Adminstration of Justice'."

Mr. SPEAKER.—The House will now adjourn and meet again tomorrow at 12 noon.

The House adjourned at Six of the Clock to meet again at Twelve of the Clock on Friday, the 20th March 1964.

WD 2526–GPP—900—12-6-1964